
ಭಾನುವಾರ, ಸೆಪ್ಟೆಂಬರ್ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 271 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ವನ್ಯಜೀವಿ ಲೋಕದಲ್ಲಿ 'ಭರವಸೆ ಮೂಡಿಸದ ಹೆಜ್ಜೆಗಳು'



'ಜಿಎಸ್‌ಟಿ ವ್ಯಾಪ್ತಿಗೆ ಪೆಟ್ರೋಲ್, ಡೀಸೆಲ್: ರಾಜ್ಯಗಳ ಒಪ್ಪಿಗೆ ಅಗತ್ಯ' 8
ಜಮ್ಮು–ಕಾಶ್ಮೀರ ಕೇಂದ್ರಾಡಳಿತ ಪ್ರದೇಶ ನಿರ್ಧಾರ ತಾತ್ಕಾಲಿಕ: ಪ್ರಧಾನಿ ಮೋದಿ
ರಾಜಭವನದ ತನಿಖೆಗೆ ಭ್ರಷ್ಟ ಅಧಿಕಾರಿ: ಎಚ್‌ಡಿಕೆ 5
'ಅಧಿಕಾರಕ್ಕೆ ಬಂದರೆ ರಾಜ್ಯ ಸ್ಥಾನಮಾನ' 9

ಜಗತ್ತಿನಲ್ಲಿ ಸುದೀರ್ಘ ದುಡಿಮೆ, ಕೆಲಸದ ಒತ್ತಡ ಭಾರತೀಯರಲ್ಲಿಯೇ ಹೆಚ್ಚು

ಕೆಲಸದ ಹೊರೆ; ಬದುಕಿಗೆ ಬರೆ

ಒಳನೋಟ

• ಬಿ.ವಿ.ಶ್ರೀನಾಥ್


26 ವರ್ಷದ ಅನ್ನಾ ಸೆಬಾಸ್ಟಿಯನ್ ಪೆರಾಯಿಲ್ ಎಲ್ಲರಂತೆಯೇ ಜೀವನದಲ್ಲಿ ಹಲವು ಕನಸು ಕಂಡಿದ್ದರು. ಅಪಾರ ಶ್ರಮದಿಂದ ಚಾರ್ಟೆಡ್ ಅಕೌಂಟೆಂಟ್ ಪರೀಕ್ಷೆ ಪಾಸು ಮಾಡಿ, ಪುಣೆಯ ಅರ್ನ್ಸ್ಟ್ ಆ್ಯಂಡ್ ಯಂಗ್ (ಇವೈ) ಕಂಪನಿಯಲ್ಲಿ ಲೆಕ್ಕ ಪರಿಶೋಧಕಿಯಾಗಿ ಉದ್ಯೋಗಕ್ಕೆ ಸೇರಿದ್ದರು. ಅದು ಅವರ ಮೊದಲ ಕೆಲಸ. ಸಹಜವಾಗಿಯೇ ಅತೀವ ಉತ್ಸಾಹದಿಂದ ಕೆಲಸ ಮಾಡುತ್ತಿದ್ದ ಅವರಿಗೆ ಮ್ಯಾನೇಜರ್‌ಗಳು ಹೆಚ್ಚು ಹೆಚ್ಚು ಕೆಲಸ ವಹಿಸುತ್ತಿದ್ದರು. ಅಷ್ಟು ಕೆಲಸದ ಹೊರೆ ನಿಭಾಯಿಸುವುದು ಕಷ್ಟವೆನಿಸಿದರೂ ಹೆಚ್ಚು ಶ್ರಮ ಪಟ್ಟರೆ ತನಗೆ ಉತ್ತಮ ಭವಿಷ್ಯ ಇರುತ್ತದೆ ಎಂದು ಭಾವಿಸಿದ ಅವರು, ರಾತ್ರಿ ಹಗಲು ಕೆಲಸ ಮಾಡಿದರು. ಆದರೆ, ಆ ಅತಿಯಾದ ಕೆಲಸವೇ ಅವರ ಜೀವಕ್ಕೆ ಮುಳುವಾಯಿತು. ವೃತ್ತಿ ಆರಂಭಿಸಿದ ನಾಲ್ಕೇ ತಿಂಗಳಲ್ಲಿ ಅವರ ಜೀವನವೇ ಅಂತ್ಯಗೊಂಡಿತು.

ತನ್ನ ಮಗಳ ಸಾವಿಗೆ ಕೆಲಸದ ಒತ್ತಡ ಹಾಗೂ ನಿದ್ರಾಹೀನತೆ ಕಾರಣ ಎಂದು ಅನ್ನಾ ಅವರ ತಾಯಿ ಅನಿತಾ ಅಗಸ್ಟೀನ್ ಅವರು ಇವೈ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. 'ಇದು ವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಯಾಗಿದ್ದು, ಮ್ಯಾನೇಜರ್‌ಗಳು ಮತ್ತು ತಂಡಗಳ ಆಚೆಗಿನ ವಿಚಾರವಾಗಿದೆ. ಉದ್ಯೋಗದ ವಾತಾವರಣ, ಕೆಲಸದ ಒತ್ತಡ ಮತ್ತು ಸುದೀರ್ಘ ಅವಧಿಯ ದುಡಿಮೆ ತನ್ನ ಮಗಳ ಮೇಲೆ ಪರಿಣಾಮ ಬೀರಿವೆ' ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಕೆಲಸ ಬಿಡು ಎಂದರೂ ಒಪ್ಪದಿದ್ದ ತನ್ನ ಮಗಳು ನೌಕರಿಯಿಂದಾಗಿಯೇ ಪ್ರಾಣ ಬಿಟ್ಟಿದ್ದಾಳೆ ಎಂದು ಅನ್ನಾ ತಂದೆ ಸಿಬಿ ಜೋಸೆಫ್ ಅಳಲು ತೋಡಿಕೊಂಡಿದ್ದಾರೆ.

ಅನ್ನಾ ಪ್ರಕರಣ ಮೊದಲನೆಯದೇನಲ್ಲ. ಐಟಿ ರಾಜಧಾನಿ ಬೆಂಗಳೂರಿನಲ್ಲಿ ಇಂಥವರ ಸಂಖ್ಯೆ ದೊಡ್ಡದಾಗಿದೆ. ಜೀವನ ನಿರ್ವಹಣೆ ಮತ್ತು ಉತ್ತಮ ಬದುಕಿನ ಕನಸು ಹೊತ್ತು ಕೆಲಸಕ್ಕೆ ಸೇರುತ್ತಿರುವವರ ಪೈಕಿ ಅನೇಕರು ಸುದೀರ್ಘ ಕೆಲಸದ ಅವಧಿ, ಹೆಚ್ಚುವರಿ ಹೊಣೆಗಾರಿಕೆ, ಹಗಲು ರಾತ್ರಿಗಳ ಪರಿವೆ ಇಲ್ಲದ ಕೆಲಸ, ನಿದ್ರಾಹೀನತೆಯಿಂದ ಬಳಲಿ ಚಿಕ್ಕ ವಯಸ್ಸಿನಲ್ಲಿಯೇ ಹಲವು ಕಾಯಿಲೆಗಳಿಗೆ ಗುರಿಯಾಗುತ್ತಿರುವುದು, ಜೀವಕ್ಕೆ ಅಪಾಯ ತಂದುಕೊಳ್ಳುತ್ತಿರುವುದು ಕೆಲಸದ ಸ್ಥಳದಲ್ಲಿನ ಒತ್ತಡದ ವಾತಾವರಣಕ್ಕೆ ಕನ್ನಡಿ ಹಿಡಿಯುತ್ತಿದೆ.

ಭಾರತದ ಯುವ ಜನರು ಹಾಗೂ ವೃತ್ತಿಪರರ ಮುಂದಿರುವ ಮುಖ್ಯ ಸವಾಲುಗಳಲ್ಲಿ ವೃತ್ತಿ ಬದುಕು ಮತ್ತು ವೈಯಕ್ತಿಕ ಬದುಕಿನ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಕೂಡ ಒಂದಾಗಿದೆ. 'ದಿನಾ ಬೆಳಿಗ್ಗೆ 9 ಗಂಟೆಗೆ ಕೆಲಸ ಆರಂಭಿಸಿದರೆ ಮಧ್ಯರಾತ್ರಿವರೆಗೆ ಮಾಡುತ್ತಲೇ ಇರುತ್ತೇವೆ. ಊಟ, ಶೌಚಕರ್ಮ, ನಿದ್ದೆಗೂ ಸಮಯ ಇರುವುದಿಲ್ಲ. ರಜೆ ಸಿಗುವುದು ಅಪರೂಪ. ಹಬ್ಬ ಹರಿದಿನದಂದು ನೆಂಟರಿಷ್ಟರನ್ನು ನೋಡಲು ಸಮಯ ಇಲ್ಲ.

6ನೇ ಪುಟ ನೋಡಿ



ಜಾಗತಿಕ ಮಟ್ಟದಲ್ಲಿ ಉದ್ಯೋಗಿಗಳ ಸ್ಥಿತಿ

23% ಕೆಲಸದಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುವವರ ಪ್ರಮಾಣ

₹743 ಲಕ್ಷ ಕೋಟಿ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯ ಕೊರತೆಯಿಂದ ಜಾಗತಿಕ ಆರ್ಥಿಕತೆಗೆ ಉಂಟಾಗುತ್ತಿರುವ ನಷ್ಟ (ಜಿಡಿಪಿಯ ಶೇ 9ರಷ್ಟು)

15% ಅಸಂತುಷ್ಟ ಕೆಲಸಗಾರರ ಪ್ರಮಾಣ

ದತ್ತಾಂಶ: ಗ್ಯಾಲಪ್ ವರದಿ

ನಿರ್ಮಲಾ ವಿರುದ್ಧ ಎಫ್‌ಐಆರ್

ಚುನಾವಣೆ ಬಾಂಡ್ ಮೂಲಕ ₹8 ಸಾವಿರ ಕೋಟಿ ಸುಲಿಗೆ ಆರೋಪದ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೆ ಬಾಂಡ್ ಹೆಸರಿನಲ್ಲಿ ಉದ್ಯಮಗಳ ಮೇಲೆ ಒತ್ತಡ ತಂದು ಕೋಟ್ಯಂತರ ರೂಪಾಯಿ ಸುಲಿಗೆ ಮಾಡಲಾಗಿದೆ' ಎಂಬ ಆರೋಪದ ಅಡಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿಜೆಪಿ ಕೇಂದ್ರ–ರಾಜ್ಯ ಘಟಕದ ಪದಾಧಿಕಾರಿಗಳ ವಿರುದ್ಧ ತಿಲಕ್‌ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಜನಾಧಿಕಾರ ಸಂಘರ್ಷ ಪರಿಷತ್' ಸಹ ಅಧ್ಯಕ್ಷ ಆದರ್ಶ್ ಆರ್. ಅಯ್ಯರ್ ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ್ದ 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಅವರು, ಎಫ್‌ಐಆರ್ ದಾಖಲಿಸಲು ಶುಕ್ರವಾರ ಆದೇಶಿಸಿದ್ದರು.


ನ್ಯಾಯಾಲಯದ ಸೂಚನೆ ಬೆನ್ನಲ್ಲೇ ಶನಿವಾರ ಸಂಜೆ ಎಫ್‌ಐಆರ್ ಆಗಿದೆ. ಚುನಾವಣಾ ಬಾಂಡ್‌ಗಳ ಮೂಲಕ ಬಹುಕೋಟಿ ದೇಣಿಗೆ ಪಡೆಯಲು ಇ.ಡಿಯನ್ನು ದುರ್ಬಳಕೆ ಮಾಡಿಕೊಂಡ ಆರೋಪದ ಅಡಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಸಾಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಗಳು, ಆಡಳಿತ ನಡೆಸುತ್ತಿರುವ ರಾಜಕೀಯ ಪಕ್ಷದಲ್ಲಿ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳು ಸೇರಿ ಚುನಾವಣೆ ಬಾಂಡ್ ಹೆಸರಿನಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಸಿಇಒ) ಹಾಗೂ ವ್ಯವಸ್ಥಾಪಕ ನಿರ್ದೇಶಕರಿಂದ (ಎಂ.ಡಿ) ಒತ್ತಾಯಪೂರ್ವಕ ಹಾಗೂ ಒಳಸಂಚು ರೂಪಿಸಿ ₹8 ಸಾವಿರ ಕೋಟಿ ಸುಲಿಗೆ ಮಾಡಲಾಗಿದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ನಿರ್ಮಲಾ ಸೀತಾರಾಮನ್ ಅವರು ಇ.ಡಿ ಅಧಿಕಾರಿಗಳ ನೆರವು ಪಡೆದು ಬಿಜೆಪಿ ಕೇಂದ್ರ ಘಟಕ ಹಾಗೂ ರಾಜ್ಯ ಘಟಕದ ಲಾಭಕ್ಕಾಗಿ ಸಾವಿರಾರು ಕೋಟಿ ಸುಲಿಗೆ ಮಾಡಿದ್ದಾರೆ. ಅಲ್ಲದೇ ಕಾರ್ಪೊರೇಟ್ ಕಂಪನಿಗಳ ಮೇಲೆ ದಾಳಿ ಮಾಡಿಸಿದ್ದರು. ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಡಿದ್ದರು. ಸಿಇಒ, ಎಂ.ಡಿಗಳನ್ನು ಬಂಧಿಸುವಂತೆ ಮಾಡಿದ್ದರು. ಇ.ಡಿ ದಾಳಿಗೆ ಹೆದರಿದ್ದ ಉದ್ಯಮಿಗಳು ಚುನಾವಣೆ ಬಾಂಡ್ ಖರೀದಿಸಿದ್ದರು' ಎಂದು ವಿವರಿಸಲಾಗಿದೆ.

ದೂರಿನಲ್ಲಿ ಏನಿದೆ: 'ರಾಷ್ಟ್ರೀಯ, ಬಹುರಾಷ್ಟ್ರೀಯ ಮತ್ತು ಒಂದಕ್ಕಿಂತ ಹೆಚ್ಚು ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಂಪನಿಗಳ ಎಂ.ಡಿ, ಸಿಇಒಗಳನ್ನು ಚುನಾವಣಾ ದೇಣಿಗೆಯ ಹೆಸರಿನಲ್ಲಿ, ಸಚಿವೆ ನಿರ್ಮಲಾ ಸೇರಿದಂತೆ ಸಾಂವಿಧಾನಿಕ ಹುದ್ದೆಯಲ್ಲಿರುವ ಹಲವರು ಸುಲಿಗೆ ಮಾಡಿದ್ದಾರೆ. ವೇದಾಂತ ಕಂಪನಿಯ ಮುಖ್ಯಸ್ಥ ಅನಿಲ್ ಅಗರ್‌ವಾಲ್ ಅವರ ಮೇಲೆ ಇ.ಡಿ ಹಲವು ಬಾರಿ ದಾಳಿ ಮಾಡಿತ್ತು. ಇದರಿಂದ ಕಂಗೆಟ್ಟಿದ್ದ ಅಗರ್‌ವಾಲ್ ಚುನಾವಣಾ ಬಾಂಡ್ ಖರೀದಿಸಿದ್ದರು' ಎಂದು ಆದರ್ಶ್ ಆರ್. ಅಯ್ಯರ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಖಾಸಗಿ ದೂರಿನಲ್ಲಿ ಆರೋಪಿಸಿದ್ದರು.

5ನೇ ಪುಟ ನೋಡಿ



ಆರೋಪಿಗಳು ಯಾರ್‍ಯಾರು?


ನಿರ್ಮಲಾ ಸೀತಾರಾಮನ್


ವಿಜಯೇಂದ್ರ


ನಳಿನ್ ಕುಮಾರ್

- ಎ–1: ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ
- ಎ–2: ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು, ನವದೆಹಲಿ
- ಎ–3: ಬಿಜೆಪಿ ರಾಷ್ಟ್ರೀಯ ಘಟಕದ ಪದಾಧಿಕಾರಿಗಳು, ನವದೆಹಲಿ
- ಎ–4: ನಳಿನ್‌ಕುಮಾರ್ ಕಟೀಲ್, ಮಾಜಿ ಸಂಸದ, ದಕ್ಷಿಣ ಕನ್ನಡ
- ಎ–5: ಬಿ.ವೈ.ವಿಜಯೇಂದ್ರ, ರಾಜ್ಯ ಘಟಕದ ಅಧ್ಯಕ್ಷ, ಬಿಜೆಪಿ
- ಎ–6: ಬಿಜೆಪಿ ರಾಜ್ಯ ಘಟಕದ ಪದಾಧಿಕಾರಿಗಳು, ಬೆಂಗಳೂರು

ಯಾವ ಸೆಕ್ಷನ್‌ಗಳ ಅಡಿ ಪ್ರಕರಣ?

ಭಾರತೀಯ ದಂಡ ಸಂಹಿತೆಯ (ಐಪಿಸಿ) ಕಲಂ

- 384 –ಸುಲಿಗೆ
- 120ಬಿ–ಕ್ರಿಮಿನಲ್ ಪಿತೂರಿ
- 34–ಏಕ ಉದ್ದೇಶದಿಂದ ಅನೇಕ ವ್ಯಕ್ತಿಗಳು ಸೇರಿ ಮಾಡಿದ ಕೃತ್ಯ

ಪ್ರಧಾನಿ ನರೇಂದ್ರ ಮೋದಿ, ಸಚಿವರಾದ ನಿರ್ಮಲಾ ಸೀತಾರಾಮನ್, ಎಚ್‌.ಡಿ. ಕುಮಾರಸ್ವಾಮಿ ರಾಜೀನಾಮೆ ನೀಡಲಿ
ಸಿದ್ದರಾಮಯ್ಯ, ಮುಖ್ಯಮಂತ್ರಿ

₹279 ಕೋಟಿ ಸುಲಿಗೆ: ಉಲ್ಲೇಖ

'ಕಾರ್ಪೊರೇಟ್ ಅಲ್ಯುಮಿನಿಯಂ ಹಾಗೂ ಕಾಪರ್ ಜೈಂಟ್, ಎಂಎಸ್ ಸ್ಟೇರ್ ಲೈಟ್, ವೇದಾಂತ ಕಂಪನಿಗಳಿಂದ 2019ರ ಏಪ್ರಿಲ್‌ನಿಂದ 2022ರ ಆಗಸ್ಟ್ ಮಧ್ಯೆ ಹಾಗೂ 2023ರ ನವೆಂಬರ್‌ನಲ್ಲಿ ಒಟ್ಟು ₹230.15 ಕೋಟಿ ಸುಲಿಗೆ ಮಾಡಲಾಗಿದೆ. ಅರವಿಂದ್ ಫಾರ್ಮಾ ಕಂಪನಿಯಿಂದ 2022ರ ಜುಲೈ 2, ನವೆಂಬರ್ 12, 2023ರ ಜನವರಿ 5, ನವೆಂಬರ್ 8ರಂದು ಒಟ್ಟು ₹49.5 ಕೋಟಿಯನ್ನು ಆರೋಪಿಗಳು ಒಳಸಂಚು ರೂಪಿಸಿ, ರಹಸ್ಯವಾಗಿ ಪಡೆದುಕೊಂಡಿದ್ದಾರೆ. ಇದೇ ರೀತಿ ಹಲವು ಕಾರ್ಪೊರೇಟ್ ಕಂಪನಿಗಳಿಂದ ಸುಲಿಗೆ ನಡೆಸಲಾಗಿದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಪೊಲೀಸರ ಮುಂದಿನ ಕ್ರಮವೇನು?

'ತನಿಖೆಯನ್ನು ತಿಲಕ್‌ನಗರ ಠಾಣೆಯ ಇನ್‌ಸ್ಪೆಕ್ಟರ್ ಅವರೇ ನಡೆಸಲಿದ್ದಾರೆ. ಆರೋಪಿಗಳಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆಗೆ ಬರಲು ಸೂಚಿಸಲಾಗುತ್ತದೆ. ಹಿರಿಯ ಪೊಲೀಸ್ ಅಧಿಕಾರಿಗಳ ಸೂಚನೆಯಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಮೂಲಗಳು ತಿಳಿಸಿವೆ.

ದಕ್ಷಿಣ ಬೈರೂತ್‌ನಲ್ಲಿ ಸಭೆ ನಡೆಸಿದ್ದಾಗಲೇ ವಾಯು ದಾಳಿ ನಡೆಸಿದ ಇಸ್ರೇಲ್

ಹಿಜ್ಬುಲ್ಲಾ ಮುಖ್ಯಸ್ಥ ನಸ್ರಲ್ಲಾ ಹತ್ಯೆ

ಟೆಲ್ ಅವೀವ್/ಬೈರೂತ್ (ರಾಯಿಟರ್ಸ್/ಎಪಿ/ಎಎಫ್‌ಪಿ): ಹಿಜ್ಬುಲ್ಲಾ ಬಂಡುಕೋರ ಸಂಘಟನೆಯ ಮುಖ್ಯಸ್ಥ ಸಯ್ಯದ್ ಹಸನ್ ನಸ್ರಲ್ಲಾ (64) ಅವರನ್ನು ಇಸ್ರೇಲ್ ಸೇನೆ ಹತ್ಯೆ ಮಾಡಿದೆ.

'ಹಸನ್ ನಸ್ರಲ್ಲಾ ಇನ್ನು ಮುಂದೆ ಉಗ್ರವಾದದ ಮೂಲಕ ಜಗತ್ತನ್ನು ಬೆದರಿಸಲು ಸಾಧ್ಯವಾಗುವುದಿಲ್ಲ. ನಾವು ಆತನನ್ನು ಹೊಡೆದುರುಳಿಸಿದ್ದೇವೆ' ಎಂದು ಇಸ್ರೇಲ್ ಶನಿವಾರ ಘೋಷಿಸಿದೆ. ಸಂಘಟನೆಯ ಮುಖ್ಯಸ್ಥನ ಸಾವನ್ನು ದೃಢಪಡಿಸಿರುವ ಹಿಜ್ಬುಲ್ಲಾ, 'ತನ್ನ ಇತರ ಹುತಾತ್ಮರನ್ನು ನಸ್ರಲ್ಲಾ ಅವರೂ ಹಿಂಬಾಲಿಸಿದ್ದಾರೆ' ಎಂದು ಹೇಳಿದೆ.

ಇರಾನ್ ಬೆಂಬಲಿತ ಹಿಜ್ಬುಲ್ಲಾ ಸಂಘಟನೆಯ ಹಲವು ಪ್ರಮುಖರು ಲೆಬನಾನ್‌ನ ದಕ್ಷಿಣ ಬೈರೂತ್‌ನ ದಾಹಿಯಾ ಪ್ರದೇಶದಲ್ಲಿನ ತಮ್ಮ ಕೇಂದ್ರ ಕಚೇರಿಯಲ್ಲಿ ಶುಕ್ರವಾರ ಸಭೆ ಸೇರಿದ್ದರು. 'ನಸ್ರಲ್ಲಾ ಅವರು ಈ ಸಭೆಯಲ್ಲಿ ಇದ್ದ ಖಚಿತ ಮಾಹಿತಿ ಮೇರೆಗೆ ವಾಯುದಾಳಿ ನಡೆಸಲಾಯಿತು. ಸಭೆಯಲ್ಲಿದ್ದ ಸಂಘಟನೆಯ ಕಮಾಂಡರ್ ಅಲಿ ಕರ್ಕಿ ಅವರೂ ಮೃತಪಟ್ಟಿದ್ದಾರೆ' ಎಂದು ಇಸ್ರೇಲ್ ಸೇನೆ ತಿಳಿಸಿದೆ.

8ನೇ ಪುಟ ನೋಡಿ

ಹತ್ಯೆಗೊಳಗಾದ ಹಿಜ್ಬುಲ್ಲಾ ನಾಯಕರು

- ಸೆ.28: ಹಸನ್ ನಸ್ರಲ್ಲಾ, ಸಂಘಟನೆಯ ಮುಖ್ಯಸ್ಥ
- ಸೆ.24: ಇಬ್ರಾಹಿಂ ಖುಬೈಸಿ, ರಾಕೆಟ್ ವಿಭಾಗದ ಮುಖ್ಯಸ್ಥ
- ಸೆ.20: ಇಬ್ರಾಹಿಂ ಅಕೀಲ್, ಕಾರ್ಯಾಚರಣೆ ವಿಭಾಗದ ಕಮಾಂಡರ್
- ಜುಲೈ 30: ಫಾದ್ ಶುಕ್ರ್, ಕಮಾಂಡರ್, ನಸ್ರಲ್ಲಾ ಅವರ ಆಪ್ತ


ನಸ್ರಲ್ಲಾ

ಸುರಕ್ಷಿತ ಸ್ಥಳಕ್ಕೆ ಖಮೇನಿ

ನಸ್ರಲ್ಲಾ ಅವರ ಹತ್ಯೆಯನ್ನು ಇಸ್ರೇಲ್ ಘೋಷಿಸುತ್ತಿದ್ದಂತೆಯೇ ಇರಾನ್‌ನ ಸರ್ವೋಚ್ಚ ನಾಯಕ ಆಯತ್ ಉಲ್ಲಾ ಅಲಿ ಖಮೇನಿ ಅವರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹತ್ಯೆಯ ಕುರಿತು ಪ್ರತಿಕ್ರಿಯಿಸಿರುವ ಖಮೇನಿ, 'ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ಹತ್ಯಾಕಾಂಡವು, ಜಿಯೊನಿಸ್ಟ್ ನಾಯಿಗಳ ಉಗ್ರತೆಯನ್ನು ಮತ್ತೊಮ್ಮೆ ಜಗತ್ತಿಗೆ ತೋರಿಸಿದೆ. ಲೆಬನಾನ್ ಜನರನ್ನು ಹಾಗೂ ನಮ್ಮ ಹೆಮ್ಮೆಯ ಹಿಜ್ಬುಲ್ಲಾವನ್ನು ಎಲ್ಲ ಮುಸ್ಲಿಮರು ತಮ್ಮ ಕೈಲಾದ ರೀತಿಯಲ್ಲಿ ಬೆಂಬಲಿಸಬೇಕು. ಈ ಪ್ರದೇಶದ (ಇಸ್ರೇಲ್) ಹಣೆಬರಹವನ್ನು ನಮ್ಮ ಪ್ರತಿರೋಧದ ಮೂಲಕ ನಿರ್ಧರಿಸುತ್ತೇವೆ. ಹಿಜ್ಬುಲ್ಲಾ, ಈ ಪ್ರತಿರೋಧದ ಮುಖ್ಯಹೊಣೆ ವಹಿಸಿಕೊಳ್ಳಲಿದೆ' ಎಂದರು.

ಇನ್ನೊಂದು ಸುದ್ದಿ 8

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಸಿ.ಎಂ ವಿರುದ್ಧ ತನಿಖೆಗೆ 4 ತಂಡ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಗಾಗಿ ಇಲ್ಲಿನ ಲೋಕಾಯುಕ್ತ ಎಸ್‌ಪಿ ಟಿ.ಜೆ. ಉದೇಶ್ ನಾಲ್ಕು ತಂಡಗಳನ್ನು ರಚಿಸಿದ್ದಾರೆ.

ಮೈಸೂರು ಲೋಕಾಯುಕ್ತ ಡಿವೈಎಸ್‌ಪಿ ಎಸ್‌.ಕೆ. ಮಾಲತೇಶ್, ಚಾಮರಾಜನಗರ ಡಿವೈಎಸ್‌ಪಿ ಮ್ಯಾಥ್ಯು ಥಾಮಸ್, ಮೈಸೂರಿನ ಇನ್‌ಸ್ಪೆಕ್ಟರ್ ರವಿಕುಮಾರ್ ಹಾಗೂ ಕೊಡಗು ಇನ್‌ಸ್ಪೆಕ್ಟರ್ ಲೋಕೇಶ್‌ಕುಮಾರ್ ನೇತೃತ್ವದಲ್ಲಿ ತಂಡಗಳು ರಚನೆಯಾಗಿವೆ. ತನಿಖೆಯ ಸ್ವರೂಪ ಕುರಿತು ಈ ತಂಡಗಳು ಸಿದ್ಧತೆ ಮಾಡಿಕೊಳ್ಳುತ್ತಿವೆ.

5ನೇ ಪುಟ ನೋಡಿ

ಅಧಿಕಾರಿಗಳೇ ಸಾಕ್ಷಿಗಳು!

1998ರಲ್ಲಿ ಜಮೀನಿನ ಡಿನೋಟಿಫೈನಿಂದ ಶುರುವಾಗಿ 2022ರಲ್ಲಿ ಬಿ.ಎಂ. ಪಾರ್ವತಿ ಹೆಸರಿಗೆ 14 ಬದಲಿ ನಿವೇಶನಗಳು ಖಾತೆಯಾಗುವವರೆಗಿನ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವ ಎಲ್ಲ ಅಧಿಕಾರಿಗಳನ್ನು ವಿಚಾರಣೆಗೆ ಕರೆಯುವ ಸಾಧ್ಯತೆ ಇದೆ. ಅವರಲ್ಲಿ ಅನೇಕರು ನಿವೃತ್ತಿ ಹೊಂದಿದ್ದು, ಹಲವರು ಮೈಸೂರಿನಿಂದ ವರ್ಗಾವಣೆಯಾಗಿದ್ದಾರೆ.

2005–06ರ ಅವಧಿಯಲ್ಲಿ ಮೈಸೂರು ಜಿಲ್ಲಾಧಿಕಾರಿಗಳಾಗಿದ್ದ ಜಿ.ಕುಮಾರ್ ನಾಯಕ್, ಎಸ್. ಸೆಲ್ವಕುಮಾರ್, ಮೈಸೂರು ತಹಶೀಲ್ದಾರ್ ಮಲ್ಲಿಗೆ ಶಂಕರ್, 2022ರಲ್ಲಿ ಮೈಸೂರು ಉತ್ತರ ಉಪ ನೋಂದಣಾಧಿಕಾರಿ ಎಸ್‌.ಕೆ. ಸಿದ್ದಯ್ಯ, ಮುಡಾದ ಹಿಂದಿನ ಆಯುಕ್ತ ಡಿ.ಬಿ. ನಟೇಶ್, ಮುಡಾ ಆಯುಕ್ತರ ಅಕ್ರಮಗಳ ಕುರಿತು ಸರ್ಕಾರಕ್ಕೆ ಪತ್ರ ಬರೆದಿದ್ದ ಹಿಂದಿನ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರನ್ನು ಲೋಕಾಯುಕ್ತ ಸಾಕ್ಷಿಯನ್ನಾಗಿ ಪರಿಗಣಿಸಿ, ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ.

ಎನ್‌ಸಿಬಿ ಮಾದರಿ 'ವಿಶೇಷ ಕಾರ್ಯಪಡೆ' ರಚಿಸಲು ಸರ್ಕಾರ ಚಿಂತನೆ

ಡ್ರಗ್ಸ್ ದಂಧೆ ತಡೆಗೆ 'ಎಎನ್‌ಟಿಎಫ್'?

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಮಾದಕವಸ್ತು (ಡ್ರಗ್ಸ್) ಪೂರೈಕೆ, ಮಾರಾಟ ದಂಧೆಗೆ ಸಂಪೂರ್ಣ ಕಡಿವಾಣ ಹಾಕಲು ರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಮಾದರಿಯಲ್ಲಿ 'ಮಾದಕ ದ್ರವ್ಯ ನಿಗ್ರಹ ಕಾರ್ಯಪಡೆ' (ಎಎನ್‌ಟಿಎಫ್) ರಚಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಕುರಿತು ಪ್ರಸ್ತಾವ ಸಿದ್ಧಪಡಿಸುವಂತೆ ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಹಿರಿಯ ಅಧಿಕಾರಿಗಳಿಗೆ ಗೃಹ ಇಲಾಖೆ ಸೂಚನೆ ನೀಡಿದೆ. ಎಡಿಜಿಪಿ ಅಥವಾ ಐಜಿಪಿ ಮಟ್ಟದ ಅಧಿಕಾರಿ ಎಎನ್‌ಟಿಎಫ್ ಮುಖ್ಯಸ್ಥರಾಗಿ ಇರಲಿದ್ದಾರೆ.

ಮಾದಕವಸ್ತು ದಂಧೆ ಪತ್ತೆ ಕಾರ್ಯಾಚರಣೆಗೆ ಎಎನ್‌ಟಿಎಫ್‌ನಲ್ಲಿ ಎಸ್‌ಪಿ, ಎಎಸ್‌ಪಿ, ಡಿವೈಎಸ್‌ಪಿ ಇರಲಿದ್ದಾರೆ. ವಲಯ ಹಂತದಲ್ಲಿ ಎಎನ್‌ಟಿಎಫ್ ಘಟಕಗಳನ್ನೂ ರಚಿಸಲಾಗುವುದು. ಆಡಳಿತ ಮತ್ತು ತರಬೇತಿಗೆ ತಲಾ ಒಬ್ಬರು ಎಸ್‌ಪಿ, ಎಎಸ್‌ಪಿ, ಡಿವೈಎಸ್‌ಪಿ ಇರಲಿದ್ದಾರೆ ಎಂದು ಗೃಹ ಇಲಾಖೆ ಮೂಲಗಳು ತಿಳಿಸಿವೆ.

ತೆಲಂಗಾಣ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಎಎನ್‌ಟಿಎಫ್ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿಯೂ ಮಾದಕವಸ್ತು ಜಾಲ ತಡೆಗಟ್ಟುವ ಉದ್ದೇಶದಿಂದ ಈ ಕಾರ್ಯಪಡೆ ರಚಿಸಿ ನೀಡಬಹುದಾದ ಜವಾಬ್ದಾರಿಗಳು ಮತ್ತು ಒದಗಿಸಬೇಕಾದ ಮೂಲಸೌಲಭ್ಯಗಳನ್ನು ಒಳಗೊಂಡ ಸಮಗ್ರ ಪ್ರಸ್ತಾವವನ್ನು ಸಿದ್ಧಪಡಿಸುವಂತೆ ಐಎಸ್‌ಡಿಗೆ ಇಲಾಖೆ ತಿಳಿಸಿದೆ.

7ನೇ ಪುಟ ನೋಡಿ



ಡ್ರಗ್ಸ್ ದಂಧೆಯನ್ನು ಸಂಪೂರ್ಣ ಮಟ್ಟ ಹಾಕಲು ಮತ್ತಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಿದೆ. ಈ ಉದ್ದೇಶದಿಂದ ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲಾಗುವುದು
ಜಿ. ಪರಮೇಶ್ವರ, ಗೃಹ ಸಚಿವ

ಕಾಲೇಜು, ವಿ.ವಿಗಳಲ್ಲಿ 'ಎಡಿಸಿ' ರಚನೆ

ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಯಥೇಚ್ಛವಾಗಿ ಮಾದಕವಸ್ತು ದಂಧೆ ನಡೆಯುತ್ತಿದೆ. ವಿದ್ಯಾರ್ಥಿಗಳು ಹೊಸ ಬಗೆಯ ಮಾದಕದ್ರವ್ಯಗಳಿಗೆ ಮಾರು ಹೋಗುತ್ತಿದ್ದಾರೆ. ಅದನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ, 'ರ್‍ಯಾಗಿಂಗ್ ವಿರೋಧಿ ಸಮಿತಿ' (ಎಆರ್‌ಸಿ) ಮಾದರಿಯಲ್ಲಿ 'ಮಾದಕವಸ್ತು ವಿರೋಧಿ ಸಮಿತಿ' (ಎಡಿಸಿ) ರಚಿಸುವ ಚಿಂತನೆಯೂ ನಡೆದಿದೆ.

ಕಾಲೇಜು ಕ್ಯಾಂಪಸ್‌ಗಳಲ್ಲಿ ನಡೆಯುವ ಮಾದಕವಸ್ತು ಮಾರಾಟ, ಸೇವನೆಯ ಮಾಹಿತಿಯನ್ನು ಸಂಗ್ರಹಿಸಿ ಸಂಬಂಧಪಟ್ಟವರ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳಲು ಎಡಿಸಿ ಸಹಕಾರಿ ಆಗಬಹುದು. ವಿದೇಶಿ ವಿದ್ಯಾರ್ಥಿಗಳು ಮಾದಕವಸ್ತು ವ್ಯಸನಿಗಳಾಗುತ್ತಿದ್ದು, ಅವರಿಗೆ ಮಾದಕವಸ್ತು ಎಲ್ಲಿಂದ ಪೂರೈಕೆ ಆಗುತ್ತವೆ ಎಂಬುದರ ಮೂಲ ಪತ್ತೆ ಹಚ್ಚಬೇಕು. ಎಡಿಸಿ ನೀಡುವ ಮಾಹಿತಿಯ ಗೌಪ್ಯತೆ ಕಾಪಾಡಬೇಕು. ಮಾದಕ ವ್ಯಸನಿಗಳು ವಿವಿಧ ಮಾತ್ರೆಗಳನ್ನು ಬಳಸುತ್ತಿದ್ದಾರೆ. ಹೀಗಾಗಿ, ಆರೋಗ್ಯ ಇಲಾಖೆ ವ್ಯಾಪ್ತಿಗೆ ಬರುವ ಔಷಧ ನಿಯಂತ್ರಕ ಹುದ್ದೆಯ ಜೊತೆಗೆ 'ಆ್ಯಂಟಿ ಡ್ರಗ್ ಕಂಟ್ರೋಲ್ ಆಯುಕ್ತ' ಹುದ್ದೆ ಸೃಷ್ಟಿಸಿ, ಐಪಿಎಸ್ ಅಧಿಕಾರಿಯನ್ನು ಆ ಹುದ್ದೆಗೆ ನೇಮಿಸುವ ಬಗ್ಗೆಯೂ ಗೃಹ ಇಲಾಖೆ ಚಿಂತನೆ ನಡೆಸಿದೆ.

ವಚನ ನವರಾತ್ರಿ ಆಚರಣೆ ಅ.3ರಿಂದ

ಬೆಂಗಳೂರು: ವಚನಜ್ಯೋತಿ ಬಳಗವು ದೊಡ್ಡಬಸ್ತಿ ರಸ್ತೆಯ ಕಲ್ಯಾಣ ಪಟ್ಟಣದಲ್ಲಿ ವಚನ ನವರಾತ್ರಿಯನ್ನು ಅಕ್ಟೋಬರ್ 3ರಿಂದ 12ರವರೆಗೆ ಆಯೋಜಿಸಿದೆ.

ಪ್ರತಿದಿನ ಒಬ್ಬ ವಚನಕಾರ್ತಿಯ ಪರಿಚಯ, ಅವರ ವಚನಗಳ ನಿರ್ವಚನ ಹಾಗೂ ಗಾಯನಗಳನ್ನು ನಡೆಸಲಾಗುವುದು. ವಚನ ಕಲಿಕಾ ವಿದ್ಯಾರ್ಥಿಗಳು ವಚನಕಾರ್ತಿಯರ ಪರಿಚಯ ಮಾಡಿಕೊಡಲಿದ್ದಾರೆ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ತಿಳಿಸಿದ್ದಾರೆ.

ಕನ್ನಡ ಪ್ರಾಧ್ಯಾಪಕರಾದ ಎಲ್. ಜಿ.ಮೀರಾ, ರುದ್ರೇಶ್ ಅದರಂಗಿ, ನಾಗವೇಂದ್ರಸ್ವಾಮಿ ಚಿದರವಳ್ಳಿ, ಕವಿ ಗುಂಡೀಗೆರೆ ವಿಶ್ವನಾಥ್, ಪ್ರಭು ಇಸುವನಹಳ್ಳಿ ಅವರು ವಚನ ನಿರ್ವಚನ ಮಾಡಲಿದ್ದಾರೆ. ವಚನ ಸಂಗೀತವನ್ನು ವಿವಿಧ ಅಕ್ಕನ ಬಳಗಗಳು ನಡೆಸಿಕೊಡಲಿವೆ ಎಂದಿದ್ದಾರೆ. ಮಾಹಿತಿಗೆ: 98451 84267.

ಅ.3,4ರಂದು ರೈಲ್ವೆ ಸುರಕ್ಷತಾ ತಪಾಸಣೆ

ನಾಗಸಂದ್ರ–ಮಾದಾವರ ನಡುವೆ 'ಮೆಟ್ರೊ' ಸೇವೆ • ಅಕ್ಟೋಬರ್ 2ನೇ ವಾರ ಪ್ರಯಾಣಿಕರ ಸೇವೆ ಆರಂಭ?

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಸಿರು ಮಾರ್ಗದ 3.7 ಕಿ.ಮೀ. ದೂರದ ವಿಸ್ತರಿತ ಮಾರ್ಗ
- ಸಿಗ್ನಲಿಂಗ್, ವಿದ್ಯುತ್ ಪೂರೈಕೆ, ಸಾಮರ್ಥ್ಯ ಪರೀಕ್ಷೆ ಯಶಸ್ವಿ
- ನೆಲಮಂಗಲ, ಮಾಕಳಿ ವ್ಯಾಪ್ತಿಯ ನಿವಾಸಿಗಳಿಗೆ ಅನುಕೂಲ

ಬೆಂಗಳೂರು: ರೈಲ್ವೆ ಸುರಕ್ಷತಾ ಆಯುಕ್ತರು 'ನಮ್ಮ ಮೆಟ್ರೊ' ಹಸಿರು ಮಾರ್ಗದ ವಿಸ್ತರಿತ ಪ್ರದೇಶ ನಾಗಸಂದ್ರ-ಮಾದಾವರ ನಿಲ್ದಾಣಗಳ ನಡುವೆ ಅ.3 ಮತ್ತು 4ರಂದು ಸುರಕ್ಷತಾ ತಪಾಸಣೆ ನಡೆಸಲಿದ್ದಾರೆ.

ಹಸಿರು ಮಾರ್ಗದಲ್ಲಿ ವಿಸ್ತರಿತಗೊಂಡಿರುವ 3.7 ಕಿ.ಮೀ ದೂರದ ಈ ಮಾರ್ಗದಲ್ಲಿ ಮಂಜುನಾಥನಗರ, ಚಿಕ್ಕಬಿದರಕಲ್ಲು (ಜಿಂದಾಲ್), ಮಾದಾವರ ಮೆಟ್ರೊ ನಿಲ್ದಾಣಗಳಿವೆ. ಸಿವಿಲ್ ಕಾಮಗಾರಿ ಬಳಿಕ ಆಗಸ್ಟ್‌ನಿಂದ ಸಾಮರ್ಥ್ಯ ಪರೀಕ್ಷೆ, ಸಿಗ್ನಲಿಂಗ್, ದೂರಸಂಪರ್ಕ, ವಿದ್ಯುತ್ ಸರಬರಾಜು ವ್ಯವಸ್ಥೆ ಸಿಸ್ಟಂ ಸಂಯೋಜನೆ ಕಾರ್ಯ, ಸಾಮರ್ಥ್ಯ ಪರಿಶೀಲನೆ ಸಹಿತ ಪ್ರಮುಖ ಪರೀಕ್ಷೆಗಳು ನಡೆದಿದ್ದವು.

ಸುರಕ್ಷತಾ ಆಯುಕ್ತರು ಪರಿಶೀಲಿಸಬೇಕು ಎಂದು ಬಿಎಂಆರ್‌ಸಿಎಲ್, ರೈಲ್ವೆ ಸುರಕ್ಷತಾ ಆಯುಕ್ತರಿಗೆ ಪತ್ರ ಬರೆದಿತ್ತು. ಅದರಂತೆ ಸುರಕ್ಷತಾ ಆಯುಕ್ತ ಅನಂತ್ ಮಧುಕರ್ ಚೌಧರಿ ನೇತೃತ್ವದ ತಂಡವು ಅ.3, 4ರಂದು ತಪಾಸಣೆ ನಡೆಸಲಿದೆ ಎಂದು ರೈಲ್ವೆ ಸುರಕ್ಷತೆ/ಟೆಕ್ ದಕ್ಷಿಣ ವೃತ್ತದ ಉಪ ಆಯುಕ್ತರು ಬಿಎಂಆರ್‌ಸಿಎಲ್‌ಗೆ ಮಾಹಿತಿ ನೀಡಿದ್ದಾರೆ.

'ಗುಣಮಟ್ಟ ತೃಪ್ತಿಕರ ಎನಿಸಿದರೆ ವಾರದಲ್ಲೇ ಅನುಮತಿ'



ವಿಸ್ತರಿತ ಹಸಿರು ಮಾರ್ಗದಲ್ಲಿ ನಿರ್ಮಾಣಗೊಂಡಿರುವ ಚಿಕ್ಕಬಿದರಕಲ್ಲು ಮೆಟ್ರೊ ನಿಲ್ದಾಣ

'ಗುಣಮಟ್ಟ ಪರೀಕ್ಷೆ ತೃಪ್ತಿಕರವಾದರೆ ಆಯುಕ್ತರು ಆ ನಂತರ ಒಂದು ವಾರದಲ್ಲಿ ವಾಣಿಜ್ಯ ಸಂಚಾರಕ್ಕೆ ಅನುಮತಿ ನೀಡುವ ಸಾಧ್ಯತೆ ಇದೆ. ಆ ಪ್ರಕಾರ, ಅಕ್ಟೋಬರ್ ಎರಡನೇ ವಾರದಲ್ಲಿ ವಾಣಿಜ್ಯ ಸಂಚಾರ ಆರಂಭಗೊಳ್ಳಬಹುದು' ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಸುರಕ್ಷತಾ ಆಯುಕ್ತರು ಗುಣಮಟ್ಟ ತಪಾಸಣೆ ನಡೆಸಿದ ಮೇಲೆ ಅವರು ಸೂಚಿಸಿದ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಆಯುಕ್ತರು ಬರುವ ಮೊದಲು ಎಲ್ಲ ಪರೀಕ್ಷೆಗಳನ್ನು ನಡೆಸಿ ನ್ಯೂನತೆಗಳನ್ನು ಸರಿಪಡಿಸಿ-ರುವುದರಿಂದ ಹೆಚ್ಚಿನ ಬದಲಾವಣೆಗಳು ಇರುವುದಿಲ್ಲ' ಎಂದು ತಿಳಿಸಿದ್ದಾರೆ.

ಹಸಿರು ಮಾರ್ಗದ ಅಭಿವೃದ್ಧಿ ವಿವಿಧ ಹಂತಗಳಲ್ಲಿ ನಡೆದಿದ್ದು, ನಾಗಸಂದ್ರ-ಮಾದಾವರ ಕೊನೆಯ ಹಂತವಾಗಿದೆ. ಕಾಮಗಾರಿ 2017ರಲ್ಲಿ ಆರಂಭವಾಗಿದ್ದು, 2019ರಲ್ಲಿ ಪೂರ್ಣಗೊಳ್ಳಬೇಕಿತ್ತು. ಭೂಸ್ವಾಧೀನ ಪ್ರಕ್ರಿಯೆಯ ವಿರುದ್ಧ ಕೆಲವರು ಕೋರ್ಟ್ ಮೆಟ್ಟಿಲೇರಿದ್ದರು.

ಅಲ್ಲದೆ ಕೋವಿಡ್ ಪರಿಸ್ಥಿತಿಯಿಂ-ದಲೂ ಐದು ವರ್ಷ ಕಾಮಗಾರಿ ವಿಳಂಬವಾಯಿತು. ಈಗ ಸಂಚಾರಕ್ಕೆ ಸಿದ್ಧವಾಗುತ್ತಿದೆ. ಮೆಟ್ರೊ ರೈಲು ಸಂಚಾರ ಸೇವೆಯು ಆರಂಭವಾದರೆ ನಗರಕ್ಕೆ ಬರುವ ನೆಲಮಂಗಲ, ಮಾಕಳಿ, ಮಾದನಾಯಕನಹಳ್ಳಿ ಆಸುಪಾಸಿನ ಪ್ರದೇಶಗಳ ನಿವಾಸಿಗಳಿಗೆ ಅನುಕೂಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾದಾವರವರೆಗೆ ಮೆಟ್ರೊ ಸಂಚಾರ ಆರಂಭವಾದರೂ ರೈಲುಗಳ ಸಂಖ್ಯೆ ಹೆಚ್ಚಳವಾಗುವುದಿಲ್ಲ. ನಾಗಸಂದ್ರದಿಂದ ರೇಷ್ಮೆ ಸಂಸ್ಥೆಯವರೆಗೆ ಈಗ ಸಂಚರಿಸುತ್ತಿರುವ ರೈಲುಗಳೇ ಮಾದಾವರವರೆಗೆ ಸಂಚರಿಸಲಿವೆ ಎಂದು ಮಾಹಿತಿ ನೀಡಿದ್ದಾರೆ.

ಅ.2: ಮಾಂಸ ಮಾರಾಟಕ್ಕೆ ಅವಕಾಶ ಕಲ್ಪಿಸಲು ಆಗ್ರಹ

ಬೆಂಗಳೂರು: ಗಾಂಧಿ ಜಯಂತಿ (ಅಕ್ಟೋಬರ್ 2) ದಿನ ಮಹಾಲಯ ಅಮಾವಾಸ್ಯೆಯ ಪ್ರಯುಕ್ತ ಪಿತೃಪಕ್ಷ ಹಬ್ಬವೂ ಇದೆ. ಇದನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ಆ ದಿನ ಮಾಂಸ ಮಾರಾಟಕ್ಕೆ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ಪೌಲ್ಟ್ರಿ ಟ್ರೇಡರ್ಸ್ ಅಸೋಸಿಯೇಷನ್ ಒತ್ತಾಯಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ಕೆ.ಎನ್.ನಾಗರಾಜು, 'ಪಿತೃಪಕ್ಷ ನಿಮಿತ್ತ ಜನರು ಮಾಂಸಾಹಾರ ಸಿದ್ಧಪಡಿಸಿ, ಅಗಲಿದ ಹಿರಿಯರಿಗೆ ಎಡೆ ಇಟ್ಟು, ಪೂಜೆ ಮಾಡುತ್ತಾರೆ. ಈ ವರ್ಷ ಮಹಾಲಯ ಅಮಾವಾಸ್ಯೆ ದಿನವೇ ಗಾಂಧಿ ಜಯಂತಿ ಬಂದಿದೆ. ಅ. 2ರಂದು ಪ್ರಾಣಿ ವಧೆ ನಿಷೇಧಿಸಲಾಗಿದೆ. ಇದರಿಂದ, ಪಿತೃಪಕ್ಷ ಹಬ್ಬ ಆಚರಿಸುವವರಿಗೆ ಅಡಚಣೆ ಆಗಲಿದೆ' ಎಂದರು.

'ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಸಲ್ಲಿಸಲಾಗಿದೆ. ಆದರೆ ಯಾವುದೇ ರೀತಿಯ ಪ್ರತಿಕ್ರಿಯೆ ಬಂದಿಲ್ಲ. 'ಅಂದು ಮಾಂಸ ಮಾರಾಟಕ್ಕೆ ಅವಕಾಶ ನೀಡದಿದ್ದರೆ, ಭಾನುವಾರ (ಸೆ.29) ಅಥವಾ ಮಂಗಳವಾರವೇ (ಅ. 1ರಂದು) ಪಿತೃಪಕ್ಷ ಆಚರಿಸಬೇಕಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಕಲಾಕೃತಿ ಮೂಲಕ ಹೃದಯದ ಆರೋಗ್ಯ ಜಾಗೃತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಹೃದಯ ದಿನದ ಪ್ರಯುಕ್ತ ನಗರದ ಮೆಟ್ರೊ ನಿಲ್ದಾಣಗಳು, ಉದ್ಯಾನಗಳು, ಟೆಕ್ ಪಾರ್ಕ್‌ಗಳು ಸೇರಿ 20ಕ್ಕೂ ಅಧಿಕ ಸ್ಥಳಗಳಲ್ಲಿ ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ 3ಡಿ ಕಲಾಕೃತಿ ಚಿತ್ರಿಸಲಾಗಿದೆ.

ಮಣಿಪಾಲ್ ಆಸ್ಪತ್ರೆಗಳ ಸಮೂಹವು ಬೆಂಗಳೂರು ಸಂಚಾರ ಪೊಲೀಸ್ ಹಾಗೂ ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್) ಸಹಯೋಗದಲ್ಲಿ ಕಲಾಕೃತಿಯಪ್ರದರ್ಶನಹಮ್ಮಿಕೊಂಡಿದೆ.

ಧೂಮಪಾನ, ಮದ್ಯಪಾನದಂತಹ ವ್ಯಸನಗಳ ಜತೆಗೆ ಸ್ಥೂಲಕಾಯ ಸೇರಿ ವಿವಿಧ ಸಮಸ್ಯೆಗಳು ಹೃದಯದ ಆರೋಗ್ಯದ ಮೇಲೆ ನಕಾರಾತ್ಮಕವಾಗಿ ಬೀರುವ ಪರಿಣಾಮವನ್ನು ಚಿತ್ರಿಸಲಾಗಿದೆ. ಈ 3ಡಿ ಕಲಾಕೃತಿಗಳನ್ನು ಕಲಾವಿದರಾದ ಬಾದಲ್ ನಂಜುಂಡ ಸ್ವಾಮಿ ಹಾಗೂ ಮುಖೇಶ್ ಕುಮಾರ್ ರಚಿಸಿದ್ದಾರೆ.

ಕಬ್ಬನ್ ಪಾರ್ಕ್, ಇಂದಿರಾನಗರ, ಮಹಾತ್ಮಗಾಂಧಿ ರಸ್ತೆ, ಜೆ.ಪಿ.ನಗರ ಹಾಗೂ ಬೆನ್ನಿಗಾನಹಳ್ಳಿ ಮೆಟ್ರೊ ನಿಲ್ದಾಣ, ಲಾಲ್‌ಬಾಗ್, ಮಂತ್ರಿ ಮಾಲ್, ಹೆಬ್ಬಾಳದ ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ದೊಮ್ಮಲೂರಿನ ಎಂಬೆಸಿ ಗಾಲ್ಫ್ ಲಿಂಕ್, ಬೆಳ್ಳಂದೂರಿನ ಎಂಬೆಸಿ ಟೆಕ್ ವಿಲೇಜ್ ಮತ್ತು ವೈಟ್‌ಫೀಲ್ಡ್‌ನ ಐಟಿಪಿಎಲ್ ಟೆಕ್ ಪಾರ್ಕ್, ಯಲಹಂಕದ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್, ಕೆಂಪೇಗೌಡ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ವಿವಿಧ ಅಪಾರ್ಟ್‌ಮೆಂಟ್‌ಗಳ-ಲ್ಲಿ ಇಂತಹ ಕಲಾಕೃತಿಗಳನ್ನು ಚಿತ್ರಿಸಲಾಗಿದೆ.



ಮೆಟ್ರೊ ನಿಲ್ದಾಣದಲ್ಲಿ ಚಿತ್ರಿಸಿರುವ ಹೃದಯದ 3ಡಿ ಕಲಾಕೃತಿ

ವಿಶ್ವ ಹೃದಯ ದಿನ ಇಂದು

'ಹೃದಯಾಘಾತಕ್ಕೆ ಅಧಿಕ ರಕ್ತದೊತ್ತಡವು ಪ್ರಮುಖ ಕಾರಣ. ಬದಲಾದ ಜೀವನಶೈಲಿ, ಧೂಮಪಾನದಂತಹ ವ್ಯಸನಗಳು, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಹೃದಯಾಘಾತ ಪ್ರಕರಣಗಳು ಹೆಚ್ಚುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಯುವಜನರೂ ಹೃದಯಾಘಾತಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಹೃದಯದ ಆರೋಗ್ಯದ ಬಗ್ಗೆ 3ಡಿ ಕಲಾಕೃತಿಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ' ಎಂದು ಮಣಿಪಾಲ್ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ವಾಕಥಾನ್ ಮೂಲಕ ಜಾಗೃತಿ



ಸೇಂಟ್ ಥೆರೆಸಾ, ತಥಾಗತ ಆಸ್ಪತ್ರೆ ಹಮ್ಮಿಕೊಂಡಿದ್ದ ವಾಕಥಾನ್‌ನಲ್ಲಿ ಆಸ್ಪತ್ರೆಯ ಸಿಬ್ಬಂದಿಯೊಂದಿಗೆ ದಿನೇಶ್ ಗುಂಡೂರಾವ್ ಹಾಗೂ ಶಾಸಕ ಗೋಪಾಲಯ್ಯ ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದರು

ವಿಶ್ವ ಹೃದಯ ದಿನದ (ಸೆ. 29) ಮುನ್ನಾದಿನವಾದ ಶನಿವಾರ ನಗರದ ವಿವಿಧೆಡೆ ಖಾಸಗಿ ಆಸ್ಪತ್ರೆಗಳು ವಾಕಥಾನ್ ನಡೆಸಿ ಹೃದಯದ ಆರೋಗ್ಯ ಬಗ್ಗೆ ಜಾಗೃತಿ ಮೂಡಿಸಿದವು.

ಸೇಂಟ್ ಥೆರೆಸಾ, ತಥಾಗತ ಆಸ್ಪತ್ರೆ ರಾಜಾಜಿನಗರದಲ್ಲಿ ಹಮ್ಮಿಕೊಂಡಿದ್ದ ವಾಕಥಾನ್‌ಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿ, 'ಹೃದಯದ ಆರೋಗ್ಯವೇ ನಮ್ಮ ಮೊದಲ ಆದ್ಯತೆಯಾಗಬೇಕು' ಎಂದರು. ದೈಹಿಕ ಚಟುವಟಿಕೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿ ಸಲು ಸಕ್ರ ಆಸ್ಪತ್ರೆಯು 'ಹಾರ್ಟ್ ಥಾನ್' ಅಭಿಯಾನ ಹಮ್ಮಿಕೊಂಡಿತ್ತು. ನಟಿ ಸಂಗೀತಾ ಶೃಂಗೇರಿ ಚಾಲನೆ ನೀಡಿದರು.

ಐಫೋನ್ ಬಿಡಿಭಾಗ ತಯಾರಿಕಾ ಘಟಕ • ನಾಲ್ವರು ಅಸ್ವಸ್ಥ • ಆರು ತಾಸು ಕಾರ್ಯಾಚರಣೆ


ಟಾಟಾ ಎಲೆಕ್ಟ್ರಾನಿಕ್ಸ್ ಘಟಕಕ್ಕೆ ಬೆಂಕಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಮಿಳುನಾಡಿನ ಹೊಸೂರು ಕೈಗಾರಿಕಾ ವಲಯ, ಕೂತನಪಲ್ಲಿಯಲ್ಲಿನ ಟಾಟಾ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಐ-ಫೋನ್ ಮೊಬೈಲ್ ಬಿಡಿ ಭಾಗ ಘಟಕದಲ್ಲಿ ಶನಿವಾರ ಬೆಂಕಿ ಅವಗಢ ಸಂಭವಿಸಿದ್ದು, ಲಕ್ಷಾಂತರ ಮೌಲ್ಯದ ಎಲೆಕ್ಟ್ರಾನಿಕ್ ಬಿಡಿ ಭಾಗಗಳು ಬೆಂಕಿಗೆ ಆಹುತಿಯಾಗಿವೆ.

ಬೆಂಕಿ ಕಾಣಿಸಿಕೊಂಡಂತೆ ಕಾರ್ಮಿಕರು ಕಾರ್ಖಾನೆಯಿಂದ ಹೊರಗೆ ಓಡಿ ಬಂದು ಪಾರಾಗಿದ್ದಾರೆ. ಪಾಳಿಯಲ್ಲಿ ಸಾವಿರಕ್ಕೂ ಹೆಚ್ಚು ಕಾರ್ಮಿಕರಿದ್ದರು. ಕಾರ್ಖಾನೆ ಒಳಗೆ ಮತ್ತು ಹೊರಗೆ ದಟ್ಟವಾದ ಹೊಗೆ ಆವರಿಸಿತ್ತು. ನಾಲ್ವರು ಕಾರ್ಮಿಕರು ಅಸ್ವಸ್ಥರಾಗಿದ್ದಾರೆ.

ಅಸ್ವಸ್ಥರನ್ನು ಹೊಸೂರಿನ ಆಸ್ಪತ್ರೆಗೆ ದಾಖಲಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಗ್ನಿಶಾಮಕ ದಳದ ಹತ್ತಕ್ಕೂ ಹೆಚ್ಚು ವಾಹನಗಳಲ್ಲಿ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ತೊಡಗಿದ್ದರು. ಬೆ ಬೆಳಿಗ್ಗೆ 6 ಗಂಟೆಗೆ ಆರಂಭವಾದ ಬೆಂಕಿ ನಂದಿಸಲು ಸತತ ಆರು ಗಂಟೆ ಕಾರ್ಯಾಚರಣೆ ನಡೆಯಿತು.



ಹೊಸೂರಿನ ಕೂತನಪಲ್ಲಿಯ ಟಾಟಾ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಕಾರ್ಖಾನೆಯ ಆಕಸ್ಮಿಕ ಬೆಂಕಿ ಕಾಣಿಸಿಕೊಂಡಿರುವುದು

ಮುಖ್ಯಾಂಶಗಳು

- ದಟ್ಟ ಹೊಗೆಯಿಂದ ನಾಲ್ವರು ಕಾರ್ಮಿಕರು ಅಸ್ವಸ್ಥ
- ಅವಘಡ ವೇಳೆ ಸಾವಿರಕ್ಕೂ ಹೆಚ್ಚು ಕಾರ್ಮಿಕರಿದ್ದರು
- ಸೆಲ್ ಫೋನ್ ತಯಾರಿಕಾ ವಿಭಾಗಕ್ಕೂ ವ್ಯಾಪಿಸಿದ್ದ ಬೆಂಕಿ

ಬಿಡಿ ಭಾಗ ತಯಾರಿಕಾ ಘಟಕದಿಂದ ಬೆಂಕಿಯು ಸೆಲ್ ಫೋನ್ ತಯಾರಿಕಾ ವಿಭಾಗಕ್ಕೂ ವ್ಯಾಪಿಸಿತ್ತು. ಬೆಂಕಿಯನ್ನು ಹತೋಟಿಗೆ ತರಲು ಅಗ್ನಿಶಾಮಕದಳದ ಸಿಬ್ಬಂದಿ ಮತ್ತು ಪೊಲೀಸರು ಪರದಾಡಿದರು.

ತಮಿಳುನಾಡಿನ ಧರ್ಮಪುರಿ, ಕೃಷ್ಣಗಿರಿ, ಡೆಂಕಣಿಕೋಟೆ, ಹೊಸೂರು ಸೇರಿದಂತೆ ವಿವಿಧೆಡೆಯಿಂದ ಅಗ್ನಿಶಾಮಕ ದಳದ ವಾಹನಗಳು ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು. ಸ್ಥಳಕ್ಕೆ ಕೃಷ್ಣಗಿರಿ ಜಿಲ್ಲಾಧಿಕಾರಿ ಕೆ.ಎಂ. ಸರಯೂ ಭೇಟಿ ನೀಡಿ ಕಾರ್ಮಿಕರ ಆರೋಗ್ಯ ವಿಚಾರಿಸಿದರು.

ಯಾವುದೇ ಪ್ರಾಣಾಪಾಯವಾಗಿಲ್ಲ. ಬೆಂಕಿಯಿಂದ ಕಾರ್ಖಾನೆಯ ಮೊಬೈಲ್ ಬಿಡಿ ಭಾಗ ಘಟಕ ಬಹುತೇಕ ಹಾನಿಯಾಗಿದೆ. ಆದರೆ, ನಷ್ಟದ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಲಿಲ್ಲ.

2021ರಲ್ಲಿ ಹೊಸೂರು ಕೂತನಪಲ್ಲಿ ಬಳಿ 500 ಎಕರೆ ಪ್ರದೇಶದಲ್ಲಿ ಟಾಟಾ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಕಂಪನಿ ₹ 5,000 ಕೋಟಿ ಹೂಡಿಕೆ ಮಾಡಿ ಐಫೋನ್ ಬಿಡಿಭಾಗ ತಯಾರಿಕಾ ಘಟಕವನ್ನು ಆರಂಭಿಸಿತ್ತು.

ಪ್ರಿಯಕರನ ಮೊಬೈಲ್ ಸುಲಿಗೆಗೆ ಸುಪಾರಿ; ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮಾಜಿ ಪ್ರಿಯಕರನ ಮೊಬೈಲ್ ಸುಲಿಗೆ ಮಾಡಿಸಿದ್ದ ಯುವತಿ ಸೇರಿ ಐವರನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೊಡತಿ ನಿವಾಸಿ ಪಿ.ಶ್ರುತಿ (29), ಸುಪಾರಿ ಪಡೆದಿದ್ದ ಎಚ್‌ಎಸ್‌ಆರ್ ಲೇಔಟ್ ನಿವಾಸಿಗಳಾದ ಹೊನ್ನಪ್ಪ (25), ಮನೋಜ್ ಕುಮಾರ್ (25), ಸುರೇಶ್ ಕುಮಾರ್ (26), ವೆಂಕಟೇಶ್ (27) ಬಂಧಿತರು. ಎಇಸಿಎಸ್ ಲೇಔಟ್ ನಿವಾಸಿ ವಂಶಿಕೃಷ್ಣ ರೆಡ್ಡಿ ದೂರು ನೀಡಿದ್ದರು.

'ಒಡಿಶಾದ ವಂಶಿಕೃಷ್ಣ ರೆಡ್ಡಿ ಮತ್ತು ತಮಿಳುನಾಡಿನ ಶ್ರುತಿ ಅವರು ಸಾಫ್ಟ್‌ವೇರ್ ಎಂಜಿನಿಯರ್‌ಗಳು. ಇಬ್ಬರೂ ಭಿನ್ನ ಸಾಫ್ಟ್‌ವೇರ್ ಕಂಪನಿಗಳ ಉದ್ಯೋಗಿಗಳಾಗಿದ್ದು, ಪರಿಚಿತರಾಗಿದ್ದು ಪ್ರೀತಿಸುತ್ತಿದ್ದರು. ಶ್ರುತಿ ಬೇರೊಬ್ಬ ಯುವಕನ ಜೊತೆ ಸ್ನೇಹ ಬೆಳೆಸಿದ್ದರೆಂದು ವಂಶಿಕೃಷ್ಣ ಮದುವೆಯಾಗಲು ನಿರಾಕರಿಸಿದ್ದರು ಎನ್ನಲಾಗಿದೆ. ಈ ವಿಚಾರಕ್ಕೆ ಇಬ್ಬರ ಮಧ್ಯೆ ಜಗಳವಾಗಿತ್ತು.'

ಯುವತಿಗೆ ಅನುಮಾನ: 'ವಂಶಿಕೃಷ್ಣ ಮೊಬೈಲ್‌ನಲ್ಲಿ ಖಾಸಗಿ ವಿಡಿಯೊಗಳು, ಫೋಟೊಗಳಿವೆ ಎಂಬ ಶಂಕೆಯಿಂದ ಮೊಬೈಲ್ ಪರಿಶೀಲಿಸಲು ಆಲೋಚಿಸಿದ್ದರು. ಪರಿಚಯವಿದ್ದ ಆರೋಪಿ ಮನೋಜ್ ಕುಮಾರ್‌ನನ್ನು ಸಂಪರ್ಕಿಸಿ, ವಂಶಿಕೃಷ್ಣನ ಮೊಬೈಲ್ ಸುಲಿಗೆ ಮಾಡಲು ₹1.15 ಲಕ್ಷಕ್ಕೆ ಸುಪಾರಿ ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ಸೆ.20ರಂದು ವಂಶಿಕೃಷ್ಣನ ಸಂಪರ್ಕಿಸಿ ಉದ್ಯಾನವೊಂದಕ್ಕೆ ಬರಲು ಕೋರಿದ್ದರು.ಮಾತುಕತೆ ಬಳಿಕ ದ್ವಿಚಕ್ರ ವಾಹನದಲ್ಲಿ ಮನೆಗೆ ಹೊರಟಿದ್ದರು. ಆಗ ಸುಲಿಗೆ ಮಾಡಿದ್ದು, ಸಂಚು ತಿಳಿಯಬಾರದೆಂದು ಶ್ರುತಿ ಮೊಬೈಲ್ ಅನ್ನೂ ಕಸಿದಿದ್ದರು' ಎಂದು ಹೇಳಿದರು.

ರೌಡಿಶೀಟರ್‌ಗಳ ಮಧ್ಯೆ ಹೊಡೆದಾಟ

ಬೆಂಗಳೂರು: ಕಪಿಲಾನಗರದ 4ನೇ ಕ್ರಾಸ್‌ನಲ್ಲಿರುವ ಮನೆಗೆ ನುಗ್ಗಿ ರೌಡಿಶೀಟರ್ ಮೇಲೆ ಹಲ್ಲೆ ನಡೆಸಿ, ಚಾಕುವಿನಿಂದ ಇರಿದಿದ್ದ ಪ್ರಕರಣದ ಸಂಬಂಧ ಆರು ಮಂದಿ ವಿರುದ್ಧ ರಾಜಗೋಪಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಂದಿನಿ ಲೇಔಟ್‌ನ ಪೊಲೀಸ್ ಠಾಣೆಯ ರೌಡಿಶೀಟರ್ ನರೇಂದ್ರ ಅಲಿಯಾಸ್ ದಾಸ್ ಸೇರಿದಂತೆ ಐವರು ಹಲ್ಲೆಗೆ ಒಳಗಾಗಿದ್ದಾರೆ. ದೂರು ಆಧರಿಸಿ ರಮೇಶ್ ಅಲಿಯಾಸ್ ಬಿಳಿಲು, ಸಂಕೇತ್ (ಇಬ್ಬರೂ ರೌಡಿಶೀಟರ್), ತೇಜಸ್ ಅಲಿಯಾಸ್ ಟೈಗರ್, ಮಂಜುನಾಥ್, ದೀಕ್ಷಿತ್, ಅರುಣ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ನರೇಂದ್ರ ಹಾಗೂ ರಮೇಶ್ ಸಹಚರರ ಮಧ್ಯೆ ಹಳೇ ದ್ವೇಷವಿತ್ತು. ಎರಡೂ ಕಡೆಯವರು ಹಲವು ಬಾರಿ ಗಲಾಟೆ ಮಾಡಿಕೊಂಡಿದ್ದರು. ರಮೇಶ್ ಮತ್ತು ಸಹಚರರು ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದಾರೆ. ನರೇಂದ್ರ ಅವರ ರಕ್ಷಣೆಗೆ ಬಂದವರ ಮೇಲೂ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಲಾಗಿದೆ. ಘಟನೆಯಲ್ಲಿ ನರೇಂದ್ರ ಮತ್ತು ಆತನ ನಾಲ್ವರು ಸ್ನೇಹಿತರು ಗಾಯಗೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಒತ್ತುವರಿ ತೆರವು; 6 ಎಕರೆ ಭೂಮಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಬಾವಿಯಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಕಟ್ಟಡಗಳನ್ನು ತೆರವುಗೊಳಿಸಿ, ಸುಮಾರು ₹430 ಕೋಟಿ ಮೌಲ್ಯದ ಆಸ್ತಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ವಶಕ್ಕೆ ಪಡೆದುಕೊಂಡಿದೆ.

ನಾಗರಬಾವಿ ಗ್ರಾಮದ ಸರ್ವೆ ನಂ. 78ರಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಗೋದಾಮು, ಶೆಡ್‌ಗಳನ್ನು ತೆರವುಗೊಳಿಸಿ, ಆರು ಎಕರೆ ಪ್ರದೇಶವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎರಡು ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆ ಸಂದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ತಾಜ್ ವೆಸ್ಟ್ ಎಂಡ್ ಹಾಗೂ ಒಟೆರಾ ಹೋಟೆಲ್‌ಗೆ ಬಾಂಬ್ ಬೆದರಿಕೆಯ ಸಂದೇಶ ಬಂದಿದ್ದು, ಇದರಿಂದ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಹೈಗ್ರೌಂಡ್ಸ್ ಪೊಲೀಸ್ ಠಾಣೆ ವ್ಯಾಪ್ತಿಯ ತಾಜ್ ವೆಸ್ಟ್ ಎಂಡ್ ಹಾಗೂ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಒಟೆರಾ ಹೋಟೆಲ್‌ಗೆ ಶುಕ್ರವಾರ ತಡರಾತ್ರಿ ಒಂದೇ ವಿಳಾಸದಿಂದ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು.

ಇ-ಮೇಲ್ ಬೆದರಿಕೆ ಸಂದೇಶ ಗಮನಿಸಿದ ತಕ್ಷಣವೇ ಹೋಟೆಲ್ ಸಿಬ್ಬಂದಿ, ಗ್ರಾಹಕರೊಂದಿಗೆ ಹೊರ ಬಂದು, ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ಪೊಲೀಸರು ಬಂದು ಪರಿಶೀಲನೆ ನಡೆಸಿದಾಗ ಇದೊಂದು ಹುಸಿ ಬೆದರಿಕೆ ಸಂದೇಶ ಎಂದು ಗೊತ್ತಾಯಿತು. ಎಲ್ಲರೂ ನಿರಾಳರಾದರು.

'ಎರಡೂ ಹೋಟೆಲ್‌ಗಳಲ್ಲೂ ಬಾಂಬ್ ನಿಷ್ಕ್ರಿಯ, ಬಾಂಬ್ ಪತ್ತೆ ದಳ ಹಾಗೂ ಶ್ವಾನ ದಳದ ಸಿಬ್ಬಂದಿ ಪರಿಶೀಲನೆ ನಡೆಸಿದರು. ಕೊಠಡಿ ಹಾಗೂ ಆವರಣ ಪರಿಶೀಲಿಸಲಾಯಿತು. ಯಾವುದೇ ಸ್ಫೋಟಕ ವಸ್ತು ಅಥವಾ ರಾಸಾಯನಿಕ ಪದಾರ್ಥಗಳಾಗಲಿ ಪತ್ತೆ ಆಗಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ರಾಜಕಾರಣಿಗಳು, ಅಂತರರಾಷ್ಟ್ರೀಯ ಕ್ರೀಡಾಪಟುಗಳು ಹಾಗೂ ವಿದೇಶಿ ಗಣ್ಯರು ವಾಸ್ತವ್ಯ ಮಾಡುತ್ತಾರೆ. ಗ್ರಾಹಕರು ಹಾಗೂ ಸಿಬ್ಬಂದಿ ಬೆದರಿಸಲು ಇ-ಮೇಲ್ ರವಾನೆ ಮಾಡಿರುವ ಸಾಧ್ಯತೆಯಿದೆ. ಇ-ಮೇಲ್ ವಿಳಾಸ ಪತ್ತೆ ಹಚ್ಚುವ ಕಾರ್ಯ ನಡೆಯುತ್ತಿದೆ. ಸೈಬರ್ ತಜ್ಞರಿಗೂ ಮಾಹಿತಿ ನೀಡಲಾಗಿದೆ. ವಿದೇಶದಲ್ಲಿ ಕುಳಿತು ಇ-ಮೇಲ್ ಕಳುಹಿಸಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಇಂಟರ್‌ಪೋಲ್‌ಗೂ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ಕಾವೇರಿ ಬೀಟ್ಸ್-2024 'ವಾಕ್, ರನ್, ಸೈಕಲ್': ಅತಿಥಿ: ಸಂಗಪ್ಪ ಉಪಾಸೆ, ಆಯೋಜನೆ: ಕಾವೇರಿ ಹಾಸ್ಪಿಟಲ್ಸ್, ಸ್ಥಳ: ವಿಪ್ರೊ ಅವೆ, ಎಲೆಕ್ಟ್ರಾನಿಕ್ ಸಿಟಿ, ಬೆಳಿಗ್ಗೆ 6

ಮಕ್ಕಳಲ್ಲಿ ಹೃದ್ರೋಗದ ಕುರಿತು ಜಾಗೃತಿಯ ಜೊತೆಗೆ ಸ್ವಯಂ ಪ್ರೇರಿತ ಬೃಹತ್ ರಕ್ತದಾನ ಶಿಬಿರ, ಉಚಿತ ಆರೋಗ್ಯ ತಪಾಸಣೆ: ಆಯೋಜನೆ: ಮೊಗವೀರ ಸಂಘ, ಸುವರ್ಣ ಪಥ, ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್, ಸ್ಥಳ: ಎಂಇಎಸ್ ಹೈಸ್ಕೂಲ್, ಜಯನಗರ ನಾಲ್ಕನೇ ಬ್ಲಾಕ್, ಬೆಳಿಗ್ಗೆ 8.30

ಪಿ.ಬಿ. ಶ್ರೀನಿವಾಸ್ ಅವರ ಜನ್ಮದಿನದ ಪ್ರಯುಕ್ತ ಅಭಿಮಾನಿಗಳಿಂದ 101 ಗೀತೆಗಳ ಗಾಯನದ ಮೂಲಕ ಗೌರವ ಸಮರ್ಪಣಾ: ಆಯೋಜನೆ: ಗಾನಸಾರ್ವಭೌಮ ಡಾ.ಪಿ.ಬಿ. ಶ್ರೀನಿವಾಸ್ ಅಭಿಮಾನಿ ಗಾಯಕರ ವೇದಿಕೆ, ಸ್ಥಳ: ಅಕ್ಷರ ಸಭಾಂಗಣ, ಕಮಲಾನಗರ, ಬೆಳಿಗ್ಗೆ 9.30

ವಾರ್ಷಿಕೋತ್ಸವ, ಸಾಂಸ್ಕೃತಿಕ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ್ ಸ್ವಾಮೀಜಿ, ಉದ್ಘಾಟನೆ: ಬಿ. ಸುರೇಶ್ ಗೌಡ, ಅಧ್ಯಕ್ಷತೆ: ಎಚ್.ಎನ್. ನಾಗಮೋಹನದಾಸ್, ಅತಿಥಿಗಳು: ಎಸ್. ರಾಜೇಂದ್ರ, ಆರ್. ಹೇಮಂತ್ ಕುಮಾರ್, ಸನ್ಮಾನಿತರು: ಟಿ.ತಿಮ್ಮೇಶ್, ಕೆ.ಟಿ.ನಾಗರಾಜು, ಕುಮಾರಿ ಅರುಣ, ಉಪಸ್ಥಿತಿ: ಕೆಂಗೇಗೌಡ ಸಿ.ಎನ್., ಆಯೋಜನೆ: ಮೈಕೊ ಒಕ್ಕಲಿಗರ ಕ್ರಿಯಾ ಸಮಿತಿ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 9.30

'ಮಲೆನಾಡು ಉತ್ಸವ': ಅತಿಥಿಗಳು: ಬಿ.ಎಲ್.ಶಂಕರ್, ಆನಂದ ರೆಡ್ಡಿ, ಎಚ್. ಜಿ.ಚಂದ್ರಶೇಖರ್, ಬಿ.ಎಸ್. ಶ್ರೀಧರ್, ಸುಚರಿತ ಚಂದ್ರ, ಅಚ್ಯುತಗೌಡ, ವಿಶ್ವೇಶ್ವರ ಭಟ್, ಆಯೋಜನೆ: ರಮೇಶ್ ಬೇಗಾರ್ ಫೌಂಡೇಶನ್ ಫಾರ್ ಆರ್ಟ್, ಸ್ಥಳ: ಎಚ್. ಎನ್. ಕಲಾಕ್ಷೇತ್ರ, ನ್ಯಾಷನಲ್ ಕಾಲೇಜಿನ ಆವರಣ ಜಯನಗರ ಏಳನೇ ಬ್ಲಾಕ್, ಬೆಳಿಗ್ಗೆ 10


ವಾರ್ಷಿಕೋತ್ಸವ, ಕಾಯಕಯೋಗಿ ಶಿವಕುಮಾರ ಶಿವಯೋಗಿ, ಗಾನಯೋಗಿ ಪುಟ್ಟರಾಜ ಶಿವಯೋಗಿ, ಜ್ಞಾನಯೋಗಿ ಸಿದ್ಧೇಶ್ವರ ಶಿವಯೋಗಿ, ತ್ರಿವಿಧ ಶಿವಯೋಗಿಗಳಿಗೆ 'ಗೀತ ನಮನ', ಸಾಧಕರಿಗೆ ಗೌರವ ಪುರಸ್ಕಾರ: ಸಾನ್ನಿಧ್ಯ: ಶಿವನಾಂದ ಶಿವಾಚಾರ್ಯ ಸ್ವಾಮೀಜಿ, ಬಸವರಾಜೇಂದ್ರ ಸ್ವಾಮೀಜಿ, ಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಇಮ್ಮಡಿ ಬಸವರಾಜ ಸ್ವಾಮೀಜಿ, ಪ್ರಾಸ್ತಾವಿಕ ನುಡಿ: ಫಾಲಾಕ್ಷ ಗುರೂಜಿ, ಉಪಸ್ಥಿತಿ: ಕೆ.ಜಿ. ಪುಟ್ಟಹೊನ್ನಯ್ಯ ಗುರೂಜಿ, ಅಧ್ಯಕ್ಷತೆ: ಪ್ರಿಯಕೃಷ್ಣ, ಪ್ರಶಸ್ತಿ ಪ್ರದಾನ: ಬಿ.ಎಸ್. ಪುಟ್ಟರಾಜು, ಆಯೋಜನೆ: ಸಿದ್ಧಲಿಂಗೇಶ್ವರ ಗುರುಕುಲ ಟ್ರಸ್ಟ್, ಸ್ಥಳ: ಮಾನಸ ಗಂಗೋತ್ರಿ ಸಭಾಂಗಣ, ಏಳನೇ ಕ್ರಾಸ್, ಟೆಂಟ್ ರಸ್ತೆ ಮೂಡಲಪಾಳ್ಯ, ಬೆಳಿಗ್ಗೆ 10

'ನಾರಾಯಣಗುರು ಜಯಂತಿ, ಪರಿವರ್ತನಶ್ರೀ ಪ್ರಶಸ್ತಿ' ಪ್ರದಾನ, ರಾಜ್ಯಮಟ್ಟದ ಶ್ರೀನಾರಾಯಣಗುರು ಮಹಿಳಾ ಸಮಾವೇಶ: ಸಾನ್ನಿಧ್ಯ: ವಿಖ್ಯಾತಾನಂದ ಸ್ವಾಮೀಜಿ, ವಿನಯ ಗುರೂಜಿ, ರಾಮಪ್ಪ, ಉದ್ಘಾಟನೆ: ವಿ. ಸುನಿಲ್ ಕುಮಾರ್, ನಾರಾಯಣಗುರು ಭಾವಚಿತ್ರಕ್ಕೆ ಪುಷ್ಪನಮನ: ಡಾ. ನಾಗಲಕ್ಷ್ಮಿ ಚೌಧರಿ, 'ಆಚಾರದ ಶರಣೆ ಅಕ್ಕಮ್ಮ ಟ್ರಸ್ಟ್'ಗೆ ಚಾಲನೆ: ಎಸ್. ಮಧು ಬಂಗಾರಪ್ಪ, 'ವರ್ಕಿಂಗ್ ವುಮೆನ್ಸ್ ಹಾಸ್ಟೆಲ್' ಯೋಜನೆಗೆ ಚಾಲನೆ: ಕೋಟ ಶ್ರೀನಿವಾಸ ಪೂಜಾರಿ, ಆಯೋಜನೆ: ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘ, ಸ್ಥಳ: ಟೌನ್ ಹಾಲ್, ಜೆ.ಸಿ. ರಸ್ತೆ, ಬೆಳಿಗ್ಗೆ 10.30



ಲಕ್ಷ್ಮಿ ಗೋಪಾಲಸ್ವಾಮಿ

ವನಮಾಲ ಸಂಗೀತೋತ್ಸವದ ಅಂಗವಾಗಿ 'ಮಕ್ಕಳಿಗಾಗಿ ಮೈಸೂರಿನ ಚಿನ್ನರಿ ಸಂಗೀತ ಭಾಗ-2' ಕಾರ್ಯಕ್ರಮ: ಅತಿಥಿಗಳು: ಲಕ್ಷ್ಮಿ ಗೋಪಾಲಸ್ವಾಮಿ, ಆರ್.ವಿ. ರಾಘವೇಂದ್ರ, ಸುಮತಿ ರವೀಂದ್ರನಾಥ್, ಮೀರಾ ರಾಜಾರಾಮ್ ಪ್ರಾಣೇಶ್, ಆಯೋಜನೆ: ವನಮಾಲಾ ಸೆಂಟರ್ ಫಾರ್ ಆರ್ಟ್ ಆ್ಯಂಡ್ ಕಲ್ಚರ್ ಟ್ರಸ್ಟ್, ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ ನಾಲ್ಕನೇ ಟಿ ಬ್ಲಾಕ್, ಬೆಳಿಗ್ಗೆ 10.15



ರವಿಕಾಂತೇಗೌಡ

'ವ್ಯಕ್ತಿ ಮತ್ತು ಪುಸ್ತಕಗಳು' ಕುರಿತು ಸಂವಾದ: ಬಿ.ಆರ್. ರವಿಕಾಂತೇಗೌಡ, ಆಯೋಜನೆ: ಸಾಹಿತ್ಯ ಅಕಾಡೆಮಿ, ಸ್ಥಳ: ಸಾಹಿತ್ಯ ಅಕಾಡೆಮಿ ಸಭಾಂಗಣ, ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 11



ಗುರುರಾಜ ಕರಜಗಿ

'ಪ್ರೊ.ವಿ.ಕೃ. ಗೋಕಾಕ್ ಪ್ರಶಸ್ತಿ' ಪ್ರದಾನ: ವೀರಪ್ಪ ಮೊಯಿಲಿ, ಪ್ರಶಸ್ತಿ ಪುರಸ್ಕೃತರು: ಗುರುರಾಜ ಕರಜಗಿ, ಉಪಸ್ಥಿತಿ: ಎಚ್.ಎನ್. ಸುರೇಶ್, ನರಹಳ್ಳಿ ಬಾಲಸುಬ್ರಹ್ಮಣ್ಯ, ಅನಿಲ್ ಗೋಕಾಕ್, ಆಯೋಜನೆ: ಭಾರತೀಯ ವಿದ್ಯಾ ಭವನ, ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್, ಸ್ಥಳ: ಕೆ.ಆರ್. ಜಿ. ಸಭಾಂಗಣ, ಭಾರತೀಯ ವಿದ್ಯಾ ಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಪೂನಾ ಒಪ್ಪಂದದ ಕರಾಳ ದಿನದ ಅಂಗವಾಗಿ 'ಸಾಮಾಜಿಕ ನ್ಯಾಯ ಹಾಗೂ ಪ್ರಸ್ತುತ ಸಂದರ್ಭದಲ್ಲಿ ರಾಜಕಾರಣ' ಕುರಿತು ವಿಚಾರಸಂಕಿರಣ: ಉದ್ಘಾಟನೆ: ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಎಂ.ಸಿ. ನಾರಾಯಣ್, ವಿಚಾರ ಮಂಡನೆ: ನಾರಾಯಣ ಘಟ್ಟ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಅಲುಮ್ನಿ ಭವನ, ಕೆ.ಆರ್. ವೃತ್ತ, ಬೆಳಿಗ್ಗೆ 11.30

ಆರೋಗ್ಯ ಮೇಳ: ಅತಿಥಿಗಳು: ದಿನೇಶ್ ಗುಂಡೂರಾವ್, ತುಷಾರ್ ಗಿರಿನಾಥ್, ಪ್ರಿಯಾ ಹಾಸನ, ಆಯೋಜನೆ: ಆರೋಗ್ಯ ವರ್ಲ್ಡ್ ಆ್ಯಂಡ್ ಮೈ ಥಾಲಿ, ಸ್ಥಳ: ದಿ ಗ್ರೀನ್ ಪಾತ್ ಆರ್ಗ್ಯಾನಿಕ್ ರೆಸ್ಟೊರೆಂಟ್, ಸಂಪಿಗೆ ರಸ್ತೆ, ಮಲ್ಲೇಶ್ವರ, ಮಧ್ಯಾಹ್ನ 12

'ಮಂಗಳಯಾನದ ಅದ್ಭುತ ಸಾಧನೆಗಳು' ಸಾರ್ವಜನಿಕ ಉಪನ್ಯಾಸ: ಬಿ.ಆರ್. ಗುರುಪ್ರಸಾದ್, ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಸಂಜೆ 4

'ನಿಮ್ಮ ಉದ್ಯಾನದಲ್ಲಿ ಹಬ್ಬ': ಆಯೋಜನೆ: ಅಬ್‌ಬಾಕ್ಸಿಂಗ್ ಬೆಂಗಳೂರು ಪ್ರತಿಷ್ಠಾನ, ಸ್ಥಳ: ಸುಭಾಷಚಂದ್ರ ಬೋಸ್ ಪಾರ್ಕ್, ವಿಜಯನಗರ, ಸಂಜೆ 4

ಲಕ್ಷ್ಮಿ ಮುರಡೇಶ್ವರ್ ಪುರಿ 'ಸ್ವಾಲೋವಿಂಗ್ ದಿ ಸನ್' ಪುಸ್ತಕ ಬಿಡುಗಡೆ, ಸಂವಾದ: ಅನಿತಾ ನಾಯರ್, ಅತಿಥಿ: ಗೀತಾಂಜಲಿ ವಿಕ್ರಂ ಕಿರ್ಲೋಸ್ಕರ್, ಸ್ಥಳ: ತಾಜ್ ವೆಸ್ಟ್‌ಎಂಡ್, ರೇಸ್‌ಕೋರ್ಸ್ ರಸ್ತೆ, ಸಂಜೆ 5

'ಸ್ವರ ಲಯ ಲಹರಿ' ಸಂಗೀತ ಕಾರ್ಯಕ್ರಮ: ಗಾಯನ: ಕೃಷ್ಣೇಂದ್ರ ಸಮರ್ಥ, ತಬಲಾ: ರೂಪಕ್ ಕಲ್ಲೂರ್‌ಕರ್, ಹಾರ್ಮೋನಿಯಂ: ತೇಜಸ್ ಕಟೋಟಿ, ತಬಲಾ ಸೋಲೊ: ಅರವಿಂದ್‌ಕುಮಾರ್ ಅಝಾದ್, ಹಾರ್ಮೋನಿಯಂ ಲೆಹ್ರಾ: ಸೂರ್ಯ ಉಪಾಧ್ಯಾಯ, ಆಯೋಜನೆ: ಸಪ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

'ಕಾವ್ಯ ಸಂಧ್ಯಾ' ಇಂಚರ ತಿಂಗಳ ಕಾರ್ಯಕ್ರಮ: ಉಪಸ್ಥಿತಿ: ಎ.ಎಂ. ಚಂದ್ರಶೇಖರ, ಜಿ.ಎಸ್. ನಾರಾಯಣ, ಆಯೋಜನೆ ಮತ್ತು ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ಅಪೂರ್ವ ಮ್ಯಾನ್ಷನ್, ದೊಡ್ಡಬೊಮ್ಮಸಂದ್ರ, ಸಂಜೆ 5.30

'ಮ್ಯೂಸಿಕಲ್ ರಾಕ್ಸ್': ಉದ್ಘಾಟನೆ: ಕೆ.ಎಚ್.ಮುನಿಯಪ್ಪ, ಅಧ್ಯಕ್ಷತೆ: ಎನ್.ಎ.ಹ್ಯಾರಿಸ್, ಗೌರವ ಸಮರ್ಪಣೆ: ಚೇತನ್, ಜಿತೇಂದ್ರ ಶೆಟ್ಟಿ, ಮಾಯಣ್ಣ, ಮನೋಹರ್ ಕೆ.ಜಿ., ಉಪಸ್ಥಿತಿ: ಆರ್. ಶ್ರೀಧರ್, ಶಿವಕುಮಾರ್ ಬೆಳ್ಳಿತಟ್ಟೆ, ಆಯೋಜನೆ ಮತ್ತು ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕಬ್ಬನ್ ಉದ್ಯಾನ, ಸಂಜೆ 6

ಎರಡು ದಿನದ ನಾಟಕೋತ್ಸವ: **'ಬೆಂಗಾಳೂರ್ ನಿರ್ಮಾತೃ ನಾಡಪ್ರಭು ಕೆಂಪೇಗೌಡ' ನಾಟಕ ಪ್ರದರ್ಶನ:** ರಚನೆ: ಆಂಜನೇಯ, ನಿರ್ದೇಶನ: ಎಚ್. ಎನ್. ಆನಂದಮೂರ್ತಿ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಸಿ.ಆರ್. ಸಿಂಹ ಸಾಂಸ್ಕೃತಿಕ ಭವನ, ಅಭಯಹಸ್ತ ಬಲಮುರಿ ಗಣಪತಿ ದೇವಸ್ಥಾನ, ನಾಲ್ಕನೇ ಮುಖ್ಯರಸ್ತೆ, ಜ್ಞಾನಭಾರತಿ ಬಡಾವಣೆ, ವಳಗೇರ ಹಳ್ಳಿ, ಸಂಜೆ 7

ಸಾರ್ವಜನಿಕ ಪ್ರಕಟಣೆ

1. ನನ್ನ ಕಕ್ಷಿದಾರರಾದ **ಮೆ.ಪೋತಿಸ್ ರಿಟೈಲ್ ಪ್ರೈವೇಟ್ ಲಿಮಿಟೆಡ್, ಚೆನ್ನೈ** ರವರು ಕೆಳಗೆ ತಿಳಿಸಿದ ಅನುಸೂಚಿತ ಆಸ್ತಿಯನ್ನು (ಇನ್ನು ಮುಂದೆ 'ಅನುಸೂಚಿತ ಆಸ್ತಿ' ಎಂದು ಉಲ್ಲೇಖಿಸಲಾಗುತ್ತದೆ) ದಿವಂಗತ ಶ್ರೀ ನಾತುಭಾಯ್ ಮಾಗನ್ಭಾಯ್ ಪಟೇಲ್ ರವರ ಪುತ್ರಿಯರಾದ ಶ್ರೀಮತಿ ದೀಪ್ತಿ ಹರೀಶ್ ಪಟೇಲ್ @ ದೇಪತಿ ಪಟೇಲ್ ಮತ್ತು ಶ್ರೀಮತಿ ನೀನಾ ಆರ್. ಪಟೇಲ್ @ ನೀನಾ ಪಟೇಲ್ ವಾಸ: ನಂ.19/27 ಮತ್ತು 19/27/1, 1ನೇ ಮುಖ್ಯರಸ್ತೆ, ಜಯಮಹಲ್ ಎಕ್ಸ್‌ಟೆನ್ಷನ್, ಬೆಂಗಳೂರು–560046 (ಇನ್ನು ಮುಂದೆ 'ಮಾಲೀಕರು' ಎಂದು ಉಲ್ಲೇಖಿಸಲಾಗುತ್ತದೆ) ಇವರಿಂದ ಖರೀದಿಸಲು ಬಯಸಿದ್ದಾರೆ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ. ಮಾಲೀಕರಿಂದ ಪ್ರತಿನಿಧಿಸಲ್ಪಟ್ಟ ನಮ್ಮ ಕಕ್ಷಿದಾರರು ತಮ್ಮ ಸ್ಪಷ್ಟ ಮತ್ತು ಮಾರಾಟ ಮಾಡಬಹುದಾದ ಶೀರ್ಷಿಕೆ ಮತ್ತು ಸಂಪೂರ್ಣ ಹಕ್ಕು ಹಾಗೂ ಹಿತಾಸಕ್ತಿಯೊಂದಿಗೆ ಅನುಸೂಚಿತ ಆಸ್ತಿಯ ಏಕೈಕ ಮತ್ತು ಸಂಪೂರ್ಣ ಮಾಲೀಕರಾಗಿದ್ದಾರೆ ಹಾಗೂ ಇವರ ಹೊರತಾಗಿ ಅನುಸೂಚಿತ ಆಸ್ತಿಯ ಮೇಲೆ ಯಾವುದೇ ಹಕ್ಕು ಅಥವಾ ಕ್ಲೇಮು ಹೊಂದಿರುವ ಯಾವುದೇ ವ್ಯಕ್ತಿ/ಗಳು ಇರುವುದಿಲ್ಲ.
2. ಪ್ರತಿನಿಧಿತ ಮಾಲೀಕರು ಅನುಸೂಚಿತ ಆಸ್ತಿ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಪಟ್ಟಂತೆ ಯಾವುದೇ ಒಪ್ಪಂದವನ್ನು ಮಾಡಿಕೊಂಡಿಲ್ಲ ಮತ್ತು ಅನುಸೂಚಿತ ಆಸ್ತಿಗೆ ಸಂಬಂಧಪಟ್ಟಂತೆ ಅಡಮಾನ ಅಥವಾ ಯಾವುದೇ ರೀತಿಯ ಹೊರೆಯನ್ನು ಸೃಷ್ಟಿಸಿಲ್ಲ.
3. ಮಾಲೀಕರು 5.9.2024ರಂದು ನನ್ನ ಕಕ್ಷಿದಾರರೊಂದಿಗೆ ನೋಂದಾಯಿತ ಮಾರಾಟ ಒಪ್ಪಂದ ಮಾಡಿಕೊಂಡಿದ್ದಾರೆ ಮತ್ತು ಮಾರಾಟದ ಪರಿಗಣನೆಯ ಭಾಗವಾಗಿ ರೂ.33.50 ಕೋಟಿಗಳನ್ನು ಸ್ವೀಕರಿಸಿದ್ದಾರೆ ಹಾಗೂ ಕ್ರಯ ಪತ್ರದ ನೋಂದಣಿ ಸಮಯದಲ್ಲಿ ಬಾಕಿ ಹಣವನ್ನು ಪಾವತಿಸುವುದಾಗಿ ನನ್ನ ಕಕ್ಷಿದಾರರು ಒಪ್ಪಿಕೊಂಡಿದ್ದಾರೆ.
4. ನನ್ನ ಕಕ್ಷಿದಾರರು ಮಾಲೀಕರಿಂದ ಕೆಲವು ದಾಖಲೆಗಳನ್ನು ಕೇಳಿದ್ದಾರೆ, ಈ ದಾಖಲೆಯಿಲ್ಲದೆ ಮಾಲೀಕರು ಅನುಸೂಚಿತ ಆಸ್ತಿಯ ಮೇಲೆ ತಮ್ಮ ಸಂಪೂರ್ಣ ಹಕ್ಕನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಅಂತಹ ದಾಖಲೆಗಳ ಸ್ವೀಕೃತಿಯ ನಂತರ ಮಾರಾಟ ವಹಿವಾಟನ್ನು ಪೂರ್ಣಗೊಳಿಸಲು ಸಿದ್ಧರಿದ್ದಾರೆ ಮತ್ತು ಆ ಬಗ್ಗೆ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ.
5. ಅನುಸೂಚಿತ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು, ಶೀರ್ಷಿಕೆ, ಕ್ಲೇಮು ಅಥವಾ ಹಿತಾಸಕ್ತಿ ಹೊಂದಿರುವ ಅಥವಾ ನನ್ನ ಕಕ್ಷಿದಾರರ ಪರವಾಗಿ ಆಸ್ತಿ ಮಾರಾಟದ ವಹಿವಾಟಿಗೆ ಆಕ್ಷೇಪಣೆ ಹೊಂದಿರುವ ಯಾವುದೇ ವ್ಯಕ್ತಿ ತಮ್ಮ ಹಕ್ಕು, ಶೀರ್ಷಿಕೆ, ಕ್ಲೇಮನ್ನು ಕೆಳಸಹಿದಾರರಿಗೆ ತಿಳಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಈ ಪ್ರಕಟಣೆಯ ದಿನಾಂಕದಿಂದ ಏಳು (7) ದಿನಗಳೊಳಗೆ ಪೂರಕ ದಾಖಲೆಗಳೊಂದಿಗೆ ತಮ್ಮ ಹಿತಾಸಕ್ತಿ ಅಥವಾ ಆಕ್ಷೇಪಣೆಯನ್ನು ಸಲ್ಲಿಸಬಹುದು. ತಪ್ಪಿದಲ್ಲಿ, ಅನುಸೂಚಿತ ಆಸ್ತಿ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಮತ್ತು ನನ್ನ ಕಕ್ಷಿದಾರರ ಪರವಾಗಿ ಮಾಲೀಕರಿಂದ ಆಸ್ತಿ ಮಾರಾಟಕ್ಕೆ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಭಾವಿಸಲಾಗುತ್ತದೆ.
6. ಅಲ್ಲದೆ, ಯಾವುದೇ ವ್ಯಕ್ತಿ/ಗಳು ಸದರಿ ಅನುಸೂಚಿತ ಆಸ್ತಿಯೊಂದಿಗೆ ವ್ಯವಹರಿಸದಂತೆ ನಿರ್ದೇಶಿಸಲಾಗಿದೆ.

ಶೆಡ್ಯೂಲ್

ಸ್ಥಿರಾಸ್ತಿಯ ಎಲ್ಲಾ ಭಾಗಗಳು ಮತ್ತು ತುಂಡುಗಳು ಪುರಸಭೆ ಸಂಖ್ಯೆ 241, 241ಎ ಮತ್ತು 242, ಬಿಬಿಎಂಪಿ ಖಾತಾ ಸಂಖ್ಯೆ 46/34/32/241, 47/35/32ಎ/241ಎ ಮತ್ತು 48/36/33/242, ಹಳೇ ಖಾತಾ ಸಂಖ್ಯೆ 44/34, 45/35 ಮತ್ತು 46/36, ಸರ್ವೆ ನಂ.3/2, 4/2 ಮತ್ತು 3/1ಎ ಜೊತೆಗೆ ಶಿಥಿಲಗೊಂಡ ಶೆಡ್‌ಗಳು ಬೆಂಗಳೂರು ದಕ್ಷಿಣ ತಾಲೂಕಿನ ಕೆಂಗೇರಿ ಹೋಬಳಿಯ ಗುಂಡೆ ಪಂತರಪಾಳ್ಯ ಗ್ರಾಮದಲ್ಲಿ ನೆಲೆಸಿದ್ದು, ಸದರಿ ಆಸ್ತಿಯನ್ನು ಕೃಷಿಯೇತರ ಕೈಗಾರಿಕಾ ಉದ್ದೇಶಕ್ಕಾಗಿ ಯಥಾವತ್ತು ಪರಿವರ್ತಿಸಿ ಅಧಿಕೃತ ಜ್ಞಾಪಕ ಪತ್ರ ಸಂಖ್ಯೆ ಬಿ.ಡಿಐಎಸ್.ಎಎಲ್‌ಎನ್.ಎಸ್‌ಆರ್.4612 ಮೂಲಕ ದಿನಾಂಕ 09.11.1970ರಂದು ಬೆಂಗಳೂರು ಜಿಲ್ಲೆಯ ಉಪ ಆಯುಕ್ತರು ಆದೇಶ ಹೊರಡಿದ್ದಾರೆ. ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು ವ್ಯಾಪಿಯಲ್ಲಿದ್ದ 90,144 ಚದರಡಿ ಅಳತೆಯ ಆಸ್ತಿಯು ಈಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.160, ರಾಜರಾಜೇಶ್ವರಿ ನಗರ ವಾರ್ಡ್ ವ್ಯಾಪ್ತಿಯಲ್ಲಿ ಬರುತ್ತದೆ ಮತ್ತು ಇದರ ಚೆಕ್ಕುಬಂದಿ: **ಪೂರ್ವಕ್ಕೆ:** ಸರ್ವೆ ನಂ.3 ಮತ್ತು 4ರಲ್ಲಿನ ಉಳಿಕೆ ಭೂಮಿ (ಪೋಡಿ ನಂತರದ ಸರ್ವೆ ನಂ.3/1 ಮತ್ತು 4/1), **ಪಶ್ಚಿಮಕ್ಕೆ:** ಮೈಸೂರು ರಸ್ತೆ, **ಉತ್ತರಕ್ಕೆ:** ನಾಲೆ, **ದಕ್ಷಿಣಕ್ಕೆ:** ಸರ್ವೆ ನಂ.3 ಮತ್ತು 4ರಲ್ಲಿನ ಉಳಿಕೆ ಭೂಮಿ (ಪೋಡಿ ನಂತರದ ಸರ್ವೆ ನಂ.3/1 ಮತ್ತು 4/1).

ದಿನಾಂಕ: 28.9.2024 **ಸ್ಥಳ: ಬೆಂಗಳೂರು**

ಸಹಿ/– **ರವಿಶಂಕರ್ ಎ.,** ವಕೀಲರು
ನಂ.404, ರಾಂಕಾ ಪಾರ್ಕ್ ಅಪಾರ್ಟ್‌ಮೆಂಟ್ಸ್, ಲಾಲ್‌ಬಾಗ್ ರಸ್ತೆ, ರಿಚ್ಮಂಡ್ ಸರ್ಕಲ್ ಹತ್ತಿರ, ಬೆಂಗಳೂರು–560027.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

JOB OPPORTUNITIES

Manager

WANTED MALE ASSISTANT MANAGER, multi task, knowledge of Income Tax/Accounts, Computer and Kannada Typing must, qualification B.Com., PG, Age below-50 years, residing nearby Electronic city preferable, interested Candidates must send CV to- bfcaa1970@gmail.com. Contact- 9886022527

Multiple Vacancy

SWASTIK AIR CONDITIONERS JAYANAGAR REQUIRED HVAC PROJECT ENGINEER/ AC TECHNICIAN/ AC HELPERS AND ELECTRICIAN IMMEDIATE: 6364940675/ 9686700081

Teachers/ Professors

TEACHER REQUIRED FOR SOCIAL STUDIES primary and High school contact the Kenmore School Basavanagudi email kenmoreschool@gmail.com or whatsapp 9901501185

Hasanath Education Society's
Hasanath College for Women & Hasanath College
Regd. Office: 43, Dickenson Road, Bengaluru-560042, Karnataka

FILLING UP OF VACANT TEACHING POSTS
Minority and Grant-in-Aid Institutions
Applications are invited for the following Posts as per UGC Norms

SL No.	Cadre	Subject & No. of Posts	Category
1	Assistant Professor (Language Departments)	English (01), Kannada(01), Hindi (01), Urdu (02), Tamil (01),	Minority/Open
2	Assistant Professor (Arts Departments)	History (02), Economics (01), Political Science (01), Sociology (01)	Minority/Open
3	Assistant Professor (Commerce Department)	Commerce (07)	Minority/Open
4	Physical Education Director	Physical Education (01)	Minority/Open
5	Librarian	Librarian (01)	Minority/Open

The above posts are open to all, however candidates from any category can apply. **Qualification:** Master Degree & NET/SLET/Ph.D in the relevant subject. The Qualification, Pay scales and other requirements as prescribed by the UGC and Government of Karnataka. Interested candidates to submit their resume, academic credentials, experience certificates alongwith a Demand Draft of Rs. 500 drawn in favour of "Hasanath Education Society", Bengaluru. **Applications with full details be addressed to:** The Hon. Secretary, Hasanath Education Society, No. 43, Dickenson Road, Bengaluru-560042, Karnataka within 15 days from the date of publication of this advertisement.

Sd/- Hon. Secretary, Hasanath Education Society, Bengaluru

TRAINED POST/GRADUATE TEACHERS FOR HIGH SCHOOL ENGLISH, MATHS(PCM) KANNADA. NAVODAYA VIDYANIKETHANA, #19, Dinnur Main Road, RT-Nagar, Bangalore-32. 9343247885 080-23334266 navodayavidyanikethna222 @gmail.com .

General

EARN MORE than Rs:50,000/- per month, Part/ Full time, Age above 30 Years, Call: 9343616020

Engg/ Production Technical

REQUIRED DIPLOMA CIVIL ENGINEER FOR BUILDING CIVIL & INTERIOR WORKS AT BENGALURU 9448396682

RBT CNC Machine Plastic Moulded Operator Required Near Element Mall, Tanishdra Main Road. Contact: 9880372501.

WANTED SERVICE ENGINEERS, Diploma Mech./ ITI with 1- 2 years of experience in Servicing, Assembling of Blowers, Compressors, Pumps, any Machines. KAY International Pvt. Ltd. Ph: 080- 41571217. Email your Resumes to: bangalore@kayblowers.com

MATRIMONIAL

Brides Wanted

Muslim

SUNNI MUSLIM boy, 1994-born, MS in Engineering, working as a Senior Software Engineer in Europe. Looking for an elegant, educated bride Contact- (080-69103114)

SUNNI MUSLIM Divorcee, 1987 born, M.Tech, earning 50 LPA in Bangalore. Looking for a caring, educated match to start a new journey (080-69103145)

SUNNI Muslim Boy, MD in Neurology, 1993 born, employed at a renowned hospital in Bangalore, looking for a suitable, well-educated life partner. (080-69103150)

GULF-SETTLED, 1993-BORN, 5'10', MBA entrepreneur from a prestigious Bangalore family. Seeking a, educated bride. (080-69070609)

Grooms Wanted

Kannada

BEAUTIFUL 1996-BORN Kannada girl from an affluent Bangalore family. Looking for a compatible groom from the Gowda community. Contact- (080-69141343)

Muslim

MUSLIM GIRL of Affluent family in Bangalore, born 1996/5'3'/ MD Radiodiagnosis. Is looking for suitable match MD/MS/or higher (allopathic) residing in Bangalore. Kindly contact. 9164400029

BUSINESS


Business Offers

Business For Sale

SALE PROFITABLY running 40years old English medium School. Pre-School to 10th Standard. State Syllabus Near Kothanur. Call Arun 9845077299.

Advt.

ಆಧುನಿಕ ಕೃಷಿಯಲ್ಲಿ ತೊಡಗಿಸಿಕೊಂಡ ದಂಪತಿ




ರೈತ ದಂಪತಿ ಕುಟುಂಬ – ಪ್ರವೀಣ್ ಕುಮಾರ್ ರೊದ್ದಂ ಮತ್ತು ಸಾಯಿ ಧಾತ್ರಿಶ್ರೀ ವಂಗವೀಟಿ

ಕಾರ್ಪೋರೇಟ್ ಜಗತ್ತು ಎಂಥವರನ್ನು ಮರಳು ಮಾಡುತ್ತಿದೆ. ಕೈತುಂಬಾ ಸಂಬಳ, ಅತ್ಯಾಧುನಿಕ ಸೌಲಭ್ಯಗಳು, ಅಲ್ಲಿನ ಜೀವನಶೈಲಿ, ಹಣ ಎಲ್ಲವೂ ಯುವಜನಾಂಗವನ್ನು ಕೈಬೀಸಿ ಕರೆಯುತ್ತಿದೆ. ಇಂತಹ ಜೀವನ ನಡೆಸಬೇಕು ಎಂಬುದು ಹಲವರು ಕನಸೂ ಸಹ ಆಗಿರುತ್ತದೆ. ಆದರೆ, ದೂರದ ಅಮೆರಿಕಾದಲ್ಲಿ ಕಾರ್ಪೋರೇಟ್ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದ ದಂಪತಿ ಅಂತಹ ಜೀವನಶೈಲಿ ಬಿಟ್ಟು ಮರಳಿ ಮಣ್ಣಿಗೆ ಎಂಬ ನಾಣ್ನುಡಿಯಂತೆ ಭಾರತಕ್ಕೆ ವಾಪಾಸ್ಸಾಗಿ ಮಣ್ಣಿನ ಮಕ್ಕಳಾಗಿದ್ದಾರೆ. ತಮ್ಮ ಕನಸುಗಳನ್ನು ಇಲ್ಲಿನ ಮಣ್ಣಿನಲ್ಲಿ ಬಿತ್ತುತ್ತಿದ್ದಾರೆ.

ಕೃಷಿಕ ದಂಪತಿಗಳಾದ ಪ್ರವೀಣ್ ಕುಮಾರ್ ರೊದ್ದಂ ಮತ್ತು ವಂಗವೀಟಿ ಸಾಯಿ ಧಾತ್ರಿಶ್ರೀ ಇಲ್ಲಿನ ಪರಿಸರಕ್ಕೆ ಮಾರು ಹೋಗುವ ಮೂಲಕ ಕೃಷಿ ಉದ್ಯಮಿಗಳಾಗುವತ್ತ ಹೆಜ್ಜೆ ಇರಿಸಿದ್ದಾರೆ. ಈ ದಂಪತಿಗಳ ಕುಟುಂಬ ನಾಲ್ಕು ತಲೆಮಾರುಗಳಿಂದ ಉದ್ಯಮದಲ್ಲೇ ತೊಡಗಿಸಿಕೊಂಡಿದ್ದಾರೆ. ಆದರೆ, ಈ ದಂಪತಿಗಳು ಮಾತ್ರ ಸಾವಯವ ಕೃಷಿಯತ್ತ ಚಿತ್ತ ಮಾಡಿದ್ದಾರೆ.

ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಪ್ರವೀಣ್ ಮತ್ತು ಸಾಯಿಧಾತ್ರಿ ಬಯೋಇನ್ಫಾರ್ಮ್ಯಾಟಿಕ್ಸ್‌ನಲ್ಲಿ ಇಂಜಿನಿಯರಿಂಗ್ ಪದವೀಧರರು. ಕಾರ್ಪೋರೇಟ್ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದ ಇವರು ಕೃಷಿ ಜಗತ್ತಿಗೆ ಕಾಲಿಟ್ಟಿದ್ದು ಅಚ್ಚರಿ. ಸಾಂಪ್ರದಾಯಿಕ ಕೃಷಿ, ಹೊಸ ಪರಿಕಲ್ಪನೆಗಳು ಮತ್ತು ತಂತ್ರಜ್ಞಾನದ ನಡುವೆ ಸರಿಯಾದ ಸಮತೋಲನವನ್ನು ಕಂಡುಕೊಳ್ಳುವ ಅಗತ್ಯವನ್ನು ಅರಿತಿರುವ ಪ್ರವೀಣ್ ಮತ್ತು ಸಾಯಿಧಾತ್ರಿ ಕೃಷಿಯಲ್ಲಿ ಹೊಸತನ ಕಾಣುವ ಉತ್ಸುಕದಲ್ಲಿದ್ದಾರೆ.

ಪ್ರವೀಣ್ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆರೆಗಳ ಪುನರುಜ್ಜೀವನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅರ್ಧ ಶತಮಾನದಿಂದ 18 ಎಕರೆ ಜಲಾವೃತವಾಗಿವೆ. ಈ ಪ್ರದೇಶದ ಸುತ್ತಮುತ್ತಲಿನ 8 ಹಳ್ಳಿಗಳಿಗೆ ನೀರು ಒದಗಿಸಲು ಸಹಾಯ ಮಾಡಿದ್ದ ಕೆರೆಯನ್ನು ಸಂರಕ್ಷಿಸುವಂತೆ ಅಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಗಮನ ಸೆಳೆದಿದ್ದರು. ನೀರಿನ ಸಂರಕ್ಷಣೆ ಮತ್ತು ಅಂತರ್ಜಲ ಪುನರುಜ್ಜೀವನದ ಕಾರಣಕ್ಕಾಗಿ ಪ್ರವೀಣ್ ತಮ್ಮ ಸಮಯವನ್ನು ಮೀಸಲಿಟ್ಟಿದ್ದಾರೆ.

ಇದೀಗ ಪ್ರವೀಣ್ ದಂಪತಿ ಸುತ್ತಮುತ್ತಲಿನ ಪ್ರದೇಶಗಳ ರೈತರು ಮತ್ತು ಕೃಷಿ ಆಸಕ್ತರನ್ನು ಪ್ರತಿ ತಿಂಗಳ ಎರಡನೇ ಶನಿವಾರದಂದು ತಮ್ಮ ಜಮೀನಿಗೆ ಭೇಟಿ ನೀಡಲು ಆಹ್ವಾನಿಸುತ್ತಾರೆ. ಈ ಸಂದರ್ಭದಲ್ಲಿ ತಾವು ಅನುಸರಿಸಿದ ಪ್ರಕ್ರಿಯೆಯನ್ನು ಜಮೀನಿಗೆ ಭೇಟಿ ನೀಡಿದವರಿಗೆ ಅರ್ಥವಾಗುವಂತೆ ತಂಡದೊಂದಿಗೆ ಸಂವಹನ ನಡೆಸುತ್ತಾರೆ. ಈ ವಿಧಾನಗಳನ್ನು ತಮ್ಮ ಜಮೀನುಗಳಲ್ಲಿ ಅನುಸರಿಸಿಕೊಳ್ಳುವಂತೆ ಸಲಹೆ ನೀಡುತ್ತಾರೆ.

ಸಾಂಪ್ರದಾಯಿಕ ಕೃಷಿ ಮತ್ತು ಇಸ್ರೇಲ್‌ನ ಪಾಲಿಹೌಸ್ ಹೊಸ ವಿಧಾನಗಳನ್ನು ಸಂಯೋಜಿಸುವ ವಿಧಾನ ಪ್ರಮುಖವಾಗಿದೆ. ಬಾಳೆಹಣ್ಣು, ರಾಗಿ ಮತ್ತು ಗುಲಾಬಿ ಹೂಗಳ ಉತ್ತಮ ಗುಣಮಟ್ಟದ ಇಳುವರಿಯನ್ನು ಇವರ ಜಮೀನಿನಲ್ಲಿ ಕಾಣಬಹುದಾಗಿದೆ. ಈ ಉತ್ಪನ್ನಗಳು ಕೃಷಿ ಮಾರುಕಟ್ಟೆಯಲ್ಲಿ ಗಮನ ಸೆಳೆದಿದೆ.

ಪಾಲಿಹೌಸ್ ಮತ್ತು ತೆರೆದ ಕೃಷಿಯ ಬಳಕೆಯಿಂದ ಕೆಂಪು ಪಾಲಕ್, ಕೋಸುಗಡ್ಡೆ, ಕೆಂಪು ಎಲೆಕೋಸು, ಲೆಟಿಸ್(ಸೊಪ್ಪು) ಸೇರಿದಂತೆ ಇಂಗ್ಲೀಷ್ ತರಕಾರಿ ಬೆಳೆಗಳನ್ನು ವಿಸ್ತರಿಸಲು ಪ್ರವೀಣ್ ದಂಪತಿಗೆ ಸಾಧ್ಯವಾಗಿದೆ. ಕ್ಯಾರೆಟ್, ದೊಣ್ಣೆ ಮೆಣಸಿನಕಾಯಿ ಮತ್ತು ಮೂಲಂಗಿ ಬೆಳೆಗಳನ್ನು ಕಾಣಬಹುದಾಗಿದೆ.

ಮುಂದಿನ ದಿನಗಳಲ್ಲಿ ದಂಪತಿಗಳು ಕೃಷಿಗಾಗಿ ನೀರಿನ ಪ್ರಾಮುಖ್ಯತೆ ಮತ್ತು ದಕ್ಷತೆಯ ಬಗ್ಗೆಯೂ ಗಮನಹರಿಸಿದ್ದು, ಅಂತರ್ಜಲ ಸಂರಕ್ಷಣೆಯ ಕ್ಷೇತ್ರದಲ್ಲಿ ಸಾಕಷ್ಟು ಸಕ್ರಿಯರಾಗಿದ್ದಾರೆ. ಜೊತೆ ಜೊತೆಗೆ ಸಾಂಪ್ರದಾಯಿಕ ಕೃಷಿ ತಜ್ಞರೊಂದಿಗೆ ಸಂವಹನ, ಸೆಮಿನಾರ್‌ಗಳಿಗೆ ಭೇಟಿ ನೀಡಿ ಕೃಷಿಯಲ್ಲಿನ ಆಗು ಹೋಗುಗಳ ಕುರಿತು ಮಾಹಿತಿ ಪಡೆಯುತ್ತಾರೆ. ಜೊತೆಗೆ ಹೊಸ ಹೊಸ ಪ್ರಯೋಗಗಳನ್ನು ಸಹ ಮಾಡುವ ಮೂಲಕ ಕೃಷಿಯಲ್ಲಿ ಸುಸ್ಥಿರತೆ ಕಂಡುಕೊಳ್ಳುತ್ತಿದ್ದಾರೆ. ಇದರಿಂದ ವಿಶ್ವ ದರ್ಜೆಯ ಗುಣಮಟ್ಟದಲ್ಲಿ ಉತ್ತಮ ಇಳುವರಿಯನ್ನು ಸಾಧಿಸಲು ಸಹಾಯವಾಗಿದೆ ಎಂಬುದು ದಂಪತಿಗಳ ಅಭಿಪ್ರಾಯ.

ಕೃಷಿಯಲ್ಲಿ ಆದಾಯಗಳಿಸಲು ಪ್ರಮುಖವಾಗಿ ಮಾರುಕಟ್ಟೆ, ಋತು, ಮಣ್ಣು, ಮಾರುಕಟ್ಟೆ ಪ್ರವೃತ್ತಿಯನ್ನು ಗಣನೆಗೆ ತೆಗೆದುಕೊಂಡು ಸಾವಯವ ಕೃಷಿಗೆ ತೊಡಗಿದ್ದಾರೆ. ಈ ವಿಧಾನ ಹೆಚ್ಚು ವೆಚ್ಚದ ದಕ್ಷತೆಯನ್ನು ಹೊಂದಿದೆ. ಈ ಮೂಲಕ ಹೆಚ್ಚಿನ ಇಳುವರಿ ಮತ್ತು ಅಸಾಧಾರಣ ಗುಣಮಟ್ಟವನ್ನು ಹೆಚ್ಚಿಸಿಕೊಂಡಿದೆ. ಈ ವಿಶಿಷ್ಟ ವಿಧಾನವನ್ನು ರೈತರು ತಮ್ಮ ಭೂಮಿಯಲ್ಲೂ ಅಳವಡಿಸಿಕೊಳ್ಳಬಹುದಾಗಿದೆ.

ಕೃಷಿಯನ್ನು ಪ್ರಾಮಾಣಿಕವಾಗಿ ಮುಂದುವರೆಸಿದರೆ ಸುಸ್ಥಿರ ಜೀವನ ನಡೆಸಬಹುದು. ಅಲ್ಲದೇ, ಹಲವು ಅವಕಾಶಗಳು ಮುಂದಿನ ದಿನಗಳಲ್ಲಿ ಬರಲಿದೆ. ಅಲ್ಲದೇ, ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸಹ ಅನುಭವಿಸಬಹುದು. ಕೃಷಿಯಲ್ಲಿ ಅತಿ ಹೆಚ್ಚು ಯಶಸ್ಸನ್ನು ಬಯಸುತ್ತಿರುವ ಪ್ರವೀಣ್ ಮತ್ತು ಸಾಯಿ ಧಾತ್ರಿಶ್ರೀ ಅವರ ಮಾತುಗಳು.

ಪ್ರವೀಣ್, ಸಾಯಿ ಧಾತ್ರಿಶ್ರೀ ಅವರ ಕೃಷಿ ಕಥೆಯು, ಇಂದಿನ ವೇಗದ ಡಿಜಿಟಲ್ ವೃತ್ತಿಜೀವನದಲ್ಲಿ ಸಾಕಷ್ಟು ಒತ್ತಡ ಮತ್ತು ಆತಂಕಗಳೊಂದಿಗೆ ಬದುಕುತ್ತಿರುವ ಯುವಜನರನ್ನು ಪ್ರೇರೇಪಿಸುವಂತಿದೆ.



ಜಾಮೀನಿನಲ್ಲಿ ಹೊರಗಿರುವ ಆರೋಪಿ: ಎಡಿಜಿಪಿ

ಬೆಂಗಳೂರು: 'ಜಾಮೀನಿನ ಮೇಲೆ ಹೊರಗೆ ಇರುವ ಆರೋಪಿ ಎಚ್‌.ಡಿ. ಕುಮಾರಸ್ವಾಮಿ ನನ್ನ ವಿರುದ್ಧ ಅವಹೇಳನಕಾರಿ ಮತ್ತು ಆಧಾರರಹಿತ ಆರೋಪಗಳನ್ನು ಮಾಡಿದ್ದಾರೆ. ಜತೆಗೆ ಬೆದರಿಕೆಯನ್ನೂ ಹಾಕಿದ್ದಾರೆ' ಎಂದು ಲೋಕಾಯುಕ್ತ ವಿಶೇಷ ತನಿಖಾ ತಂಡದ ಎಡಿಜಿಪಿ ಎಂ.ಚಂದ್ರಶೇಖರ್ ತಮ್ಮ ಸಹೋದ್ಯೋಗಿಗಳಿಗೆ ಶನಿವಾರ ಪತ್ರ ಬರೆದಿದ್ದಾರೆ.

ಕುಮಾರಸ್ವಾಮಿ ಮಾಡಿದ ಆರೋಪಗಳನ್ನು ಅಲ್ಲಗೆಳೆದಿರುವ ಅವರು, 'ಎಷ್ಟೇ ಪ್ರಭಾವಿಯಾಗಿದ್ದರೂ ಅವರು ಆರೋಪಿ. ನಿಷ್ಪಕ್ಷಪಾತ ತನಿಖೆಯಿಂದ ನಮ್ಮನ್ನು ಹಿಮ್ಮೆಟ್ಟಿಸಲು ಈ ತಂತ್ರ ಅನುಸರಿಸುತ್ತಿದ್ದಾರೆ. ನಿಮ್ಮ ಮೇಲೆ ಇಂತಹ ಬಾಹ್ಯ ಒತ್ತಡಗಳು ಬರದೇ ಇರುವ ರೀತಿಯಲ್ಲಿ ಎಚ್ಚರವಹಿಸುತ್ತೇನೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

'ಹಂದಿಗಳೊಂದಿಗೆ ಎಂದಿಗೂ ಗುದ್ದಾಡಬೇಡಿ. ಗುದ್ದಾಡಿದರೆ ಹೊಲಸು ನಿಮಗೂ ಮೆತ್ತಿಕೊಳ್ಳುತ್ತದೆ, ಹಂದಿಗೂ ಮೆತ್ತಿಕೊಳ್ಳುತ್ತದೆ. ಆದರದು ಹಂದಿಗೆ ಇಷ್ಟವಾಗುತ್ತದೆ' ಎಂದು ಜಾರ್ಜ್ ಬರ್ನಾರ್ಡ್ ಶಾ ಮಾತನ್ನು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. 'ಕರ್ತವ್ಯ ನಿರ್ವಹಣೆಯಲ್ಲಿ ಅಪರಾಧಿಗಳು, ಆರೋಪಿಗಳನ್ನು ಎದುರು ಹಾಕಿಕೊಳ್ಳದೇ ಇರಲು ಸಾಧ್ಯವಿಲ್ಲ. ಆದರೆ, ನಾವು ನಮ್ಮ ಹಾದಿಯನ್ನು ಬಿಡಬಾರದು' ಎಂದು ಹೇಳಿದ್ದಾರೆ.

ಮಾಹಿತಿ ಸೋರಿಕೆ ಜಟಾಪಟಿ • ಅಧಿಕಾರಿ ವಿರುದ್ಧ ಸಾಕಷ್ಟು ದೂರುಗಳಿವೆ: ಎಚ್‌ಡಿಕೆ ಆರೋಪ


'ರಾಜಭವನದ ತನಿಖೆಗೆ ಭ್ರಷ್ಟ ಅಧಿಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಾಯುಕ್ತ ವಿಶೇಷ ತನಿಖಾ ತಂಡದ ಐಜಿಪಿ ಎಂ. ಚಂದ್ರಶೇಖರ್ ಮಹಾ ಭ್ರಷ್ಟ. ಮಾಹಿತಿ ಸೋರಿಕೆ ಸಂಬಂಧ ರಾಜಭವನ ಸಚಿವಾಲಯದಲ್ಲಿ ತನಿಖೆ ನಡೆಸಲು ಈ ಅಧಿಕಾರಿಯನ್ನು ಸರ್ಕಾರ ಬಳಸಿಕೊಳ್ಳುತ್ತಿದೆ' ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದರು.

ಮಾಧ್ಯಮಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ರಾಜಭವನ ಸಚಿವಾಲಯದ ಪಾತ್ರದ ಕುರಿತು ತನಿಖೆ ನಡೆಸಲು ಅನುಮತಿ ನೀಡಿ ಎಂದು ಈ ಅಧಿಕಾರಿ ಪತ್ರ ಬರೆದಿದ್ದಾನೆ. ಆದರೆ ಈತ ರಾಜ್ಯದಲ್ಲಿ ಕರ್ತವ್ಯದಲ್ಲಿರುವುದೇ ಕಾನೂನುಬಾಹಿರ. ಅಂತಹ ವ್ಯಕ್ತಿ ರಾಜಭವನದಲ್ಲಿ ತನಿಖೆ ನಡೆಸುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

'ಈತ ಆಂಧ್ರಪ್ರದೇಶದವನಾಗಿದ್ದು, ಹಿಮಾಚಲ ಪ್ರದೇಶ ಕೇಡರ್‌ನ ಐಪಿಎಸ್ ಅಧಿಕಾರಿ. ಕರ್ನಾಟಕಕ್ಕೆ ನಿಯೋಜನೆ ಮೇಲೆ ಬಂದು, ಇಲ್ಲೇ ಉಳಿದಿದ್ದಾನೆ. ನಿಯೋಜನೆ ಮೇಲೆ ಗರಿಷ್ಠ ಐದು ವರ್ಷವಷ್ಟೇ ಇರಬಹುದು. ಈತ ವೈದ್ಯಕೀಯ ಕಾರಣದ ನೆಪವೊಡ್ಡಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ 11-12 ವರ್ಷಗಳಿಂದಲೂ ಇಲ್ಲೇ ಇದ್ದಾನೆ' ಎಂದು ಆಪಾದಿಸಿದರು.



'ರಾಜ್ಯಪಾಲರು ಕೇಳಿದ ಮಾಹಿತಿ ನೀಡಬೇಕು' ಎಂದು 2011ರಲ್ಲಿ ಸಿದ್ದರಾಮಯ್ಯ ಹೇಳಿದ್ದ ವಿಡಿಯೊವನ್ನು ಎಚ್‌ಡಿ.ಕುಮಾರಸ್ವಾಮಿ ಸುದ್ದಿಗೋಷ್ಠಿಯಲ್ಲಿ ತೋರಿಸಿದರು —ಪ್ರಜಾವಾಣಿ ಚಿತ್ರ

'ಸುದ್ದಿ ವಾಹಿನಿಯೊಂದರ ಒಡೆಯನಾಗಿದ್ದ ವಿಜಯ್ ಟಾಟಾ ಜತೆ ಸೇರಿ, ಇದೇ ಚಂದ್ರಶೇಖರ್ ಸಂಚು ರೂಪಿಸುತ್ತಿದ್ದ. ಪಿಎಸ್‌ಎಲ್ ಎಂಬ ಕಂಪನಿಯ ಮಾಲೀಕರಿಂದ ₹100 ಕೋಟಿ ವಸೂಲಿ ಮಾಡಿದ್ದ, ತನ್ನ ಅಧೀನ ಅಧಿಕಾರಿಯಿಂದಲೇ ₹20 ಕೋಟಿ ಲಂಚ ಕೇಳಿದ್ದ. ಈತ ಮಾನ್ಯತಾ ಟೆಕ್ ಪಾರ್ಕ್ ಎದುರು, ರಾಜಕಾಲುವೆ ಮೇಲೆ ತನ್ನ ಪತ್ನಿ ಹೆಸರಿನಲ್ಲಿ 38 ಅಂತಸ್ತಿನ ಅಪಾರ್ಟ್‌ಮೆಂಟ್ ಕಟ್ಟುತ್ತಿದ್ದಾನೆ. ಅಧೀನ ಅಧಿಕಾರಿಗಳು, ಉದ್ಯಮಿಗಳು ಮತ್ತು ಸಾರ್ವಜನಿಕರಿಂದಲೇ ಈತನ ಮೇಲೆ ದೂರು ದಾಖಲಾಗಿದೆ. ಇಷ್ಟೆಲ್ಲಾ ಪ್ರಕರಣಗಳು ಇದ್ದರೂ ಸರ್ಕಾರ ಆತನ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ' ಎಂದರು.

> ನನ್ನ ಬಳಿ ಹಲವು ದಾಖಲೆಗಳು ಇವೆ. ಅವನ್ನು ಬಿಡುಗಡೆ ಮಾಡಿದರೆ ರಾಜ್ಯ ಸರ್ಕಾರದ ಏಳು ಜನ ಸಚಿವರು ರಾಜೀನಾಮೆ ನೀಡಬೇಕಾಗುತ್ತದೆ
> **ಎಚ್‌.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

'ಸಿ.ಎಂ ಇಬ್ಬಗೆ ನೀತಿ': 'ಸಿದ್ದರಾಮಯ್ಯ ವಿರೋಧ ಪಕ್ಷದಲ್ಲಿದ್ದಾಗ, 'ರಾಜ್ಯಪಾಲರದ್ದು ಸಾಂವಿಧಾನಿಕ ಹುದ್ದೆ. ಅವರು ಕೇಳಿದ ಮಾಹಿತಿ, ವರದಿ ಕೊಡುವುದು ಸರ್ಕಾರದ ಕರ್ತವ್ಯ' ಎಂದಿದ್ದರು. ಈಗ ಸಂಪುಟದ ಗಮನಕ್ಕೆ ತರದೆ, ರಾಜ್ಯಪಾಲರ ಪತ್ರಕ್ಕೆ ಉತ್ತರಿಸಬೇಡಿ' ಎನ್ನುತ್ತಿದ್ದಾರೆ. ಸಿದ್ದರಾಮಯ್ಯ ಅವರದ್ದು ಇಬ್ಬಗೆ ನೀತಿ' ಎಂದು ಕುಮಾರಸ್ವಾಮಿ ಟೀಕಿಸಿದರು.

'ಸಂದರ್ಭ ಬಂದರೆ ರಾಜೀನಾಮೆ'

'ಗಂಗೇನಹಳ್ಳಿ ಡಿನೋಟಿಫೈ ನಾನು ಮಾಡಿಲ್ಲ. ಹೀಗಾಗಿ ನನ್ನ ರಾಜೀನಾಮೆ ಕೇಳುವುದರಲ್ಲಿ ಅರ್ಥವಿಲ್ಲ. ಒಂದೊಮ್ಮೆ ಸಂದರ್ಭ ಬಂದರೆ, ರಾಜೀನಾಮೆ ನೀಡುತ್ತೇನೆ' ಎಂದು ಕುಮಾರಸ್ವಾಮಿ ಹೇಳಿದರು.

'ಆ ಜಮೀನಿಗೆ ಸಂಬಂಧಿಸಿದಂತೆ ನಮ್ಮ ಅತ್ತೆ ಹೆಸರಿನಲ್ಲಿ ಜಿಪಿಎ ಆಗಿದೆ ಎಂಬುದು ನನಗೆ ಗೊತ್ತಿರಲಿಲ್ಲ. ಅದಕ್ಕೂ ನನಗೂ ಸಂಬಂಧವೇ ಇಲ್ಲ' ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ಸಿಗರು ನರೇಂದ್ರ ಮೋದಿ ಮತ್ತು ನಿರ್ಮಲಾ ಸೀತಾರಾಮನ್ ಅವರ ರಾಜೀನಾಮೆ ಕೇಳುತ್ತಿದ್ದಾರೆ. ಅವರಾದರೂ ಏಕೆ ರಾಜೀನಾಮೆ ನೀಡಬೇಕು' ಎಂದು ಪ್ರಶ್ನಿಸಿದರು.

'ಸಿ.ಎಂ ಕಚೇರಿಯಿಂದಲೇ ಮಾಹಿತಿ ಸೋರಿಕೆ'

'ಲೋಕಾಯುಕ್ತ ಪೊಲೀಸರು ನನಗೆ ನೋಟಿಸ್ ನೀಡಲು ಬಂದಿದ್ದರು, ನಾನು ನೋಟಿಸ್ ಪಡೆದುಕೊಳ್ಳಲಿಲ್ಲ ಎಂದು ಒಂದು ಸುದ್ದಿ ವಾಹಿನಿ ಮಾತ್ರ ವರದಿ ಮಾಡಿತ್ತು. ಅವರಿಗೆ ಈ ಮಾಹಿತಿ ಸಿಕ್ಕಿದ್ದು ಹೇಗೆ? ಮುಖ್ಯಮಂತ್ರಿ ಕಚೇರಿಯಿಂದಲೇ ಮಾಹಿತಿ ಸೋರಿಕೆ ಆಗಿರಬೇಕು' ಎಂದು ಕುಮಾರಸ್ವಾಮಿ ಹೇಳಿದರು.

'ಈ ಸರ್ಕಾರವು ತನ್ನ ಅನುಕೂಲಕ್ಕೆ ಬರುವ ಮಾಹಿತಿಯನ್ನು ಒಂದೇ-ಒಂದು ಸುದ್ದಿ ವಾಹಿನಿಗೆ ಸೋರಿಕೆ ಮಾಡುತ್ತಿದೆ. ಬೇರೆ ಯಾವ ಮಾಧ್ಯಮಕ್ಕೂ ಮಾಹಿತಿ ನೀಡುತ್ತಿಲ್ಲ. ಇದು ಹೆಚ್ಚು ದಿನ ನಡೆಯುವುದಿಲ್ಲ. ಆ ಸುದ್ದಿ ವಾಹಿನಿಯನ್ನು ದೇವರು ನೋಡಿಕೊಳ್ಳುತ್ತಾನೆ' ಎಂದರು.

ಮುಡಾ: ಸಿ.ಎಂ -ಪೊನ್ನಣ್ಣ ಗೋಪ್ಯ ಮಾತುಕತೆ

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿನ ಟಿ.ಕೆ. ಲೇಔಟ್‌ನ ತಮ್ಮ ನಿವಾಸದಲ್ಲಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಮತ್ತು ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್ ಅವರೊಂದಿಗೆ ಶನಿವಾರ ಎರಡು ತಾಸು ಗೋಪ್ಯ ಮಾತುಕತೆ ನಡೆಸಿದರು.



ಸಿದ್ದರಾಮಯ್ಯ

ಮುಡಾ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಿರುವುದರಿಂದ ನಡೆಸಬೇಕಾದ ಕಾನೂನು ಹೋರಾಟದ ಕುರಿತು ಅವರು ಚರ್ಚಿಸಿದರು. ಬಳಿಕ ಪಕ್ಷದ ಸ್ಥಳೀಯ ಮುಖಂಡರೊಂದಿಗೂ ಸಮಾಲೋಚಿಸಿದರು.

'ಮುಡಾ ಪ್ರಕರಣದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ. ಕಾನೂನು ಹೋರಾಟ ನಡೆಸುತ್ತೇನೆ, ವಿರೋಧ ಪಕ್ಷದವರಿಗೆ ನೀವು ತಕ್ಕ ಉತ್ತರ ಕೊಡಬೇಕು ಎಂದು ಮುಖಂಡರಿಗೆ ತಿಳಿಸಿದರು' ಎಂದು ಮೂಲಗಳು ಹೇಳಿವೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಸಿ.ಎಂ, 'ಬಿಜೆಪಿಯಲ್ಲೇ ಬಹಳ ಭ್ರಷ್ಟಾಚಾರಿಗಳಿದ್ದು, ಅವರ ವಿರುದ್ಧ ಪ್ರಧಾನಿ ಮೋದಿಯವರು ಮೊದಲು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

> ಸಿದ್ದರಾಮಯ್ಯ ಅಪ್ಪಟ ಚಿನ್ನ. ಅವರನ್ನು ಕಂಡರೆ ಕೆಲವರಿಗೆ ಹೊಟ್ಟೆಕಿಚ್ಚು. ಕುರ್ಚಿ ಖಾಲಿಯಾಗುತ್ತದೆ ಎಂದು ಕೆಲವರು ಕಾಯುತ್ತಿದ್ದಾರೆ. ಆದರೆ ಅದು ಸಾಧ್ಯವಾಗುವುದಿಲ್ಲ
> **ಡಾ.ಹೆಚ್‌.ಸಿ. ಮಹದೇವಪ್ಪ**
> ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

ಹರಿಯಾಣ ವಿಧಾನಸಭೆ ಚುನಾವಣಾ ಪ್ರಚಾರ ಸಭೆಯಲ್ಲಿ ಮುಡಾ ವಿಚಾರವನ್ನು ಪ್ರಧಾನಿ ಪ್ರಸ್ತಾಪಿಸಿದ ಬಗ್ಗೆ ಪ್ರತಿಕ್ರಿಯಿಸಿ, 'ಮೋದಿಯವರು ಮಣಿಪುರದ ಹಿಂಸೆಯ ಬಗ್ಗೆ ಮಾತನಾಡುವುದಿಲ್ಲ; ಅಲ್ಲಿಗೆ ಭೇಟಿಯನ್ನೂ ಕೊಡಲಿಲ್ಲವೇಕೆ? ಮೊದಲು ಅದಕ್ಕೆ ಉತ್ತರಿಸಲಿ. ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳುವುದೆಲ್ಲಾ ಸುಳ್ಳು. ಅವರಿಗೆ ಪ್ರತಿಕ್ರಿಯಿಸುವುದಿಲ್ಲ' ಎಂದರು.

'ಮುಡಾದಲ್ಲಿ ನನ್ನ ಅವಧಿಯಲ್ಲಿ ಯಾವ ಹಗರಣವೂ ನಡೆದಿಲ್ಲ. ನನ್ನಿಂದಲೇ ಸಿದ್ದರಾಮಯ್ಯನವರಿಗೆ ಸಮಸ್ಯೆಯಾಗಿದೆ ಎನ್ನುವುದರಲ್ಲಿ ಅರ್ಥವಿಲ್ಲ. ಹಗರಣ ನಡೆದ ಅವಧಿ ಯಾವುದು ಎಂಬುದನ್ನು ನೋಡಿ. ನನ್ನನ್ನೇಕೆ ಇದರಲ್ಲಿ ಎಳೆಯುತ್ತೀರಾ' ಎಂದು ಸಚಿವ ಸುರೇಶ್ ಹೇಳಿದರು.

ಎಚ್‌ಡಿ. ಕುಮಾರಸ್ವಾಮಿ ಅವರನ್ನು ಹಿಡಿದುಕೊಂಡವರು ಯಾರು: ಡಿಕೆಶಿ

'7 ಸಚಿವರ ದಾಖಲೆ ಬಿಡುಗಡೆ ಮಾಡಲಿ'

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): 'ಏಳು ಸಚಿವರಿಗೆ ಸಂಬಂಧಿಸಿದ ದಾಖಲೆ ನನ್ನ ಬಳಿ ಇವೆ ಎನ್ನುತ್ತಿರುವ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವನ್ನು ಬಿಡುಗಡೆ ಮಾಡಲಿ. ಮಾಡಬೇಡಿ ಎಂದು ಅವರನ್ನು ಹಿಡಿದುಕೊಂಡವರು ಯಾರು?' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

'ನನ್ನ ಬಳಿ ಇರುವ ದಾಖಲೆ ಬಿಡುಗಡೆ ಮಾಡಿದರೆ ಏಳು ಸಚಿವರು ರಾಜಿನಾಮೆ ಕೊಡಬೇಕಾಗುತ್ತದೆ' ಎಂಬ ಕುಮಾರಸ್ವಾಮಿ ಹೇಳಿಕೆಗೆ ತಾಲ್ಲೂಕಿನ ಸಾತನೂರಿನಲ್ಲಿ ಶನಿವಾರ ಪ್ರತಿಕ್ರಿಯಿಸಿದ ಅವರು, 'ದಾಖಲೆ ಬಿಡುಗಡೆ ಮಾಡಬೇಡಿ ಎಂದವರು ಯಾರು? ಮೊದಲು ಬಿಡುಗಡೆ ಮಾಡಲಿ' ಎಂದರು.

ಸಿ.ಎಂ ಹುದ್ದೆ ಅರ್ಥದಲ್ಲಿ ಹೇಳಿಲ್ಲ: 'ರಾಜ್ಯದ ಸೇವೆ ಮಾಡಲು ನಾನು ಪ್ರಯತ್ನ ಮಾಡುತ್ತಿದ್ದೇನೆ. ನಾನಿಲ್ಲಿ ಡಿಸಿಎಂ ಆಗಿ ಬಂದಿಲ್ಲ. ವಿಧಾನಸೌಧದಲ್ಲಷ್ಟೇ ನಾನು ಡಿಸಿಎಂ. ಇಲ್ಲಿ ನಾನು ನಿಮ್ಮ ಪ್ರತಿನಿಧಿ' ಎಂದು ಕನಕಪುರದ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಕುಮಾರ್ ಹೇಳಿದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಡಿಸಿಎಂ, 'ನೀವೆಲ್ಲಾ ಸೇವೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಎಂದಿದ್ದೇನೆ. ಮುಖ್ಯಮಂತ್ರಿ ಆಗುವುದಾಗಿ ನಾನು ಹೇಳಿಲ್ಲ. ನೀವು ಬೇರೆ ರೀತಿ ಕಲ್ಪನೆ ಮಾಡಿಕೊಂಡು ಏನೇನೊ ಸೃಷ್ಟಿಸಬೇಡಿ. ಈಗ ಡಿಸಿಎಂ ಆಗಿ ರಾಜ್ಯದ ಸೇವೆ ಮಾಡುತ್ತಿಲ್ಲವೆ. ಅದನ್ನು ಮಕ್ಕಳಿಗೆ ತಿಳಿಸಬೇಕಲ್ಲವೆ? ಅದನ್ನೇ ಭಾಷಣದಲ್ಲಿ ಹೇಳಿದ್ದೇನೆ' ಎಂದರು.

ಪದೇ ಪದೇ ಚರ್ಚೆ ಮಾಡಲು ಬಯಸುವುದಿಲ್ಲ- ಡಿಸಿಎಂ



ಬೆಂಗಳೂರು: 'ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರಕರಣ ದಾಖಲಾಗಿರುವ ಬಗ್ಗೆ ಎಐಸಿಸಿ ಅಧ್ಯಕ್ಷರು ಪಕ್ಷದ ನಿಲುವು ಸ್ಪಷ್ಟಪಡಿಸಿದ್ದಾರೆ. ಪದೇ ಪದೇ ಈ ಬಗ್ಗೆ ಚರ್ಚೆ ಮಾಡಲು ಬಯಸುವುದಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ವಿಚಾರವಾಗಿ ನಾನು ಈಗಾಗಲೇ ಸಾಕಷ್ಟು ಮಾತನಾಡಿದ್ದೇನೆ' ಎಂದರು.

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಬಗ್ಗೆ ಕೇಳಿದಾಗ, 'ಯಾರು ದೂರು ನೀಡಿದ್ದಾರೆ, ಯಾವ ಕಾರಣಕ್ಕೆ ನೀಡಿದ್ದಾರೆ ಎಂಬ ಮಾಹಿತಿ ನನಗೆ ಇಲ್ಲ. ಮಾಹಿತಿ ಪಡೆದು ನಂತರ ಪ್ರತಿಕ್ರಿಯಿಸುತ್ತೇನೆ' ಎಂದರು.

'ಮರ್ಯಾದೆ ಇದ್ದರೆ ಕೇಂದ್ರ ಸಚಿವರ ರಾಜೀನಾಮೆ ಕೇಳಿ'



ಲಕ್ಷ್ಮಿ ಹೆಬ್ಬಾಳಕರ

ಬೆಳಗಾವಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುವ ಬಿಜೆಪಿಯವರಿಗೆ ನಾಚಿಕೆಯಾಗಬೇಕು. ಪ್ರಧಾನಿ ನರೇಂದ್ರ ಮೋದಿ, ಸಚಿವರಾದ ಅಮಿತ್ ಶಾ, ನಿರ್ಮಲಾ ಸೀತಾರಾಮನ್, ಎಚ್‌.ಡಿ.ಕುಮಾರಸ್ವಾಮಿ ಅವರ ವಿರುದ್ಧವೂ ಪ್ರಕರಣಗಳಿವೆ. ಮರ್ಯಾದೆ ಇದ್ದರೆ, ಅವರ ರಾಜೀನಾಮೆ ಕೇಳಿ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

'ಚುನಾವಣಾ ಬಾಂಡ್‌ನ ₹8,000 ಕೋಟಿ ಹಗರಣದಲ್ಲಿ ಸುಪ್ರೀಂಕೋರ್ಟ್ ಛೀಮಾರಿ ಹಾಕಿದೆ. ನಿರ್ಮಲಾ ಸೀತಾರಾಮನ್ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶಿಸಿದೆ. ಸುಪ್ರೀಂಕೋರ್ಟ್ ಆದೇಶ ಪಾಲನೆ ಮಾಡಿ, ಕೇಂದ್ರ ಸಚಿವರ ರಾಜೀನಾಮೆ ಪಡೆಯಬೇಕು' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿಯೇತರ ರಾಜ್ಯಗಳಲ್ಲಿ ಸರ್ಕಾರಗಳನ್ನು ಬೀಳಿಸಲು ರಾಜಭವನ ಬಳಸಿಕೊಳ್ಳಲಾಗುತ್ತಿದೆ. ಇದರ ವಿರುದ್ಧ ನಾವೂ ಕಾನೂನು ರೀತಿಯಲ್ಲೇ ಉತ್ತರಿಸುತ್ತೇವೆ' ಎಂದರು.

ಚುನಾವಣಾ ಬಾಂಡ್‌-ಮುಡಾ ಎರಡೂ ಬೇರೆ ಬೇರೆ: ಅಶೋಕ

ಪ್ರಜಾವಾಣಿ ವಾರ್ತೆ



ಆರ್‌. ಅಶೋಕ

ಬೆಂಗಳೂರು: ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನೀಡಿದ ಆದೇಶಕ್ಕೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 'ಮುಡಾ' ಹಗರಣಕ್ಕೂ ವ್ಯತ್ಯಾಸವಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಜನ ಪಕ್ಷಪಾತ ಮಾಡಿದ್ದಾರೆ. ಕೋಟ್ಯಂತರ ರೂಪಾಯಿ ಬೆಲೆಬಾಳುವ ಜಮೀನನ್ನು ಕಬಳಿಸಿದ್ದಾರೆ. ನಿರ್ಮಲಾ ಅವರು ತಮ್ಮ ಸ್ವಂತಕ್ಕಾಗಿ ಏನೂ ಮಾಡಿಲ್ಲ. ಚುನಾವಣಾ ಬಾಂಡ್ ಹಣ ಪಕ್ಷಕ್ಕೆ ಬಂದಿದೆ. ಕಾಂಗ್ರೆಸ್ ಪಕ್ಷಕ್ಕೂ ₹1,200 ಕೋಟಿಗೂ ಅಧಿಕ ಹಣ ಸಂದಾಯವಾಗಿದೆ. ಆ ಹಣವನ್ನು ಮೊದಲು ವಾಪಸ್ ನೀಡಲಿ, ನಂತರ ಸಚಿವರ ರಾಜೀನಾಮೆ ಕೇಳಲಿ' ಎಂದರು.

ಎಲ್ಲ ಪಕ್ಷಗಳು ದೇಣಿಗೆ ಸಂಗ್ರಹ ಮಾಡಿವೆ. ಪಕ್ಷಕ್ಕಾಗಿ ಹಣ ಸಂಗ್ರಹಿಸಿದವರ ಮೇಲೆ ಎಫ್‌ಐಆರ್ ದಾಖಲಿಸುವುದಾದರೆ, ಎಲ್ಲರ ಮೇಲೂ ದಾಖಲಿಸಬೇಕಾಗುತ್ತದೆ. ಸಿದ್ದರಾಮಯ್ಯ ಅವರೇ ಹೇಳಿಸಿ ನಿರ್ಮಲಾ, ಜೆ.ಪಿ.ನಡ್ಡಾ ಅವರ ವಿರುದ್ಧ ದೂರು ದಾಖಲಿಸಿದ್ದಾರೆ ಎಂಬ ಅನುಮಾನವಿದೆ. ಇಂತಹ ದೂರು ಕೇವಲ ರಾಜಕೀಯ ಪ್ರೇರಿತ ಎಂದರು.

'ಸಿದ್ದರಾಮಯ್ಯ ಸಿ.ಎಂ ಸ್ಥಾನದಲ್ಲೇ ಮುಂದುವರಿದರೆ ಪೊಲೀಸರ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ. ಅದಕ್ಕಾಗಿ ರಾಜೀನಾಮೆಗೆ ಒತ್ತಾಯಿಸಿದ್ದೇವೆ' ಎಂದರು.

'ರಾಜೀನಾಮೆ ನೀಡಿ, ಇಲ್ಲವೇ ಸಿಬಿಐಗೆ ಒಪ್ಪಿಸಿ'



ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲಿ. ಇಲ್ಲದಿದ್ದರೆ, ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಲಿ. ಇಲ್ಲಿನ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ತನಿಖೆ ಮಾಡಲ್ಲ. ಸತ್ಯ ಹೊರಗೆ ಬರಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ಸಿದ್ದರಾಮಯ್ಯ ರಾಜೀನಾಮೆ ನೀಡುವವರೆಗೆ ಬಿಜೆಪಿ ಹೋರಾಟ ಮುಂದುವರಿಯಲಿದೆ. ಚುನಾವಣಾ ಬಾಂಡ್, ಗೋಧ್ರಾ ಸೇರಿ ಬೇರೆ ಬೇರೆ ಪ್ರಕರಣಗಳನ್ನು ಎಳೆದುತಂದು, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆ ಪ್ರಕರಣಗಳಿಗೂ ಮುಡಾ ಪ್ರಕರಣಕ್ಕೂ ಸಂಬಂಧವೇ ಇಲ್ಲ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಮುಖ್ಯಮಂತ್ರಿ ರಾಜೀನಾಮೆ ನೀಡಿ ತನಿಖೆ ಎದುರಿಸಲಿ'



ಯದುವೀರ ಒಡೆಯರ್

ಶಿವಮೊಗ್ಗ: 'ಮುಡಾ ಹಗರಣದ ಪಾರದರ್ಶಕ ತನಿಖೆಗಾಗಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಒತ್ತಾಯಿಸಿದರು.

'ಮುಖ್ಯಮಂತ್ರಿ ಸ್ಥಾನ ಜವಾಬ್ದಾರಿಯುತವಾದುದು. ಆ ಹುದ್ದೆಯಲ್ಲಿದ್ದುಕೊಂಡು ತನಿಖಾ ಸಂಸ್ಥೆ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆಯಲ್ಲ ಎಂಬ ಪ್ರಶ್ನೆಗೆ, 'ನಿರ್ಮಲಾ ಅವರ ಪ್ರಕರಣಕ್ಕೂ, ಮುಡಾ ಹಗರಣಕ್ಕೂ ವ್ಯತ್ಯಾಸವಿದೆ. ಅವರು ರಾಜೀನಾಮೆ ನೀಡುವ ಅಗತ್ಯವಿಲ್ಲ' ಎಂದರು.



ಶೋಭಾಯಾತ್ರೆ

ವಿಶ್ವ ಹಿಂದೂ ಪರಿಷತ್, ಭಜರಂಗದಳದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಗಣೇಶ ಮೂರ್ತಿ ವಿಸರ್ಜನೆ ಅಂಗವಾಗಿ ಶನಿವಾರ ಚಿತ್ರದುರ್ಗದ ಬಿ.ಡಿ ರಸ್ತೆಯಲ್ಲಿ ಅಸಂಖ್ಯಾತ ಭಕ್ತರ ನಡುವೆ ಬೃಹತ್ ಶೋಭಾಯಾತ್ರೆ ನಡೆಯಿತು ಪ್ರಜಾವಾಣಿ ಚಿತ್ರ/ ಚಂದ್ರಪ್ಪ ವಿ

ಸಿದ್ದರಾಮಯ್ಯ ಪರ ರಾಹುಲ್ ನಿಲ್ಲುವರೇ?: ಬಿಜೆಪಿ

ನವದೆಹಲಿ(ಪಿಟಿಐ): 'ಮುಡಾ ಪ್ರಕರಣ ವಿಚಾರದಲ್ಲಿ, ಮೊದಲೇ ಆರೋಪಿಯಾಗಿರುವ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಿಲ್ಲುವರೇ' ಎಂದು ಬಿಜೆಪಿ ಶನಿವಾರ ಪ್ರಶ್ನಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ, 'ಹಾಲಿ ಮುಖ್ಯಮಂತ್ರಿಯೊಬ್ಬರನ್ನು ಭ್ರಷ್ಟಾಚಾರ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ಅಪರೂಪದ ಪ್ರಕರಣವಿದು. ಇದು ಕಾಂಗ್ರೆಸ್‌ನ 'ಭ್ರಷ್ಟ ಮುಖವಾಡ'ವನ್ನು ಕಳಚಿದೆ. ಸಿದ್ದರಾಮಯ್ಯ ವಿರುದ್ಧ ದಾಖಲಾಗಿರುವ ಎಫ್‌ಐಆರ್ ವಿಚಾರದಲ್ಲಿ ಕೇಂದ್ರೀಯ ತನಿಖಾ ಸಂಸ್ಥೆಗಳ ಪಾತ್ರ ಇಲ್ಲ' ಎಂದರು.

ಜಮೀರ್ ವಿರುದ್ಧ ನ್ಯಾಯಾಂಗ ನಿಂದನೆ: ಅನುಮತಿಗೆ ಕೋರಿಕೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿಸಿದ್ದ ರಾಜ್ಯಪಾಲರ ಕ್ರಮವನ್ನು ಎತ್ತಿ ಹಿಡಿದ ಹೈಕೋರ್ಟ್ ಕ್ರಮವನ್ನು ರಾಜಕೀಯ ತೀರ್ಪು ಎಂದು ವ್ಯಾಖ್ಯಾನಿಸಿರುವ ವಸತಿ ಸಚಿವ ಬಿ.ಜೆಡ್ ಜಮೀರ್ ಅಹ್ಮದ್ ಖಾನ್ ಮೇಲೆ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ಅನುಮತಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಅವರು ಅಡ್ವೊಕೇಟ್ ಜನರಲ್‌ಗೆ ಪತ್ರ ಬರೆದಿದ್ದಾರೆ.

'ಜಮೀರ್ ಅಹ್ಮದ್ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ನ್ಯಾಯಾಂಗ ನಿಂದನೆ ಕಾಯ್ದೆ-1971ರ ಕಲಂ 15(1) (ಬಿ) ಅಡಿ ಒಪ್ಪಿಗೆ ನೀಡಬೇಕು' ಎಂದು ಅಬ್ರಹಾಂ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರನ್ನು ಕೋರಿದ್ದಾರೆ.

'ಹೈಕೋರ್ಟ್ ತೀರ್ಪನ್ನು ಸಚಿವರು ರಾಜಕೀಯ ತೀರ್ಪು ಎಂದು ವ್ಯಾಖ್ಯಾನಿಸಿದ್ದಾರೆ. ಈ ಮೂಲಕ ಉದ್ದೇಶ ಪೂರ್ವಕವಾಗಿ ನ್ಯಾಯಾಂಗದ ಘನತೆಗೆ ಚ್ಯುತಿ ಉಂಟು ಮಾಡಿದ್ದಾರೆ' ಎಂದು ಅಬ್ರಹಾಂ ಪತ್ರದಲ್ಲಿ ವಿವರಿಸಿದ್ದಾರೆ.

ನಿರ್ಮಲಾ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...


'ಮುಖಂಡರ ನಡೆಯಿಂದ ವಿಚಲಿತಗೊಂಡ ಕಾರ್ಪೊರೇಟ್ ಕಂಪನಿಗಳು ಬಹುಕೋಟಿ ಚುನಾವಣಾ ಬಾಂಡ್‌ಗಳನ್ನು ಖರೀದಿಸಿ, ರಾಷ್ಟ್ರೀಯ ಮತ್ತು ರಾಜ್ಯ ಬಿಜೆಪಿಗೆ ದೇಣಿಗೆಯಾಗಿ ನೀಡಿವೆ. ಬಿಜೆಪಿ ಇವನ್ನೆಲ್ಲಾ ನಗದಾಗಿ ಪರಿವರ್ತನೆ ಮಾಡಿಸಿಕೊಂಡಿದೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

'ಈ ಸಂಬಂಧ 2024ರ ಮಾರ್ಚ್ 30ರಂದು ತಿಲಕ್‌ನಗರ ಪೊಲೀಸ್ ಠಾಣಾಧಿಕಾರಿಗೆ, ತದನಂತರ 2024ರ ಏಪ್ರಿಲ್ 2ರಂದು ಬೆಂಗಳೂರು ದಕ್ಷಿಣ ಡಿಸಿಪಿಗೆ ದೂರು ನೀಡಲಾಗಿತ್ತು. ಆದರೆ, ಅವರು ಯಾವುದೇ ಕ್ರಮ ಕೈಗೊಳ್ಳದ ಕಾರಣ ಈ ಖಾಸಗಿ ದೂರು ಸಲ್ಲಿಸಲಾಗಿತ್ತು' ಎಂದು ದೂರಿನಲ್ಲಿ ವಿವರಿಸಿದ್ದರು.

ಆದರ್ಶ್ ಆರ್‌. ಅಯ್ಯರ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ದೂರಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರೂ ಆದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಹೆಸರು ನಮೂದಿಸಿದ್ದರು. ನ್ಯಾಯಾಲಯದ ಆದೇಶದಲ್ಲಿ ಬಿಜೆಪಿ ಕೇಂದ್ರ ಘಟಕದ ಪದಾಧಿಕಾರಿಗಳು ಎಂದಷ್ಟೇ ಇದೆ. ಅಕ್ಟೋಬರ್ 10ರಂದು ಈ ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯಲಿದೆ.

ಮುನಿರತ್ನ ಮನೆ, ಕಚೇರಿ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅತ್ಯಾಚಾರ, ಜಾತಿ ನಿಂದನೆ ಮತ್ತು ಕೊಲೆ ಬೆದರಿಕೆ ಪ್ರಕರಣದಲ್ಲಿ ಸಿಐಡಿಯ ವಿಶೇಷ ತನಿಖಾ ದಳದ (ಎಸ್‌ಐಟಿ) ಕಸ್ಟಡಿಯಲ್ಲಿರುವ ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಮುನಿರತ್ನ ಅವರ ಮನೆ, ಕಚೇರಿ ಸೇರಿದಂತೆ 15 ಸ್ಥಳಗಳ ಮೇಲೆ ತನಿಖಾಧಿಕಾರಿಗಳು ಶನಿವಾರ ಬೆಳಿಗ್ಗೆ ದಾಳಿ ನಡೆಸಿ, ಶೋಧಿಸಿದರು.

ಪ್ರಕರಣದ ತನಿಖಾಧಿಕಾರಿ ಕವಿತಾ ನೇತೃತ್ವದ ತಂಡವು ಶೋಧ ನಡೆಸಿ, ಕೆಲವು ದಾಖಲೆಗಳನ್ನು ಜಪ್ತಿ ಮಾಡಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ವೈಯಾಲಿಕಾವಲ್‌ನಲ್ಲಿರುವ ಮುನಿರತ್ನ ನಿವಾಸದಲ್ಲಿ ತನಿಖಾಧಿಕಾರಿಗಳು ಎರಡು ತಾಸು ಪರಿಶೀಲನೆ ನಡೆಸಿದರು. ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಜ್ಞರು ಕೆಲವು ಸಾಕ್ಷ್ಯಾಧಾರಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗಿದೆ.

ವಿಚಾರಣೆ ಮುಂದುವರಿಕೆ: 'ಸಿಐಡಿ ಕಚೇರಿಯಲ್ಲಿ ಮುನಿರತ್ನ ಅವರನ್ನು ವಿಚಾರಣೆ ನಡೆಸಲಾಗುತ್ತಿದೆ. ಸಿಐಡಿ (ಆರ್ಥಿಕ ಅಪರಾಧಗಳು) ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದ ಎಸ್‌ಐಟಿ ತಂಡವು ಹೇಳಿಕೆ ದಾಖಲಿಸಿಕೊಳ್ಳಲಾಗುತ್ತಿದೆ. ಮುನಿರತ್ನ ವಿಚಾರಣೆಗೆ ಸಹಕಾರ ನೀಡುತ್ತಿಲ್ಲ' ಎಂದು ಮೂಲಗಳು ತಿಳಿಸಿವೆ.

ಸಿ.ಎಂ ವಿರುದ್ಧ ತನಿಖೆಗೆ 4 ತಂಡ

ಒಂದನೇ ಪುಟದಿಂದ...

ಕೋರ್ಟ್ ಮೂಲಕ ನೀಡಲಾದ, ದೂರಿನಲ್ಲಿ ಅಡಕವಾಗಿರುವ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ. ಯಾವ ತಂಡ ಯಾವ ತನಿಖೆ ಕೈಗೊಳ್ಳಬೇಕು ಎಂಬುದನ್ನು ಎಸ್‌ಪಿ ನಿರ್ಧರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಲೋಕಾಯುಕ್ತ ಎಸ್‌ಪಿ ಕಚೇರಿಯಲ್ಲಿ ಶನಿವಾರ ಬೆಳಿಗ್ಗೆ ಉದೇಶ್ ತಮ್ಮ ಅಧೀನದ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೊತೆ ಸಭೆ ನಡೆಸಿದರು. ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ಅಧಿಕಾರಿಗಳನ್ನೂ ತನಿಖೆಗೆ ಬಳಸಿಕೊಳ್ಳುವ ಬಗ್ಗೆ ನಿರ್ಧರಿಸಲಾಯಿತು.

55 ವರ್ಷಗಳ ದಾಖಲೆ: ಲೋಕಾಯುಕ್ತ ಪೊಲೀಸರ ಮುಂದೆ ಸಾಕ್ಷ್ಯ ಸಂಗ್ರಹದ ಸವಾಲು ಇದ್ದು, 55 ವರ್ಷಗಳ ಅವಧಿಯ ಭೂ ದಾಖಲೆಗಳನ್ನು ಪರಿಶೀಲಿಸಬೇಕಿದೆ.

ಮೈಸೂರಿನ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ಕ್ಕೆ ಸಂಬಂಧಿಸಿ 1968ರಿಂದ 2023ರವರೆಗೆ ನಡೆದಿರುವ ಎಲ್ಲ ಭೂ ವ್ಯವಹಾರಗಳ ಮೂಲ ದಾಖಲೆಗಳನ್ನು ಪೊಲೀಸರು ತನಿಖೆಗೆ ಒಳಪಡಿಸಲಿದ್ದಾರೆ. ಅದರಲ್ಲಿ ಸಾಕಷ್ಟು ದಾಖಲೆಗಳು ಈಗಾಗಲೇ ನಾಪತ್ತೆ ಆಗಿರುವ ಕುರಿತು ದೂರುಗಳು ಕೇಳಿಬಂದಿದ್ದವು. ಲಭ್ಯ ಇರುವ ದಾಖಲೆಗಳನ್ನು ದೂರುದಾರ ಸ್ನೇಹಮಯಿ ಕೃಷ್ಣ ನ್ಯಾಯಾಲಯಕ್ಕೆ ಒದಗಿಸಿದ್ದು, ಅದರ ನೈಜತೆಯನ್ನೂ ಪೊಲೀಸರು ಒರೆಗೆ ಹಚ್ಚಲಿದ್ದಾರೆ.

ಕೆಲಸದ ವಿವಿಧ ಮಾನದಂಡಗಳ ಪ್ರಕಾರ ದಕ್ಷಿಣ ಏಷ್ಯಾದಲ್ಲಿ ಭಾರತದ ಸ್ಥಾನ

ದತ್ತಾಂಶ: ಗ್ಯಾಲಪ್ ಸಂಸ್ಥೆಯ 'ಜಾಗತಿಕ ಕೆಲಸದ ಸ್ಥಳದ ಸ್ಥಿತಿಗತಿ ವರದಿ–2024'



ಕೆಲಸದ ಹೊರೆ; ಬದುಕಿಗೆ ಬರೆ


ಎಐ ಚಿತ್ರ: ಕಣಕಾಲಮಠ

ಒಂದನೇ ಪುಟದಿಂದ

ಕಾಯಿಲೆ ಬಂದರೆ ಆಸ್ಪತ್ರೆಗೆ ಹೋಗವುದಕ್ಕೂ ಸಮಯ ಸಿಗುವುದಿಲ್ಲ' ಎನ್ನುತ್ತಾರೆ ಕಾರ್ಪೊರೇಟ್ ವಲಯದ ಪ್ರಮುಖ ಕಂಪನಿಯಲ್ಲಿ ಕೆಲಸ ಮಾಡುವ ಬೆಂಗಳೂರಿನ ಮೌನೇಶ್. ಬಹುತೇಕರದ್ದು ಇದೇ ಕಥೆ.

ದೇಹಕ್ಕೆ ಕಾಲಕಾಲಕ್ಕೆ ವಿಶ್ರಾಂತಿ, ವೇಳೆಗೆ ತಕ್ಕಂತೆ ಪೌಷ್ಟಿಕ ಆಹಾರ ಹಾಗೂ ಅಗತ್ಯ ಪ್ರಮಾಣದ ನಿದ್ದೆ ಬೇಕು. ಹಗಲೂ ರಾತ್ರಿ ಕೆಲಸ ಮಾಡುವುದು, ವೇಳೆ ತಪ್ಪಿಸಿ ತಿನ್ನುವುದು, ಏನು ಸಿಕ್ಕರೆ ಅದನ್ನು (ಪೌಷ್ಟಿಕತೆ ಇಲ್ಲದ ಆಹಾರ) ತಿನ್ನುವುದು ಅನಾರೋಗ್ಯಕ್ಕೆ ಕಾರಣ. ಬೇಗ ಕೆಲಸ ಮುಗಿಸಬೇಕು ಎನ್ನುವ ಒತ್ತಡ, ಕೆಲಸ ಇರುತ್ತೋ ಇಲ್ಲವೋ ಎನ್ನುವ ಅನಿಶ್ಚಿತತೆ ಹೀಗೆ ದೈಹಿಕ ಹಾಗೂ ಮಾನಸಿಕ ಒತ್ತಡಗಳು ಉದ್ಯೋಗಿಗಳಿಗೆ ಮಾರಕವಾಗುತ್ತಿವೆ ಎನ್ನುತ್ತಾರೆ ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್.

ಹಿಂದೆ ಉದ್ಯೋಗಿಗಳ ಪ್ರಾಜೆಕ್ಟ್ ಕೊನೆಯಲ್ಲಿ ಮಾತ್ರ ಕೆಲಸದ ಅವಧಿ ವಿಸ್ತರಣೆಯಾಗುತ್ತಿತ್ತು. ಕೋವಿಡ್ ನಂತರ ಕೆಲಸದ ಅವಧಿ ವಿಸ್ತರಣೆಯು ಒಂದು ಸಾಮಾನ್ಯ ಪ್ರಕ್ರಿಯೆಯೇ ಆಗಿದೆ. ಮನೆಯಿಂದ ಕೆಲಸ ಮಾಡುವ (ವರ್ಕ್ ಫ್ರಮ್ ಹೋಮ್) ಮತ್ತು ಹೈಬ್ರಿಡ್ (ವಾರದಲ್ಲಿ ಕೆಲವು ದಿನ ಮಾತ್ರ ಆಫೀಸಿಗೆ ಹೋಗಿ, ಉಳಿದ ದಿನ ಮನೆಯಿಂದ ಕೆಲಸ ಮಾಡುವುದು) ಪದ್ಧತಿಗಳು ಚಾಲ್ತಿಗೆ ಬಂದ ನಂತರ ವೃತ್ತಿ ಮತ್ತು ವೈಯಕ್ತಿಕ ಬದುಕಿನ ನಡುವಿನ ಅಂತರವೇ ಇಲ್ಲದಂತಾಗಿದೆ ಎನ್ನುವುದು ಉದ್ಯೋಗಿಗಳು ಅಳಲು.

ಐಟಿ ಕ್ಷೇತ್ರದಲ್ಲಿ ಹೆಚ್ಚು ಸಮಸ್ಯೆ: ವಿವಿಧ ಕ್ಷೇತ್ರಗಳಲ್ಲಿನ ಭಾರತೀಯರ ಕೆಲಸದ ಅವಧಿಯ ಬಗ್ಗೆ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ) 2023ರಲ್ಲಿ ದತ್ತಾಂಶ ಪ್ರಕಟಿಸಿದೆ.

ಭಾರತದಲ್ಲಿ ಐಟಿ ವಲಯ ಮತ್ತು ಮಾಧ್ಯಮ ರಂಗದಲ್ಲಿ ಮಹಿಳೆಯರು ವಾರಕ್ಕೆ 56.5 ಗಂಟೆ ಕೆಲಸ ಮಾಡುತ್ತಿದ್ದಾರೆ. ಇದು ಜಾಗತಿಕ ಮಟ್ಟದಲ್ಲಿಯೇ ಅತಿ ಹೆಚ್ಚಿನ ಕೆಲಸದ ಅವಧಿಯಾಗಿದೆ. ವೃತ್ತಿಪರ, ವೈಜ್ಞಾನಿಕ ಮತ್ತು ತಾಂತ್ರಿಕ ವಲಯದಲ್ಲಿ ದುಡಿಯುತ್ತಿರುವ ಭಾರತದ ಮಹಿಳೆಯರು ವಾರಕ್ಕೆ 53.2 ಗಂಟೆ ಕೆಲಸ ಮಾಡುತ್ತಿದ್ದಾರೆ ಎಂದು ಅದು ಹೇಳಿದೆ.

ಉದ್ಯೋಗಿಗಳ ವಯಸ್ಸು ಕಡಿಮೆ ಇದ್ದಷ್ಟೂ ಕೆಲಸದ ಅವಧಿ ಹೆಚ್ಚಾಗುತ್ತದೆ. ನಿದರ್ಶನಕ್ಕೆ, ಭಾರತದಲ್ಲಿ ಐಟಿ ವಲಯದಲ್ಲಿರುವ 24 ವಯಸ್ಸಿದೊಳಗಿನ ಮಹಿಳೆಯರು ವಾರಕ್ಕೆ 57 ಗಂಟೆ ಕೆಲಸ ಮಾಡಿದರೆ, ಅದೇ ವೃತ್ತಿಪರ, ವೈಜ್ಞಾನಿಕ ಮತ್ತು ತಾಂತ್ರಿಕ ವಲಯದಲ್ಲಿರುವ ಇದೇ ವಯಸ್ಸಿನ ಮಹಿಳೆಯರು 55 ಗಂಟೆ ಕೆಲಸ ಮಾಡುತ್ತಿದ್ದಾರೆ.

ಇಷ್ಟಾದರೂ ಕಾರ್ಪೊರೇಟ್ ವಲಯದಲ್ಲಿ ಪುರುಷರದ್ದೇ ಪಾರುಪತ್ಯ. ವೃತ್ತಿಪರ, ವೈಜ್ಞಾನಿಕ ಮತ್ತು ತಾಂತ್ರಿಕ ವಲಯದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಸಂಖ್ಯೆ ಕೇವಲ ಶೇ 8.5 ಮತ್ತು ಐಟಿ ವಲಯದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಸಂಖ್ಯೆ ಶೇ 20 ಮಾತ್ರ.

ಕೆಲಸದ ಖುಷಿ ಇಲ್ಲ: ಭಾರತದ ಉದ್ಯೋಗಿಗಳ ಪೈಕಿ ಬಹುತೇಕರಿಗೆ ತಮ್ಮ ಕೆಲಸದ ಬಗ್ಗೆ ಖುಷಿ ಇಲ್ಲ ಎನ್ನುವ ಅಂಶ ಗ್ಯಾಲಪ್ ಎನ್ನುವ ಸಂಸ್ಥೆಯ ಅಧ್ಯಯನದಿಂದ ತಿಳಿದುಬಂದಿದೆ. ಜಾಗತಿಕ ಮಟ್ಟದಲ್ಲಿ ಉದ್ಯೋಗಿಗಳ ಮಾನಸಿಕ ಆರೋಗ್ಯದಲ್ಲಿ ಕುಸಿತ ಉಂಟಾಗುತ್ತಿದ್ದು, ಅದರಲ್ಲಿ ಕೆಲಸದ ಒತ್ತಡ ಮತ್ತು ಕೆಲಸದ ಸ್ಥಳದಲ್ಲಿನ ಅಸಂತೃಪ್ತಿಯ ಪಾತ್ರ ಹಿರಿದಾಗಿದೆ. ಆದರೆ, ಭಾರತದಲ್ಲಿ ಕೇವಲ ಶೇ 14 ಮಂದಿ ಮಾತ್ರ ತಾವು ಉದ್ಯೋಗದಲ್ಲಿ ಸಂತೋಷ ಕಾಣುತ್ತಿದ್ದು, ಪ್ರಗತಿ ಹೊಂದುತ್ತಿರುವುದಾಗಿ ಭಾವಿಸಿದ್ದಾರೆ. ಉಳಿದ ಶೇ 84ರಷ್ಟು ಮಂದಿ ಉದ್ಯೋಗದಲ್ಲಿ ನರಳುತ್ತಿದ್ದಾರೆ (ಕೆಲಸದ ಒತ್ತಡ, ಹಣಕಾಸಿನ ಮತ್ತು ಭವಿಷ್ಯದ ಅಭದ್ರತೆ ಎದುರಿಸುವುದು) ಇಲ್ಲವೇ ಸಂಘರ್ಷ ನಡೆಸುತ್ತಿದ್ದಾರೆ (ಮೂಲಸೌಕರ್ಯಗಳ ಕೊರತೆ, ಭವಿಷ್ಯದ ಚಿಂತೆ, ದೈಹಿಕ ಮತ್ತು ಮಾನಸಿಕ ನೋವು ಅನುಭವಿಸುವುದು). ಜಾಗತಿಕ ಮಟ್ಟದಲ್ಲಿ ಉದ್ಯೋಗದಲ್ಲಿ ಖುಷಿ ಇದ್ದು, ಪ್ರಗತಿ ಸಾಧಿಸುತ್ತಿರುವುದಾಗಿ ಹೇಳಿರುವವರ ಸಂಖ್ಯೆ ಶೇ 34ರಷ್ಟಿದೆ.

ಜಾಗತಿಕವಾಗಿ, ಪ್ರತಿ ಐವರಲ್ಲಿ ಒಬ್ಬರು ಕೆಲಸದ ಸ್ಥಳದಲ್ಲಿ ಒಂಟಿತನ ಅನುಭವಿಸುತ್ತಾರೆ ಎಂದು ವರದಿ ತಿಳಿಸಿದೆ. ಸಮಾಜದಿಂದ ಬೇರ್ಪಡುವುದು ಮತ್ತು ದೀರ್ಘಾವಧಿಯವರೆಗೆ ಅಥವಾ ಪದೇ ಪದೇ ಒಂಟಿಯಾಗಿ ಕಳೆಯುವುದು ಜನರ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಹಾರ್ವರ್ಡ್ ಪ್ರಾಧ್ಯಾಪಕರಾದ ಲೀಸಾ ಬರ್ಕ್‌ಮನ್ ಅಭಿಪ್ರಾಯ ಪಟ್ಟಿದ್ದಾರೆ. ಸಾಮುದಾಯಿಕ ಜೀವನ ಮತ್ತು ಸಾಮಾಜಿಕ ಸಂಪರ್ಕಗಳ ಕೊರತೆ ಇರುವವರು ಇತರರಿಗಿಂತ ಶೀಘ್ರವಾಗಿ ಸಾಯುವ ಅಪಾಯ ಎರಡು ಪಟ್ಟು ಹೆಚ್ಚಾಗಿರುತ್ತದೆ. ಉದ್ಯೋಗ ಸಂಬಂಧಿ ಒತ್ತಡ ಮತ್ತಿತರ ಕಾರಣಗಳಿಂದ ಜಾಗತಿಕ ಮಟ್ಟದಲ್ಲಿ ಸಾಯುವವರ ಸಂಖ್ಯೆ ಭಾರತದಲ್ಲಿಯೇ ಹೆಚ್ಚಾಗಿದೆ. ಇಲ್ಲಿ ವಾರ್ಷಿಕವಾಗಿ 2 ಲಕ್ಷ ಮಂದಿ ಒತ್ತಡದಿಂದಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ಒಂಟಿತನದಂಥ ನಕಾರಾತ್ಮಕ ಭಾವನೆಗಳು ಉದ್ಯೋಗಿಗಳಿಗೆ ಕೆಲಸದಲ್ಲಿ ಕ್ರಿಯಾಶೀಲವಾಗಿ ತೊಡಗಲು ಅಡ್ಡಿಪಡಿಸುತ್ತವೆ. ಕ್ರಿಯಾಶೀಲವಾಗಿ ತೊಡಗದೇ ಇದ್ದರೆ ಉದ್ಯೋಗಿಗೆ ಕೆಲಸದ ತೃಪ್ತಿಯೂ ಸಿಗುವುದಿಲ್ಲ; ಅವರಿಂದ ಗುಣಮಟ್ಟದ ಕೆಲಸವೂ ಸಾಧ್ಯವಿಲ್ಲ. ಉದ್ಯೋಗಿಗಳ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯ ಕೊರತೆಯಿಂದ ಜಾಗತಿಕ ಆರ್ಥಿಕತೆಗೆ ₹743 ಲಕ್ಷ ಕೋಟಿ ಅಥವಾ ಜಿಡಿಪಿಯ ಶೇ 9ರಷ್ಟು ನಷ್ಟ ಉಂಟಾಗುತ್ತಿದೆ ಎಂದು ಗ್ಯಾಲಪ್ ವರದಿ ತಿಳಿಸಿದೆ.

ಕೆಲಸವನ್ನು ಖುಷಿಯಿಂದ ಮಾಡಲಾಗದೇ ಇರುವವರು ಹಲವು ರೀತಿಯ ನಕಾರಾತ್ಮಕ ಭಾವನೆಗಳಿಗೆ ಗುರಿಯಾಗುತ್ತಾರೆ. ಅವರು ಒತ್ತಡ, ಒಂಟಿತನ, ಚಿಂತೆ, ಕೋಪ ಮುಂತಾದವುಗಳಿಗೆ ಪದೇ ಪದೇ ಗುರಿಯಾಗಿರುತ್ತಾರೆ. ಇದು ನಿರುದ್ಯೋಗಿಯಾಗಿರುವುದಕ್ಕೆ ಸಮನಾಗಿದೆ ಎನ್ನುತ್ತದೆ ವರದಿ. ಇದೇ ಮಾತನ್ನು ಪುನರುಚ್ಚರಿಸುವ ಡಾ.ಚಂದ್ರಶೇಖರ್, 'ಅನೇಕ ಉದ್ಯೋಗಿಗಳು ದೇಹವನ್ನು ವಿಪರೀತ ದಂಡಿಸಿ ಮಾನಸಿಕ ಒತ್ತಡಕ್ಕೆ ಗುರಿಯಾಗುತ್ತಾರೆ. ಜತೆಗೆ ಭಯಕ್ಕೆ, ಕೋಪಕ್ಕೆ, ದುಃಖಕ್ಕೆ, ಹತಾಶೆಗೆ ಒಳಗಾಗುತ್ತಾರೆ. ಕೆಲಸ ಸಮಯಕ್ಕೆ ಸರಿಯಾಗಿ ಮಾಡಲಾಗುತ್ತಿಲ್ಲ ಎನ್ನುವ ಕೊರಗು ಇಲ್ಲವೇ ವೃತ್ತಿಜೀವನದಲ್ಲಿ ಕ್ಷಿಪ್ರಗತಿಯಲ್ಲಿ ಮೇಲೇರಬೇಕು ಎನ್ನುವ ಅತಿ ಮಹತ್ವಾಕಾಂಕ್ಷೆ ಎರಡೂ ಅವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿವೆ' ಎನ್ನುತ್ತಾರೆ.

ಕಾರ್ಮಿಕರ ಕಾನೂನುಗಳು ಸಮರ್ಪಕವಾಗಿರುವ ದೇಶಗಳಲ್ಲಿ ಉದ್ಯೋಗಿಗಳು ಉಳಿದ ದೇಶಗಳಿಗಿಂತ ಉತ್ತಮ ಕೆಲಸದ ವಾತಾವರಣ ಹೊಂದಿರುತ್ತಾರೆ. ಉತ್ತಮ ಸಂಬಳ, ಹೆರಿಗೆ ರಜೆ, ಸಾಮಾಜಿಕ ಭದ್ರತೆ, ಕೆಲಸದ ಭದ್ರತೆ, ರಕ್ಷಣೆ ಮುಂತಾದ ಅಂಶಗಳಿಗೂ ಕೆಲಸದಲ್ಲಿ ಉದ್ಯೋಗಿಗಳು ಅನುಭವಿಸುವ ತೃಪ್ತಿಗೂ ನೇರ ಸಂಬಂಧವಿದೆ. ಅಂತಹ ಕಡೆ ಕೆಲಸ ಮಾಡುವ ಉದ್ಯೋಗಿಗಳಲ್ಲಿ ನಕಾರಾತ್ಮಕ ಭಾವನೆಗಳು ಕಡಿಮೆ ಇರುತ್ತವೆ. ಆದರೆ, ಹೆಚ್ಚಿನ ಉದ್ಯೋಗಿಗಳು ಕಾರ್ಮಿಕ ಕಾನೂನಿಗಿಂತಲೂ ಮುಖ್ಯವಾಗಿ ಉತ್ತಮ ಭವಿಷ್ಯವಿರುವ ಕೆಲಸಗಳಿಗೆ ಆದ್ಯತೆ ನೀಡುತ್ತಾರೆ. ಅದು ಸಮಸ್ಯೆಗಳಿಗೆ ಕಾರಣವಾಗುತ್ತಿದೆ.

'ಅತಿಯಾದ ಆಸೆ, ಅತಿಯಾದ ನಿರೀಕ್ಷೆ, ಅತಿಯಾದ ಒತ್ತಡ ದೇಹಕ್ಕೆ ಮತ್ತು ಮನಸ್ಸಿಗೆ ಮಾರಕ. ಒತ್ತಡದ ಕೆಲಸ, ದೀರ್ಘ ಅವಧಿಯ ದುಡಿಮೆ ಉದ್ಯೋಗಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದ್ದು, 25ರ ವಯಸ್ಸಿನ ಒಳಗಿನ ಶೇ 30 ಮಂದಿಗೆ ಹೃದಯಾಘಾತವಾಗುತ್ತಿದೆ. ಚಿಕ್ಕವಯಸ್ಸಿಗೇ ರಕ್ತದೊತ್ತಡ, ಮಧುಮೇಹ, ಸರ್ವಿಕಲ್ ಸ್ಪಾಂಡಿಲೈಟಿಸ್, ಥೈರಾಯಿಡ್ ಮುಂತಾದ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ' ಎನ್ನುತ್ತಾರೆ ಡಾ.ಚಂದ್ರಶೇಖರ್.

'ಪ್ರತಿಧ್ವನಿ' ಐಟಿ ಉದ್ಯೋಗಿಗಳ ಕಲ್ಯಾಣ ಸಂಸ್ಥೆಯಾಗಿದ್ದು, ಕೆಲಸದ ಒತ್ತಡ, ಸುದೀರ್ಘ ಅವಧಿಯ ದುಡಿಮೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಸಮೀಕ್ಷೆ ನಡೆಸುತ್ತಿದೆ. ಐಟಿ ಕಂಪನಿಗಳಲ್ಲಿ ಉದ್ಯೋಗಿಗಳ ಮಾನಸಿಕ ಆರೋಗ್ಯದ ರಕ್ಷಣೆಗಾಗಿ ಪ್ರತ್ಯೇಕ ವಿಭಾಗ ತೆರೆಯುವುದು, ಆಗಿಂದಾಗ್ಗೆ ಆರೋಗ್ಯ ಪರೀಕ್ಷೆ ನಡೆಸುವುದು ಸೇರಿದಂತೆ ಹಲವು ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವ ನಿಟ್ಟಿನಲ್ಲಿ ಸಂಸ್ಥೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಪತ್ರ ಸಲ್ಲಿಸಲು ಸಿದ್ಧತೆ ನಡೆಸುತ್ತಿದೆ.

ಸರ್ಕಾರಿ ಕೆಲಸದಲ್ಲಿಯೂ ಒತ್ತಡ...: ಹಿಂದೆ, ಸರ್ಕಾರಿ ಕೆಲಸ ಎಂದರೆ, ಒತ್ತಡರಹಿತವಾಗಿರುತ್ತದೆ ಎನ್ನುವ ವಾತಾವರಣ ಇತ್ತು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. ಕೇಂದ್ರ ಸರ್ಕಾರದ ಬ್ಯಾಂಕಿಂಗ್, ರಾಜ್ಯ ಸರ್ಕಾರದ ಪೊಲೀಸ್ ಇಲಾಖೆ ಸೇರಿದಂತೆ ಹಲವು ಇಲಾಖೆಗಳಲ್ಲಿ ಕಾಯಂ ಸಿಬ್ಬಂದಿಯ ಕೊರತೆ ಇದೆ. ಆರ್ಥಿಕ ಹೊರೆ ಎನ್ನುವ ಕಾರಣಕ್ಕೆ ಸರ್ಕಾರಗಳು ಆ ಸ್ಥಾನಗಳಿಗೆ ನೇಮಕಾತಿ ಮಾಡುತ್ತಿಲ್ಲ. ಇದರಿಂದಾಗಿ ಇರುವ ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚಾಗಿದೆ. ಜತೆಗೆ ಕಾಲಕ್ಕೆ ತಕ್ಕಂತೆ ಕೆಲಸದ ಸ್ವರೂಪವೂ ಬದಲಾಗಿದ್ದು, ಸರ್ಕಾರಿ ಕೆಲಸ ಆರಾಮದಾಯಕ ಎನ್ನುವ ಭಾವನೆ ನಿಧಾನಕ್ಕೆ ಕಣ್ಮರೆಯಾಗುತ್ತಿದೆ.

ಬದುಕಲು ಯಾವುದಾದರೊಂದು ಉದ್ಯೋಗ ಮಾಡಬೇಕು. ಆದರೆ, ಬದುಕಲು ಕೆಲಸ ಬೇಕೋ ಅಥವಾ ಕೆಲಸಕ್ಕಾಗಿ ಬದುಕಬೇಕೋ ಎನ್ನುವ ಬಗ್ಗೆ ವೃತ್ತಿಪರರಿಗೆ ಸ್ಪಷ್ಟತೆ ಬೇಕಾಗಿದೆ ಎನ್ನುತ್ತಾರೆ ತಜ್ಞರು.

ಅಭಿಪ್ರಾಯ ಸಂಗ್ರಹ: ಓಬಳೇಶ್ ಕೆ.ಎಚ್., ಮನೋಜ್‌ಕುಮಾರ್ ಗುದ್ದಿ

ಕೆಲಸದ ಅವಧಿ ಹೆಚ್ಚಳಕ್ಕೆ ವಿರೋಧ

ಅಲಿಬಾಬಾ ಕಂಪನಿಯ ಸಂಸ್ಥಾಪಕ ಜಾಕ್ ಮಾ ಅವರು ಹಿಂದೊಮ್ಮೆ 'ಬೆಳಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ವಾರದ 6 ದಿನ ದುಡಿಯುವುದು (996 ಸೂತ್ರ) ದೊಡ್ಡ ಕಂಪನಿಗಳು ಮತ್ತು ಸ್ಟಾರ್ಟ್ ಅಪ್‌ಗಳ ನೌಕರರಿಗೆ ಅನಿವಾರ್ಯ' ಎಂದು ಹೇಳಿದ್ದು ವಿವಾದವಾಗಿತ್ತು. ಇನ್ಫೋಸಿಸ್ ಸಹ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಅವರು 'ಭಾರತದ ಕೆಲಸ ಸಂಸ್ಕೃತಿ ಬದಲಾಗಬೇಕು ಮತ್ತು ಜಾಗತಿಕ ಮಟ್ಟದಲ್ಲಿ ಭಾರತ ಪಾರಮ್ಯ ಮೆರೆಯಲು ಯುವಜನರು ವಾರಕ್ಕೆ 70 ಗಂಟೆ ಕೆಲಸ ಮಾಡಬೇಕು' ಎಂದು ಹೇಳಿದ್ದು ಸಾಮಾಜಿಕ ಮಾಧ್ಯಮಗಳಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿತ್ತು.

ರಾಜ್ಯದಲ್ಲಿ ಐಟಿ, ಬಿಟಿ ವಲಯದ ಉದ್ಯೋಗಿಗಳ ಕೆಲಸದ ಅವಧಿಯನ್ನು 14 ಗಂಟೆಗೆ ವಿಸ್ತರಿಸಬೇಕು; ಅದಕ್ಕಾಗಿ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆ ಕಾಯ್ದೆ–1961ಕ್ಕೆ ತಿದ್ದುಪಡಿ ತರಬೇಕು ಎಂದು ಕೆಲ ಉದ್ಯಮಿಗಳು ಎರಡು ತಿಂಗಳ ಹಿಂದೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು. ಅದಕ್ಕೆ ಕಾರ್ಮಿಕ ವಲಯದಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. 'ಈ ವಲಯದಲ್ಲಿ ಈಗಾಗಲೇ ಕೆಲಸದ ಅವಧಿ 12 ಗಂಟೆ ಇದ್ದು, ಅದನ್ನು 14 ಗಂಟೆಗೆ ವಿಸ್ತರಿಸುವುದು ಜೀವವಿರೋಧಿಯಾಗುತ್ತದೆ' ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು.

ಉದ್ಯೋಗಿಗಳಿಗೆ ಆರೋಗ್ಯ ತಜ್ಞರ ಸಲಹೆಗಳು

- ಕೆಲಸದ ನಡುವೆ ಸಣ್ಣ ಸಣ್ಣ ಅವಧಿಯ ವಿಶ್ರಾಂತಿ ತೆಗೆದುಕೊಳ್ಳಿ
- ನಿಮ್ಮ ಶರೀರದ ಯೋಗಕ್ಷೇಮ ನೋಡಿಕೊಳ್ಳಿ
- ಕೆಲಸದ ಒತ್ತಡ ನೀಗಿಸಿಕೊಳ್ಳುವುದಕ್ಕಾಗಿ ಧೂಮಪಾನ, ಮದ್ಯಪಾನದ ಚಟಕ್ಕೆ ಬಲಿಯಾಗಬೇಡಿ
- ಒತ್ತಡ ನಿವಾರಣೆಗೆ ಅಗತ್ಯಕ್ಕಿಂತ ಹೆಚ್ಚು ಆಹಾರ ಸೇವನೆ ಮಾಡುವುದು ಅನಾರೋಗ್ಯಕಾರಿ
- ಒಳ್ಳೆಯ ಪುಸ್ತಕ ಓದಿ, ಇಷ್ಟವಾದ ಸಂಗೀತ ಕೇಳಿ. ಸಾಧ್ಯವಾದರೆ ಧ್ಯಾನ ಮಾಡಿ
- ಉತ್ತಮ ಅಭ್ಯಾಸಗಳಿಂದ ಕೂಡಿದ ಜೀವನ ಶೈಲಿ ರೂಢಿಸಿಕೊಳ್ಳಿ
- ಪ್ರಶಾಂತ ಮನ ಇದ್ದರೆ ಪ್ರಶಾಂತ ಕಾಯ. ಇವೆರಡೂ ಇದ್ದರೆ ಪ್ರಶಾಂತ ಜೀವನ

'ಸರ್ಕಾರದಿಂದ ಕಾರ್ಮಿಕ ಕಾನೂನು ದುರ್ಬಲ'



ಭಾರತದ ಉದ್ಯೋಗಿಗಳಲ್ಲಿ ಕೆಲಸದ ಒತ್ತಡ ಹೆಚ್ಚುತ್ತಿರುವುದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಮಿಕ ಕಾನೂನುಗಳೇ ಕಾರಣ ಎನ್ನುವುದು ಕಾರ್ಮಿಕ ಮುಖಂಡ ಹಾಗೂ ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಪ್ರಕಾಶ್ ಅವರ ವಾದ.

'ಕೆಲಸದ ಒತ್ತಡದಿಂದ ಹಲವರು ಸಾಯುತ್ತಿದ್ದಾರೆ. ಇದು ಬಂಡವಾಳ ಮತ್ತು ಶ್ರಮದ ನಡುವಿನ ಸಂಘರ್ಷ; ಕಡಿಮೆ ಬಂಡವಾಳದಲ್ಲಿ ಹೆಚ್ಚು ಲಾಭ ಮಾಡಬೇಕೆನ್ನುವ ಪ್ರಕ್ರಿಯೆಯ ತೀವ್ರವಾದ ಪರಿಣಾಮ. ಬಂಡವಾಳದ ಪ್ರಮುಖ ಪ್ರಶ್ನೆ ಲಾಭ. ಬಂಡವಾಳದಾರರು ಅದನ್ನೇ ಅನುಸರಿಸುತ್ತಿದ್ದಾರೆ. ಇನ್ಫೋಸಿಸ್‌ನ ನಾರಾಯಣಮೂರ್ತಿಯವರು ಹೇಳುತ್ತಿರುವುದು ಕೂಡ ಅದನ್ನೇ. ಅದರ ಪರಿಣಾಮವಾಗಿ ಏನಾಗುತ್ತಿದೆ ಎಂದರೆ, ವೇತನಗಳ ಪಾಲು ಕುಸಿಯುತ್ತಾ ಹೋಗುತ್ತಿದೆ, ಬಂಡವಾಳಿಗರ ಲಾಭದ ಪಾಲು ಹೆಚ್ಚುತ್ತಾ ಹೋಗುತ್ತಿದೆ' ಎಂದರು. 'ಮೇಲುಮಟ್ಟದ ಕೆಲಸಗಳಲ್ಲಿ ಇರುವವರು ಆತ್ಮಹತ್ಯೆ ಮಾಡಿಕೊಳ್ಳುವಂಥ ಸ್ಥಿತಿ ಇದೆ. ಕೆಳಗಿನ ಹಂತದ ಕೆಲಸಗಾರರ ಪರಿಸ್ಥಿತಿ ಇನ್ನೂ ಘೋರವಾಗಿದೆ. ವಿಪರೀತ ಒತ್ತಡದ ಜತೆಗೆ ನಾನಾ ತರಹದ ದೌರ್ಜನ್ಯ, ಶೋಷಣೆಯೂ ನಡೆಯುತ್ತಿದೆ. ಆದರೆ, ಅದು ಹೆಚ್ಚು ಪ್ರಚಾರಕ್ಕೆ ಬರುತ್ತಿಲ್ಲ' ಎಂದು ಆಪಾದಿಸಿದರು.

'ಕಾರ್ಮಿಕರಿಗಿರುವ ಎಲ್ಲ ರಕ್ಷಣಾ ಸೌಲಭ್ಯಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಕೇಂದ್ರ ಸರ್ಕಾರವು ಕಾರ್ಮಿಕರಿಗೆ ಸಂಬಂಧಿಸಿದ 29 ಕಾಯ್ದೆಗಳನ್ನು ರದ್ದುಪಡಿಸಿ, ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರೂಪಿಸಿದೆ. ಅವು ಕಾಯ್ದೆಗಳಾಗಿದ್ದರೂ ಇನ್ನೂ ನಿಯಮಗಳನ್ನು ರೂಪಿಸಿಲ್ಲ. ಅದಕ್ಕೆ ಮುಂಚೆಯೇ ಕಾಯ್ದೆಗಳಲ್ಲಿರುವ ಅಂಶಗಳನ್ನು ಜಾರಿ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ ಐಟಿ ವಲಯ ಸೇರಿದಂತೆ ಹಲವು ವಲಯಯಗಳಲ್ಲಿ ಈಗಾಗಲೇ 12 ಗಂಟೆ ಕೆಲಸ ಮಾಡಿಸಿಕೊಳ್ಳಲಾಗುತ್ತಿದ್ದು, ಅದನ್ನು 14 ಗಂಟೆಗೆ ಏರಿಸಬೇಕು ಎನ್ನುವ ಕೂಗೆದ್ದಿರುವುದು ಕೂಡ ಇದೇ ದಿಸೆಯಲ್ಲಿಯೇ. ಉಳಿದ ಕ್ಷೇತ್ರಗಳಲ್ಲಿ 48 ಗಂಟೆ ಕೆಲಸದ ಮಿತಿ ಇದೆ. ಆದರೆ, ಐಟಿ ರಾಜಧಾನಿ ಎನಿಸಿಕೊಂಡಿರುವ ಕರ್ನಾಟಕದಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ರಾಜ್ಯದಲ್ಲಿ ಯಾವುದೇ ಪಕ್ಷದ ಸರ್ಕಾರ ಇದ್ದಾಗಲೂ 20 ವರ್ಷಗಳಿಂದ ಐಟಿ, ಬಿಟಿ ವಲಯಗಳಿಗೆ ಕೈಗಾರಿಕಾ ಸ್ಥಾಯಿ ಆದೇಶಗಳ ಕಾಯ್ದೆಯಿಂದ ವಿನಾಯಿತಿ ನೀಡಲಾಗಿದೆ. ಸಂಘಟಿತರಾಗುವುದೂ ಸೇರಿದಂತೆ ಅವರಿಗೆ ಯಾವ ಕಾರ್ಮಿಕ ಕಾಯ್ದೆಯೂ ಅನ್ವಯವಾಗುವುದಿಲ್ಲ. ಹಕ್ಕುಗಳೂ ಇರುವುದಿಲ್ಲ. ಅವರನ್ನು ಎಷ್ಟು ಗಂಟೆ ಬೇಕಾದರೂ ದುಡಿಸಿಕೊಳ್ಳಬಹುದು, ಯಾವಾಗ ಬೇಕಾದರೂ ಕೆಲಸದಿಂದ ಕಿತ್ತುಹಾಕಬಹುದು ಎನ್ನುವ ಪರಿಸ್ಥಿತಿ ಇದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಬಂಡವಾಳ ಹಾಕುತ್ತಾರೆ, ಉದ್ಯೋಗ ಸೃಷ್ಟಿ ಮಾಡುತ್ತಾರೆ ಎನ್ನುವ ನೆಪದಲ್ಲಿ ಅವರಿಗೆ ಎಲ್ಲ ಕಾಯ್ದೆಗಳಿಂದ ವಿನಾಯಿತಿ ಕೊಡುವುದು ಸರಿ ಅಲ್ಲ. ಇಡೀ ಕಾರ್ಪೊರೇಟ್ ವಲಯದ ವ್ಯವಸ್ಥೆಯೇ ಹೀಗಿದೆ. ಈ ವ್ಯವಸ್ಥೆ ಸಂಪೂರ್ಣವಾಗಿ ಬದಲಾಗಬೇಕು ಎನ್ನುವುದು ನಮ್ಮ ಬೇಡಿಕೆ' ಎನ್ನುವರು.

'ಉತ್ಪಾದನೆ ಮತ್ತು ಲಾಭದ ಮೇಲೆ ಪರಿಣಾಮ'



ಇಂದಿನ ಸ್ಪರ್ಧಾತ್ಮಕ ಪರಿಸ್ಥಿತಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು ಬೃಹತ್ ಕೈಗಾರಿಕೆಗಳಿಂದ ಪೈಪೋಟಿ ಎದುರಿಸಬೇಕಾಗಿದೆ. ಸಣ್ಣ ಕೈಗಾರಿಕೆಗಳಲ್ಲಿ ಹಲವು ಜನರ ಕೆಲಸವನ್ನು ಒಬ್ಬ ಕಾರ್ಮಿಕ ನಿರ್ವಹಿಸಬೇಕಾದ ಪರಿಸ್ಥಿತಿ ಇದೆ. ಹೀಗಾಗಿ ಖರ್ಚನ್ನು ಸರಿದೂಗಿಸಲು ಮತ್ತು ಸಣ್ಣ ಲಾಭವನ್ನು ಪಡೆಯಲು ಉದ್ಯೋಗಿಗಳ ಕೆಲಸದ ಅವಧಿಯನ್ನು ಹೆಚ್ಚಿಸಬೇಕಾದ ಅವಶ್ಯಕತೆ ಇದೆ. ಇಲ್ಲದಿದ್ದಲ್ಲಿ ಅದು ಈಗಿನ ಪೈಪೋಟಿ ಕಾಲದಲ್ಲಿ ಕೈಗಾರಿಕೆಗಳ ಉತ್ಪಾದನೆ ಮತ್ತು ಲಾಭದ ಮೇಲೆ ಪರಿಣಾಮ ಬೀರಲಿದೆ. ಇದೇನೇ ಇದ್ದರೂ ವಾರದಲ್ಲಿ ಒಂದು ದಿನ ರಜೆ ನೀಡಬೇಕಾಗಿರುವುದು ಅತ್ಯವಶ್ಯವಾಗಿದೆ. ಶೇಕಡಾ 99 ರಷ್ಟು ಕಂಪನಿಗಳು ಉದ್ಯೋಗಿಗಳಿಗೆ ಉತ್ತಮ ವಾತಾವರಣ ಒದಗಿಸಿದ್ದು, ವ್ಯಾಪಾರ, ವ್ಯವಹಾರ ಮತ್ತು ಲಾಭಾಂಶವನ್ನು ನಿರ್ವಹಣೆ ಮಾಡುತ್ತಿವೆ.

ಎಂ.ಜಿ.ರಾಜಗೋಪಾಲ್, ಕಾಸಿಯಾ ಅಧ್ಯಕ್ಷ

'ವಲಯಕ್ಕೆ ತಕ್ಕಂತೆ ಕೆಲಸದ ಅವಧಿ'



ಬದಲಾಗುತ್ತಿರುವ ಕಾಲಘಟ್ಟದಲ್ಲಿ ಕೈಗಾರಿಕಾ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿ ತೊಡಗಿಕೊಂಡಿರುವ ಕಾರ್ಮಿಕರ ಕೆಲಸದ ಅವಧಿಯಲ್ಲಿ ಬದಲಾವಣೆ ಬಹಳ ಅಗತ್ಯ. ಉದ್ಯೋಗಿಗಳು ದಿನಕ್ಕೆ ಎಷ್ಟು ಗಂಟೆ, ವಾರಕ್ಕೆ ಎಷ್ಟು ದಿನ ಕೆಲಸ ಮಾಡಬೇಕು ಎನ್ನುವ ನಿಟ್ಟಿನಲ್ಲಿ ಆಯಾ ಕ್ಷೇತ್ರಗಳಿಗೆ ಸೀಮಿತವಾಗಿ ನಿರ್ಧಾರ ಕೈಗೊಳ್ಳುವುದು ಸಮಂಜಸ. ಆಯಾ ಕೈಗಾರಿಕೆಗಳಿಗೆ ತಮ್ಮದೇ ವಿಶೇಷ ರೀತಿಯ ಮಾನವ ಶ್ರಮದ ಅವಶ್ಯಕತೆಯಿರುತ್ತದೆ. ಐಟಿ ವಲಯದ ಉದ್ಯೋಗಿಗಳು ವಾರಕ್ಕೆ ಐದು ದಿನ ಕೆಲಸ ಮಾಡುತ್ತಾರೆ. ಅದೇ ರೀತಿ ಕಾರ್ಖಾನೆಗಳ ಕಾರ್ಮಿಕರು ವಾರಕ್ಕೆ ಆರು ದಿನ ಕೆಲಸ ಮಾಡುತ್ತಾರೆ.

ಈ ವಿಚಾರದ ಬಗ್ಗೆ ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ ಅವರ ಹೇಳಿಕೆಯನ್ನು ಜನ ವೈಯಕ್ತಿಕವಾಗಿ ತೆಗೆದುಕೊಳ್ಳಬೇಕು. ತಮ್ಮ ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಗೆ ಹೆಚ್ಚಿನ ಅವಧಿಯ ಕೆಲಸದಲ್ಲಿ ತೊಡಗಿಕೊಳ್ಳಬೇಕು ಎನ್ನುವುದು ಅವರ ಮಾತಿನ ಅರ್ಥವಾಗಿದೆ. ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲರೂ ಹೆಚ್ಚಿನದನ್ನು ಸಾಧಿಸಬೇಕು ಎನ್ನುವ ಆಸೆಯನ್ನು ಹೊಂದಿರುತ್ತಾರೆ. ಈ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಒತ್ತಡ ಹೆಚ್ಚಿಸಿಕೊಳ್ಳುವುದು ಸಾಮಾನ್ಯ. ಕಂಪನಿಗಳು ಈ ರೀತಿಯ ಅನಗತ್ಯ ಸ್ಪರ್ಧೆ ಉಂಟಾಗದೇ ಇರುವುದರತ್ತ ಗಮನಹರಿಸಬೇಕು.

ರಮೇಶ್‌ಚಂದ್ರ ಲಹೋಟಿ, ನಿಕಟ ಪೂರ್ವ ಅಧ್ಯಕ್ಷ, ಎಫ್‌ಕೆಸಿಸಿಐ

'ಕೆಲಸದ ಅವಧಿ ವಿಸ್ತರಿಸುವ ಚಿಂತನೆ ಇಲ್ಲ'



'ಐಟಿ ಸೇವೆಗಳ ರಫ್ತಿನಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದ್ದು, ರಾಜ್ಯದಲ್ಲಿ ಐಟಿ ಉದ್ಯೋಗಿಗಳ ಕೆಲಸದ ಅವಧಿಯನ್ನು ವಿಸ್ತರಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. ಐಟಿ ಉದ್ಯೋಗಿಗಳು ದಿನಕ್ಕೆ 10 ಗಂಟೆ ಕೆಲಸ ಮಾಡುತ್ತಿದ್ದಾರೆ. ಇದನ್ನು ಹೆಚ್ಚಿಸಲು ಕಾರ್ಮಿಕ ಇಲಾಖೆಗೆ ನಿರ್ದಿಷ್ಟ ಐಟಿ ಕಂಪನಿಗಳು ಅರ್ಜಿ ಸಲ್ಲಿಸಬೇಕಾಗುತ್ತದೆ' ಎಂದು ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಕರ್ನಾಟಕವು ಪಶ್ಚಿಮ ಬಂಗಾಳ ಆಗಬಾರದು ಎಂಬ ಉದ್ದೇಶದಿಂದ ಐಟಿ ವಲಯದಲ್ಲಿ ಕಾರ್ಮಿಕ ಸಂಘಟನೆಗಳಿಗೆ ಸರ್ಕಾರ ಮಾನ್ಯತೆ ನೀಡಿಲ್ಲ. ಹಾಗೆಂದು ಐಟಿ ಉದ್ಯೋಗಿಗಳ ಶೋಷಣೆಗೆ ಅವಕಾಶವಿಲ್ಲ. ಈ ಬಗ್ಗೆ ವಿವಿಧ ಸರ್ಕಾರೇತರ ಸಂಘಟನೆಗಳು ನೀಡುವ ವರದಿಗಳನ್ನು ಆಧರಿಸಿ ಆಯಾ ಐಟಿ ಕಂಪನಿಗಳಿಗೆ ಪತ್ರ ಬರೆಯುತ್ತಿದ್ದೇವೆ' ಎಂದರು.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 29-09-1999

- **ಹೊಸ ಕೃಷಿ, ಪಶುವೈದ್ಯ ಕಾಲೇಜು ಮಂಜೂರು**

ಬೆಂಗಳೂರು, ಸೆ.28 — ಹೊಸಕೋಟೆ ತಾಲ್ಲೂಕು ಕನ್ನಮಂಗಲ ಸಮೀಪ ಹೊಸದಾಗಿ ತೋಟಗಾರಿಕಾ ಕಾಲೇಜು, ಕಲ್ಬುರ್ಗಿ ಜಿಲ್ಲೆ ಭೀಮರಾಯನಗುಡಿಯಲ್ಲಿ ಕೃಷಿ ಕಾಲೇಜು ಹಾಗೂ ಬಳ್ಳಾರಿ ಜಿಲ್ಲೆಯ ಕುರೆಕುಪ್ಪೆ ಬಳಿ ಪಶುವೈದ್ಯ ಕಾಲೇಜುಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಸಚಿವ ಸಂಪುಟ ತೀರ್ಮಾನ ತೆಗೆದುಕೊಂಡಿದೆ.

ಮುಖ್ಯಮಂತ್ರಿಗಳ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಇಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯಗಳನ್ನು, ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ವಾರ್ತಾ ಸಚಿವ ಎಂ.ಪಿ ಪ್ರಕಾಶ್ ವಿವರಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 29-09-1974

- **ಹುಂಜಾ ವಿಲೀನದ ಭುಟ್ಟೋ ಕ್ರಮ 'ರಾಜಕೀಯ ಆಕ್ರಮಣ': ಕಾಶ್ಮೀರ ಮುಖ್ಯಮಂತ್ರಿ ಆರೋಪ**

ಶ್ರೀನಗರ, ಸೆ.28— ಜಮ್ಮು–ಕಾಶ್ಮೀರ ರಾಜ್ಯದ ಆಕ್ರಮಿತ ಪ್ರದೇಶದಲ್ಲಿನ ಹುಂಜಾ ಸಣ್ಣ ಸಂಸ್ಥಾನವನ್ನು ರದ್ದುಪಡಿಸಿ ಅದನ್ನು ಪಾಕಿಸ್ತಾನದಲ್ಲಿ ವಿಲೀನ ಮಾಡುವುದರ ಮೂಲಕ ಪ್ರಧಾನಿ ಭುಟ್ಟೋ ಅವರು ರಾಜಕೀಯ ಆಕ್ರಮಣ ಎಸಗಿದ್ದಾರೆ ಎಂದು ಕಾಶ್ಮೀರದ ಮುಖ್ಯಮಂತ್ರಿ ಸೈಯದ್ ಮೀರ್‌ಖಾಸಿಂ ಅವರು ಇಂದು ಆಪಾದಿಸಿದರು.

ರಾಜ್ಯದ ವಿಧಾನಸಭೆಯಲ್ಲಿ ಕಾಂಗ್ರೆಸ್ ಮತ್ತು ಜನಸಂಘದ ಸದಸ್ಯರ ಸರಕಾರದ ಗಮನ ಸೆಳೆಯುವ ಸೂಚನೆಗೆ ಅವರು ಈ ರೀತಿ ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಸೆಪ್ಟೆಂಬರ್ 29, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದ್ವಾದಶಿ ಗಂ. 16-48 **ನಕ್ಷತ್ರ:** ಮಘ ಅಹೋರಾತ್ರ **ಯೋಗ:** ಸಾಧ್ಯ ಗಂ. 24-27 **ಕರಣ:** ತೈತಿಲ ಗಂ. 16-48, ಕನ್ಯಾ ಮಾಸದ 12 ನೇ ದಿನ, ಮಳೆನಕ್ಷತ್ರ: ಹಸ್ತ 1.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-23 **ಸೂರ್ಯಾಸ್ತ:** 06-18
ಮುಸ್ಲಿಂ ದಿನಾಂಕ: 25 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ: 1, 11

ಮೇಷ: ಮಾಡಿದ ತಪ್ಪುಗಳಿಗೆ ಪಶ್ಚಾತಾಪ ಪಡುತ್ತಿದ್ದರೂ ತಪ್ಪುಗಳು ಪುನರಾವರ್ತನೆಯಾಗುತ್ತದೆ. ನೃತ್ಯಾಭ್ಯಾಸ ಮುಂದುವರಿಸುವಂತೆ ಅಧ್ಯಾಪಕರಿಂದ ಒತ್ತಾಯ. ಕೊಡು-ಕೊಳ್ಳುವಿಕೆಯಿಂದ ಅಧಿಕ ಲಾಭ.

ವೃಷಭ: ಬಾಲ್ಯ ಸ್ನೇಹಿತರೊಂದಿಗೆ ಹೆಚ್ಚಿನ ಸಮಯ ಕಳೆಯುವ ಸಂದರ್ಭ ಒದಗಿಬರುವ ಸಾಧ್ಯತೆ ಇದೆ. ಉದ್ಯೋಗ ಕ್ಷೇತ್ರದಲ್ಲಿ ಬಂದಿರುವ ಸಮಸ್ಯೆಗಳಿಗೆ ಪರಿಹಾರಗಳು ದೊರೆಯಲಿದೆ. ಗಣಪತಿ ಆರಾಧನೆಯಿಂದ ಶುಭವಾಗುತ್ತದೆ.

ಮಿಥುನ: ಕೊಡು ಕೊಳ್ಳುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ ಕಂಡು ಕೆಲಸಗಳನ್ನು ವೃದ್ಧಿಸಿಕೊಳ್ಳುವಿರಿ. ಗೃಹ ನಿರ್ಮಾಣ ಕಾರ್ಯಗಳ ಚಿಂತನೆ ಕಾರ್ಯಗತವಾಗಲಿದೆ. ಹವ್ಯಾಸಿ ಉಪನ್ಯಾಸಕರಿಗೆ ಹೇರಳ ಅವಕಾಶ ಸಿಗಲಿದೆ.

ಕರ್ಕಾಟಕ: ನೀವು ಮಾಡುವ ಕೆಲಸಗಳಲ್ಲಿ ಏಕಾಗ್ರತೆಯ ಜೊತೆ ಆತ್ಮವಿಶ್ವಾಸವಿದ್ದರೆ ಯಶಸ್ವಿಯಾಗುವಿರಿ. ಆಟಿಕೆ ಮತ್ತು ಉಡುಗೊರೆ ವಸ್ತುಗಳ ಮಾರಾಟಗಾರರಿಗೆ ಉತ್ತಮ ಲಾಭವಿರುವುದು.

ಸಿಂಹ: ಇನ್ನೊಬ್ಬರಿಗೆ ಸಹಾಯ ಮಾಡುವ ನಡುವಳಿಕೆಯು ಅಭಿವೃದ್ಧಿಗೆ ರಕ್ಷೆಯಾಗಿ ಇರುತ್ತದೆ. ಭೂ ಖರೀದಿ ಅಥವಾ ಗೃಹ ನಿರ್ಮಾಣ ಕಾರ್ಯದಂತಹ ನಿಮ್ಮ ಕನಸಿನ ಯೋಜನೆಗಳು ಕಾರ್ಯರೂಪಕ್ಕೆ ಬರಲಿದೆ.

ಕನ್ಯಾ: ಕೃಷಿಗೆ ಸಂಬಂಧಿಸಿದ ಯಂತ್ರಗಳ ಖರೀದಿಯಿಂದ ಅನುಕೂಲಕರ ವಾತಾವರಣ ಪ್ರಾಪ್ತಿ. ಇಂದಿನ ದಿನಚರಿಯು ನಿಮ್ಮವರಲ್ಲಿ ಸಂತೋಷ ಮೂಡಿಸುತ್ತದೆ. ಇಂದು ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು.

ತುಲಾ: ಫ್ಯಾಷನ್ ಡಿಸೈನರ್‌ಗಳು ಹೆಚ್ಚಿನ ಅವಕಾಶ ಹಾಗೂ ಉತ್ತಮ ಧನಲಾಭವನ್ನೂ ಪಡೆಯುವರು. ಸ್ನೇಹಿತರೊಂದಿಗೆ ಸಂತೋಷ ಕೂಟದಲ್ಲಿ ಭಾಗಿಯಾಗುವ ಅವಕಾಶ ಸಿಗಲಿದೆ. ವ್ಯವಹಾರಗಳಲ್ಲಿ ಹಿಡಿತ ಸಾಧಿಸುವಿರಿ.

ವೃಶ್ಚಿಕ: ನಿಯೋಜಿತ ಕೆಲಸಗಳನ್ನು ಉತ್ಸಾಹದಿಂದ ಮಾಡಿ ಮುಗಿಸುವಿರಿ ಮತ್ತು ಇನ್ನೊಂದು ಹೊಸ ಕೆಲಸ ಕಾದಿರಲಿದೆ. ಅನಿವಾರ್ಯ ಕಾರಣಗಳಿಂದಾಗಿ ಸಂಸಾರದ ಜವಾಬ್ದಾರಿ ಜಾಸ್ತಿಯಾಗುವುದು.

ಧನು: ಆತ್ಮೀಯರು ನೀಡಿದ ಸಲಹೆ ಸೂಚನೆಗಳನ್ನು ಪಾಲಿಸಲಾಗದೇ ಬಿಡಲೂ ಆಗದೇ ಚಡಪಡಿಸುವ ಪರಿಸ್ಥಿತಿ ನಿಮ್ಮದಾಗುತ್ತದೆ. ಎಲ್ಲವನ್ನೂ ನಿಭಾಯಿಸುವ ಸಾಮರ್ಥ್ಯ ನಿಮ್ಮಲ್ಲಿದ್ದರೂ ಸೋಮಾರಿತನ ಕಾಡಬಹುದು.

ಮಕರ: ಸಾಹಸಿ ಮನೋಭಾವವು ಇಂದು ನಿಮ್ಮನ್ನು ಆವರಿಸಲಿದ್ದು, ಚಾರಣ ಅಥವಾ ಸವಾಲಿನ ಕೆಲಸಗಳನ್ನು ಮಾಡುವಿರಿ. ಸಹವರ್ತಿಗಳ ಸಹಾಯದಿಂದ ಬಾಕಿ ಇದ್ದ ಕೆಲಸಗಳನ್ನು ಪೂರ್ತಿಗೊಳಿಸುವಿರಿ.

ಕುಂಭ: ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಯಾವುದೇ ರೀತಿಯ ತೀರ್ಮಾನ ತೆಗೆದುಕೊಳ್ಳಬೇಡಿ. ಹೊಸ ಉದ್ಯೋಗ ಅಥವಾ ಕರಾರಿಗೆ ಆತುರದಲ್ಲಿ ಸಹಿ ಹಾಕಬೇಡಿ.

ಮೀನ: ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಒಂದು ಅವಕಾಶ ಸಿಗುವುದು. ರಾಜಕೀಯ ರಂಗದಲ್ಲಿ ಬಹಳ ದಿನಗಳ ನಂತರ ಯಶಸ್ಸು ದೊರೆಯಲಿದೆ. ತಾಯಿಯ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಕಾಣುವುದು.

ಪದಬಂಧ 5817


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

5.ಪಶ್ಚಿಮ ದಿಕ್ಕು (4)
6.ಜಾತ ಕಾಲದಲ್ಲಿ ಕಾಣಿಸಿದ ಬೆಂಕಿ (4)
7.ಮಾಸದ ಕೊನೆಗೆ ಒಂದಾಗಿ ಸೇರಿಸಿದುದು (3)
9.ಹುರಿಯಲ್ಲಿರುವ ಸ್ಪರ್ಧಿ (3)
10.ಅದರಲ್ಲೇ ನೆಟ್ಟ ಮನಸ್ಸು! (5)
11.ಹೊರ ದೇಶಗಳಿಗೆ ಕಳಿಸುವುದು (3)
12.ಕುದುರೆಯನ್ನೇರುವ ಬಳೆ (3)
16.ಕೊನೆಗಿದ್ದ ಚಾರನ ಕೆಟ್ಟ ಯೋಚನೆ! (4)
17.ತಾಯಿಯ ತಾಯಿ (4)

ಮೇಲಿಂದ ಕೆಳಕ್ಕೆ

1.ಸನ್ಯಾಸ ದೀಕ್ಷೆ ತೊಟ್ಟವನ ಭಾಷಣ! (4)
2.ಹಣ ಕೊಟ್ಟು ಖರೀದಿಸಿರುವ ಸೊಡರು (3)
3.ಕೊನೆಗೆ ಜಾರಿದ್ದಕ್ಕೇ ಈ ಕಾಯಿಲೆ! (3)
4.ಮದಿಸಿದ ಆನೆ (4)
8.ನಿರಂತರ ಎಂದು ಹೀಗೆನ್ನಿ (3)
9.ಹುತ್ತದ ಹತ್ತಿರ ನಡೆದ ಕೊಡವರ ಹಬ್ಬ (3)
11.ಹತೋಟಿಯಿಲ್ಲದ್ದನ್ನು ಈ ರೀತಿಯೂ ಹೇಳಬಹುದು (4)
13.ವೇದೋಕ್ತ ಶಾಸ್ತ್ರಗಳನ್ನು ಮಾಡಿಸುವವನು (4)
14.ನೀರು ಜಿನುಗುವ ತಗ್ಗು (3)
15.ಮಾನಿನಿಯ ಮೇಲೆಯೇ ಈ ಸಂಶಯ! (3)



5816ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಹಿಷ್ಣುತೆ 3.ಜಲಾಶಯ 5.ಕಕವ 7.ಗಮಕಿ 9.ನಾಳ 10.ಉಮೇದು 11.ನಕ್ಷೆ 12.ವನಿತೆ 14.ಕುರವಿ 16.ಪರಬತ್ತು 17.ಭಯಂಕರ

ಮೇಲಿಂದ ಕೆಳಕ್ಕೆ:
1.ಸರಾಗ 2.ತಕ 3.ಜವ 4.ಯಮಳ 6.ಕಲಸುಮೇಲೋಗರ 8.ಮಹತ್ವಾಕಾಂಕ್ಷೆ 9.ನಾಯಕಸಾನಿ 11.ನಹುಷ 13.ತೆಪರ 14.ಕುತ್ತು 15.ವಿಭ

ಸುಡೊಕು 6202

	9	4		5			2	1
3		5	2		1	7		
	1			9			3	5
5		7				1		
	6						8	
9		8			4	5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6201 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅಂದಾಜು ಸಮಿತಿ ಅತೃಪ್ತಿ • ಯೋಜನಾ ವೆಚ್ಚ ಹಿಗ್ಗಿದ್ದಕ್ಕೆ ಅಸಮಾಧಾನ • ಲೆಕ್ಕ ಪರಿಶೋಧನೆಗೆ ಸೂಚನೆ

'ಕರ್ನಾಟಕ ಭವನ ಕಾಮಗಾರಿ ಅವೈಜ್ಞಾನಿಕ'

ಪ್ರಜಾವಾಣಿ ವಾರ್ತೆ

ನವದೆಹಲಿ: ಇಲ್ಲಿನ ನೂತನ ಕರ್ನಾಟಕ ಭವನದ ಕಟ್ಟಡ ಕಾಮಗಾರಿ ಅವೈಜ್ಞಾನಿಕ ಹಾಗೂ ಕಳಪೆಯಾಗಿದೆ ಎಂದು ವಿಧಾನಮಂಡಲದ ಅಂದಾಜು ಸಮಿತಿ ಅಸಮಾಧಾನ ವ್ಯಕ್ತಪಡಿಸಿತು.

ಅಧ್ಯಕ್ಷ ಯಶವಂತರಾಯಗೌಡ ಪಾಟೀಲ, ಸದಸ್ಯರಾದ ಬಿ.ಆರ್. ಪಾಟೀಲ, ಎಸ್.ಮುನಿರಾಜು ಮತ್ತಿತರರನ್ನು ಒಳಗೊಂಡ ಸಮಿತಿಯು ಭವನದ ಕಾಮಗಾರಿಯನ್ನು ಪರಿಶೀಲಿಸಿತು ಹಾಗೂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿತು.

ಕಟ್ಟಡದ ಗುಣಮಟ್ಟದ ಬಗ್ಗೆ ಭಾರತೀಯ ತಾಂತ್ರಿಕ ಸಂಸ್ಥೆಯಿಂದ (ಐಐಟಿ) ಪರಿಶೀಲನೆ ನಡೆಸಲು ಹಾಗೂ ತಜ್ಞ ಸಂಸ್ಥೆಯಿಂದ ಲೆಕ್ಕಪರಿಶೋಧನೆ ನಡೆಸಬೇಕು. ಅಲ್ಲಿಯವರೆಗೆ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಬಾರದು ಎಂದು ಸಮಿತಿ ತಾಕೀತು ಮಾಡಿತು.



ನೂತನ ಭವನದ ಕಾಮಗಾರಿಯನ್ನು ಇತ್ತೀಚೆಗೆ ಪರಿಶೀಲಿಸಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್

ಭವನದ ಯೋಜನಾ ವಿನ್ಯಾಸ, ಗುಣಮಟ್ಟ ಹಾಗೂ ಕಾಮಗಾರಿ ವಿಳಂಬದ ಬಗ್ಗೆ ಪರಿಶೀಲನೆಗೆ ಸಮಿತಿ ರಚನೆ ಮಾಡುವಂತೆ ಕೋರಿ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆಯಲು ಸಮಿತಿ ತೀರ್ಮಾನಿಸಿತು. ಕಾಮಗಾರಿಯ ಮೇಲ್ವಿಚಾರಣೆ ನೋಡಿಕೊಂಡ ಸ್ಥಾನಿಕ ಆಯುಕ್ತರು, ಲೋಕೋಪಯೋಗಿ ಕಾರ್ಯದರ್ಶಿ ಹಾಗೂ ಎಂಜಿನಿಯರ್ ಅವರಿಗೆ ನೋಟಿಸ್ ನೀಡಲು ಸಹ ಸಮಿತಿ ಸೂಚಿಸಿತು.

ಕೌಟಿಲ್ಯ ಮಾರ್ಗದಲ್ಲಿರುವ 51 ವರ್ಷ ಹಳೆಯದಾದ ಮೂರಂತಸ್ತಿನ ಬೃಹತ್ ಕಟ್ಟಡವನ್ನು ಕೆಡವಿ ಅದೇ ಜಾಗದಲ್ಲಿ ಅಂದಾಜು ₹ 82 ಕೋಟಿ ವೆಚ್ಚದಲ್ಲಿ ಐದು ಅಂತಸ್ತಿನ ನೂತನ ಕಟ್ಟಡ ಕಟ್ಟುವುದಕ್ಕೆ ಕರ್ನಾಟಕ ಸರ್ಕಾರವು 2019ರ ಮಾರ್ಚ್‌ನಲ್ಲಿ ಶಂಕುಸ್ಥಾಪನೆ ನೆರವೇರಿಸಿತ್ತು. ಆಗ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದರು ಹಾಗೂ ಎಚ್.ಡಿ.ರೇವಣ್ಣ ಲೋಕೋಪಯೋಗಿ ಸಚಿವರಾಗಿದ್ದರು.

'ಶಂಕುಸ್ಥಾಪನೆ ನೆರವೇರಿ ಐದು ವರ್ಷಗಳು ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ. ಕಟ್ಟಡ ಹೊರನೋಟಕ್ಕೆ ಚೆನ್ನಾಗಿ ಕಾಣುತ್ತದೆ. ಶಾಸಕರಿಗಾಗಿ 52 ಕೊಠಡಿಗಳನ್ನು ನಿರ್ಮಿಸಲಾಗಿದೆ. ಇಕ್ಕಟ್ಟಾದ ಕೊಠಡಿಗಳಲ್ಲಿ ಸರಿಯಾದ ಶೌಚಾಲಯ ವ್ಯವಸ್ಥೆ ಇಲ್ಲ. ಶಾಸಕರ ಕೊಠಡಿಗಳ ನಡುವಿನಲ್ಲೇ ಪಿಲ್ಲರ್‌ಗಳು ಇವೆ. ಆದರೆ, ಅಧಿಕಾರಿಗಳಿಗೆ ವಿಶಾಲವಾದ ಕೊಠಡಿಗಳನ್ನು ನಿರ್ಮಿಸಲಾಗಿದೆ ಹಾಗೂ ಸಕಲ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ' ಎಂದು ಸಮಿತಿಯು ಅಸಮಾಧಾನ ವ್ಯಕ್ತಪಡಿಸಿತು. ಇದರಲ್ಲಿ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ, ಸ್ಥಾನಿಕ ಆಯುಕ್ತರು ಹಾಗೂ ಉಸ್ತುವಾರಿ ಎಂಜಿನಿಯರ್ ಲೋಪ ಎದ್ದು ಕಾಣುತ್ತಿದೆ' ಎಂದು ಸಮಿತಿ ಅಭಿಪ್ರಾಯಪಟ್ಟಿತು.

'ಕಟ್ಟಡದ ಮೂಲ ವಿನ್ಯಾಸದಲ್ಲೇ ಲೋಪ ಇದೆ. ಸರ್.ಎಂ. ವಿಶ್ವೇಶ್ವರಯ್ಯ ನಾಡಿನಿಂದ ಬಂದವರು ಈ ರೀತಿ ಯೋಜನೆ ರೂಪಿಸುತ್ತಾರೆ ಎಂದರೆ ನಂಬಲು ಅಸಾಧ್ಯ' ಎಂದು ಸಮಿತಿ ಸದಸ್ಯರೊಬ್ಬರು ಹೇಳಿದರು.

'ಮಧ್ಯಪ್ರದೇಶದ ಭವನದ ಕಾಮಗಾರಿಯನ್ನೂ ಇದೇ ವೇಳೆ ವೀಕ್ಷಿಸಿದ್ದು, ಒಂದೂವರೆ ವರ್ಷಗಳಲ್ಲೇ ಪಂಚತಾರಾ ಹೋಟೆಲ್ ರೀತಿಯಲ್ಲಿ ಕಟ್ಟಡ ನಿರ್ಮಾಣ ಮಾಡಿದ್ದಾರೆ. ಅಲ್ಲಿ ಮಧ್ಯಪ್ರದೇಶದ ಸೊಗಡು ಇದೆ. ಆದರೆ, ಕರ್ನಾಟಕ ಭವನದ ಕಾಮಗಾರಿ ಅವೈಜ್ಞಾನಿಕವಾಗಿ ನಡೆದಿದೆ. ಈ ಬಗ್ಗೆ ವಿಚಾರಿಸಿದರೆ ಅಧಿಕಾರಿಗಳು ಕೋವಿಡ್ ನೆಪ ಹೇಳಿದರು' ಎಂದು ಸಮಿತಿಯ ಮತ್ತೊಬ್ಬ ಸದಸ್ಯರು ತಿಳಿಸಿದರು.

'ಆರಂಭದಲ್ಲಿ ಯೋಜನಾ ವೆಚ್ಚ ₹82 ಕೋಟಿ ಇತ್ತು. ಬಳಿಕ ₹120 ಕೋಟಿಗೆ ಏರಿತು. ಈಗ ₹147 ಕೋಟಿಗೆ ಜಿಗಿದಿದೆ. ಗುತ್ತಿಗೆದಾರರಿಗೆ ಈವರೆಗೆ ₹65 ಕೋಟಿ ಪಾವತಿ ಮಾಡಲಾಗಿದೆ. ₹15 ಕೋಟಿ ಪಾವತಿಗೆ ಪ್ರಸ್ತಾವ ಸಲ್ಲಿಕೆಯಾಗಿದೆ. ಉಳಿದ ಮೊತ್ತ ಪಾವತಿ ಮಾಡದಂತೆ ಸೂಚಿಸಿದ್ದೇವೆ' ಎಂದರು.

'ಕಳೆದ ಮೂರು–ನಾಲ್ಕು ವರ್ಷಗಳಲ್ಲಿ ಕರ್ನಾಟಕ ಭವನದಲ್ಲಿ ನಾಲ್ವರು ನಿವಾಸಿ ಅಧಿಕಾರಿಗಳು (ಸ್ಥಾನಿಕ ಆಯುಕ್ತರು, ಸಹಾಯಕ ಸ್ಥಾನಿಕ ಆಯುಕ್ತರು) ಇದ್ದರು. ಅವರೆಲ್ಲ ಈ ಕಾಮಗಾರಿ ಬಗ್ಗೆ ನಿಗಾ ವಹಿಸಿಲ್ಲ' ಎಂದು ಕಿಡಿಕಾರಿದರು.

ಅ. 2 ರಂದು ಗಾಂಧಿ ನಡಿಗೆ, ಸ್ವಚ್ಛತೆ ಪ್ರತಿಜ್ಞೆ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾತ್ಮ ಗಾಂಧೀಜಿ ಅವರು ಬೆಳಗಾವಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿಕೊಂಡು 100 ವರ್ಷವಾಗಿರುವ ಕಾರಣ, ರಾಜ್ಯಾದ್ಯಂತ ಒಂದು ವರ್ಷ ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಜಿಲ್ಲಾ, ತಾಲ್ಲೂಕು ಕೇಂದ್ರ ಹಾಗೂ ಪಾಲಿಕೆ ಮಟ್ಟದಲ್ಲಿ ಇದೇ ಅ. 2ರಂದು 'ಗಾಂಧಿ ನಡಿಗೆ' ಮತ್ತು 'ಸ್ವಚ್ಛತೆಯ ಪ್ರತಿಜ್ಞಾ ಸ್ವೀಕಾರ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದರು.

'ಅಂದು ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನ ಗಾಂಧಿ ಭವನದಿಂದ ವಿಧಾನಸೌಧದ ಗಾಂಧಿ ಪ್ರತಿಮೆವರೆಗೆ ನಡಿಗೆ ಆಯೋಜಿಸಲಾಗಿದೆ. ಪಕ್ಷಾತೀತವಾಗಿ ಎಲ್ಲ ಜನಪ್ರತಿನಿಧಿಗಳನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು' ಎಂದರು.

ಜೂಮ್ ಮೂಲಕ ಪ್ರತಿಜ್ಞೆ ವಿಧಿ: 'ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಇಬ್ಬರ ಜನ್ಮದಿನವೂ ಒಂದೇ ದಿನ ಆಗಿರುವ ಕಾರಣ, ಅಂದು ಇಬ್ಬರ ಪ್ರತಿಮೆಗೂ ಮಾಲಾರ್ಪಣೆ ಮಾಡಲಾಗುವುದು. ನಂತರ ನಡಿಗೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮತ್ತು ಬೆಂಗಳೂರಿನ 500 ಶಾಲಾ, ಕಾಲೇಜು ಮಕ್ಕಳಿಗೆ ಜೂಮ್ ಮೂಲಕ ಪ್ರತಿಜ್ಞಾ ವಿಧಿ ಬೋಧಿಸಲಾಗುವುದು' ಎಂದರು.

ಶ್ವೇತ ವಸ್ತ್ರ ಧರಿಸಿ ನಡಿಗೆ: 'ಜಿಲ್ಲಾ ಕೇಂದ್ರದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ತಾಲ್ಲೂಕು ಮಟ್ಟದಲ್ಲಿ ಶಾಸಕರು ಭಾಗವಹಿಸಲಿದ್ದಾರೆ. ಈ ನಡಿಗೆ ವೇಳೆ ಶ್ವೇತ ವಸ್ತ್ರ, ಗಾಂಧಿ ಟೋಪಿ ಧರಿಸುವಂತೆ ಮನವಿ ಮಾಡಲಾಗುವುದು' ಎಂದೂ ಹೇಳಿದರು.

'ಅಂದು ಮಧ್ಯಾಹ್ನ 12 ಗಂಟೆಯ ಬಳಿಕ ಬೆಂಗಳೂರಿನ ಭಾರತ ಜೋಡೊ ಭವನದಲ್ಲಿ ಪಕ್ಷದ ವತಿಯಿಂದ ಕಾರ್ಯಕ್ರಮ ನಡೆಯಲಿದೆ' ಎಂದರು.

ಡಿಡಿಯುಟಿಟಿಎಲ್ ಅಕ್ರಮ: ಮನೆ ನಿರ್ಮಾಣ, ಆಸ್ತಿ ಖರೀದಿಸಿದ್ದ ಆರೋಪಿ

ಶಂಕರಪ್ಪ ಸಹೋದರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಾಜ ಅರಸು ಟ್ರಕ್ ಟರ್ಮಿನಲ್ (ಡಿಡಿಯುಟಿಟಿಎಲ್) ಅಕ್ರಮ ಪ್ರಕರಣದಲ್ಲಿ ಪಾಲು ಪಡೆದಿದ್ದ ಆರೋಪದ ಮೇಲೆ ಮತ್ತೊಬ್ಬರನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ಡಿಡಿಯುಟಿಟಿಎಲ್ ಮಾಜಿ ವ್ಯವಸ್ಥಾಪಕ ನಿರ್ದೇಶಕ ಎಸ್.ಶಂಕರಪ್ಪ ಅವರ ಸಹೋದರ, ರಾಮನಗರ ಜಿಲ್ಲೆ ಮಾಯಾಗನಹಳ್ಳಿಯ ನಿವಾಸಿ ಎಂ.ಎಸ್. ಹೊನ್ನಪ್ಪ(67) ಬಂಧಿತರು.

ಇದೇ ಪ್ರಕರಣದಲ್ಲಿ ಈ ಹಿಂದೆ ಶಂಕರಪ್ಪ ಹಾಗೂ ಡಿಡಿಯುಟಿಟಿಎಲ್ ಮಾಜಿ ಅಧ್ಯಕ್ಷ, ಬಿಜೆಪಿ ಮುಖಂಡ ಡಿ.ಎಸ್.ವೀರಯ್ಯ ಅವರನ್ನೂ ಬಂಧಿಸಲಾಗಿತ್ತು. ಶಂಕರಪ್ಪ ನ್ಯಾಯಾಂಗ ಬಂಧನದಲ್ಲಿದ್ದಾರೆ. ವೀರಯ್ಯ ಅವರು ಜಾಮೀನ ಮೇಲೆ ಬಿಡುಗಡೆ ಆಗಿದ್ದಾರೆ.

'ಹೊನ್ನಪ್ಪ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಮೂರು ದಿನ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿತ್ತು. ವಿಚಾರಣೆ ವೇಳೆ ಆರೋಪಿಯ ಹೇಳಿಕೆ ದಾಖಲಿಸಿಕೊಂಡು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ರಾಜ್ಯದ ಹಲವೆಡೆ ಕಾಮಗಾರಿಗಳು ಅನುಷ್ಠಾನಗೊಳದೇ ಇದ್ದರೂ ಶಂಕರಪ್ಪ ಅವರು ಗುತ್ತಿಗೆದಾರರು ಸಲ್ಲಿಸಿದ್ದ ಬಿಲ್‌ಗಳ ಹಿಂಭಾಗದಲ್ಲಿ 'ಕಾಮಗಾರಿ ತೃಪ್ತಿಕರ'ವಾಗಿದೆ ಎಂದು ಬರೆದು ಸಹಿ ಮಾಡಿದ್ದರು. ಅಲ್ಲದೇ ರಾಜಾಜಿನಗರದ ಎಸ್‌ಬಿಐ ಬ್ಯಾಂಕ್‌ನಲ್ಲಿರುವ ಎಸ್.ಎಸ್.



ಹೊನ್ನಪ್ಪ

ಎಂಟರ್‌ಪ್ರೈಸಸ್ ಖಾತೆಗೆ ₹1.97 ಕೋಟಿ ಪಾವತಿ ಆಗಿತ್ತು. ಅದಾದ ಮೇಲೆ ಎಸ್.ಎಸ್. ಎಂಟರ್‌ಪ್ರೈಸಸ್‌ನವರು 2022ರ ಮಾರ್ಚ್ 17ರಂದು ದಂಕಾ ಟ್ರೇಡರ್ಸ್‌ನ ಖಾತೆಗೆ ₹31 ಲಕ್ಷ ವರ್ಗಾವಣೆ ಮಾಡಿದ್ದರು. ದಂಕಾ ಟ್ರೇಡರ್ಸ್‌ನ ವರು ಹೊನ್ನಪ್ಪ ಅವರ ಬ್ಯಾಂಕ್ ಖಾತೆಗೆ ₹20 ಲಕ್ಷ ವರ್ಗಾವಣೆ ಮಾಡಿದ್ದರು. ಇನ್ನೊಂದು ಮೂಲದಿಂದಲೂ ಹೊನ್ನಪ್ಪ ಅವರ ಖಾತೆಗೆ ₹20 ಲಕ್ಷ ವರ್ಗಾವಣೆ ಆಗಿತ್ತು' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಹೊನ್ನಪ್ಪ ಅವರಿಗೆ ಬಂದ ₹40 ಲಕ್ಷದಿಂದ ರಾಮನಗರದ ಚಮ್ಮನಹಳ್ಳಿಯಲ್ಲಿ ಪುತ್ರನ ಹೆಸರಿನಲ್ಲಿ ಮನೆ ನಿರ್ಮಾಣ ಮಾಡುತ್ತಿದ್ದಾರೆ. ಮಾದಾಪುರ ಹಾಗೂ ಮಾಯಾಗನಹಳ್ಳಿಯಲ್ಲಿ ಆಸ್ತಿ ಖರೀದಿಸಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಿಐಡಿ ಅಧಿಕಾರಿಯೊಬ್ಬರು ತಿಳಿಸಿದರು.

ದಾಳಿಯ ಮುನ್ಸೂಚನೆ: 'ತನಿಖಾಧಿಕಾರಿಗಳು ಮನೆಯ ಮೇಲೆ ದಾಳಿ ಮಾಡುವ ಸಾಧ್ಯತೆಯಿದ್ದು, ದಾಖಲೆಗಳನ್ನು ಬಚ್ಚಿಡುವಂತೆ ಶಂಕರಪ್ಪ ಅವರು ಸಹೋದರನಿಗೆ ಮಾಹಿತಿ ನೀಡಿದ್ದರು. ಹೊನ್ನಪ್ಪ ಅವರು ಆಸ್ತಿ ಖರೀದಿ ಸೇರಿದಂತೆ ಹಲವು ದಾಖಲೆಗಳನ್ನು ಬಚ್ಚಿಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ.



ಪ್ರಶಸ್ತಿ ಪ್ರದಾನ

ಶಿವಮೊಗ್ಗದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ 10 ಲೇಖಕರಿಗೆ ಕರ್ನಾಟಕ ಸಂಘದ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಜೇತರಿಗೆ ₹ 10 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಪ್ರದಾನ ಮಾಡಿದರು. ಲೇಖಕರಾದ ಕೆ.ಬಿ. ಪವಾರ, ರಾಜಾರಾಂ ತಲ್ಲೂರು, ಕಾತ್ಯಾಯಿನಿ ಕುಂಜಿಬೆಟ್ಟು, ಎಸ್.ಎಸ್. ಚಾಂದ್‌ಪಾಷ, ಗುರುರಾಜ್ ಎಸ್. ದಾವಣಗೆರೆ, ಗೋವಿಂದರಾಜು ಎಂ. ಕಲ್ಲೂರು, ಶಿವಕುಮಾರ ಮಾವಲಿ, ಎಸ್.ಎನ್.ಹೆಗಡೆ, ಲಲಿತಾ ಹೊಸಪ್ಯಾಟಿ ಹಾಗೂ ಡಾ.ಲಕ್ಷ್ಮಿ ಶ್ರೀನಿವಾಸನ್ ಪ್ರಶಸ್ತಿ ಸ್ವೀಕರಿಸಿದರು. ಕರ್ನಾಟಕ ಸಂಘದ ಅಧ್ಯಕ್ಷ ಎಂ.ಎನ್.ಸುಂದರರಾಜ್, ಕಾರ್ಯದರ್ಶಿ ಪ್ರೊ.ಎಂ.ಆಶಾಲತಾ, ಪದಾಧಿಕಾರಿಗಳಾದ ಡಾ.ನಾಗಮಣಿ, ಡಾ.ಗುರುದತ್ತ, ಎಸ್.ವೈ.ವಿನಯ್, ವ್ಯವಸ್ಥಾಪಕ ದಿನೇಶ್ ಉಪಸ್ಥಿತರಿದ್ದರು

ರಾಜ್ಯದ ಕೆಲವೆಡೆ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಹಾಗೂ ಮಲೆನಾಡಿನ ಕೆಲವೆಡೆ ಭಾನುವಾರ ಭಾರಿ ಮಳೆಯಾಗುವ ಸಾಧ್ಯತೆ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ನಾಲ್ಕು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಂಭವವಿದೆ. ಹಾಸನ, ಕೊಡಗು, ಮೈಸೂರು ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಭಾನುವಾರ ಹಾಗೂ ಸೋಮವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಊಟಕ್ಕೆ ಹೋಗಲು ಪೊಲೀಸ್ ವಾಹನ ತರಿಸಿದ

ಪ್ರಜಾವಾಣಿ ವಾರ್ತೆ

ಕೊಟ್ಟಿಗೆಹಾರ (ಚಿಕ್ಕಮಗಳೂರು): ಇಲ್ಲಿಗೆ ಸಮೀಪದ ತರುವೆ ಗ್ರಾಮದ ವ್ಯಕ್ತಿಯೊಬ್ಬರು ತನ್ನ ಮಾವನ ಮನೆಗೆ ತೆರಳಲು ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ಪೊಲೀಸ್ ವಾಹನವನ್ನು ಕರೆಸಿಕೊಂಡಿದ್ದಾರೆ.

ಮಾವನ ಮನೆಯಲ್ಲಿ ಹಮ್ಮಿಕೊಂಡಿದ್ದ ಪಿತೃಪಕ್ಷದ ಕಾರ್ಯಕ್ರಮದ ಊಟಕ್ಕೆ ತೆರಳಲು ಅಶೋಕ ಎಂಬುವರು ಸಹಾಯವಾಣಿಗೆ ಕರೆ ಮಾಡಿ ಪೊಲೀಸ್ ವಾಹನವನ್ನು ತರಿಸಿಕೊಂಡವರು.

ಬಣಕಲ್ ಸಮೀಪದ ಫಲ್ಗುಣಿಯಲ್ಲಿರುವ ಮಾವನ ಮನೆಗೆ ತೆರಳಲು ಕೊಟ್ಟಿಗೆಹಾರದಲ್ಲಿ ಯಾವುದೇ ವಾಹನ ಸಿಕ್ಕಿರಲಿಲ್ಲ. ಧಾರಾಕಾರವಾಗಿ ಮಳೆಯೂ ಸುರಿಯುತ್ತಿದ್ದರಿಂದ ವಾಹನಗಳ ಓಡಾಟವೂ ಕಡಿಮೆ ಇತ್ತು.



ಪಿತೃಪಕ್ಷದ ಊಟಕ್ಕೆ ಹೋಗಲು ಪೊಲೀಸರ ತುರ್ತು ವಾಹನ 112 ಕರೆ ಮಾಡಿದ ತರುವೆ ಗ್ರಾಮದ ಅಶೋಕ ಜೊತೆ ಪೊಲೀಸ್ ಸಿಬ್ಬಂದಿ

ಕಾದು ಸುಸ್ತಾದ ಅಶೋಕ್, ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ 'ಮನೆಯಲ್ಲಿ ತುಂಬಾ ಗಲಾಟೆಯಾಗುತ್ತಿದೆ' ಎಂದು ಹೇಳಿ ಪೊಲೀಸ್ ವಾಹನವನ್ನು ಕರೆಸಿಕೊಂಡಿದ್ದಾರೆ. ಕೂಡಲೇ ಕೊಟ್ಟಿಗೆಹಾರಕ್ಕೆ ಬಂದ ಪೊಲೀಸರು ಅಶೋಕ ಅವರನ್ನು ಕಂಡು, 'ಏನು ಗಲಾಟೆ, ಮನೆಗೆ ಹೋಗೋಣ ಬನ್ನಿ' ಎಂದು ಹೇಳಿದ್ದಾರೆ.

ಈ ವೇಳೆ ಅಶೋಕ್, 'ಏನೂ ಗಲಾಟೆ ಇಲ್ಲ ಸರ್. ಮಾವನ ಮನೆಯಲ್ಲಿ ಕಾರ್ಯಕ್ರಮ ಇದೆ. ಯಾವುದೇ ವಾಹನ ಆ ಕಡೆ ಹೋಗುತ್ತಿಲ್ಲ. ನೀವು ಬಂದಿದ್ದು ಒಳ್ಳೆಯದಾಯಿತು. ನನ್ನನ್ನು ಫಲ್ಗುಣಿವರೆಗೆ ಬಿಟ್ಟುಬಿಡಿ' ಎಂದು ಪೊಲೀಸರಿಗೆ ಮನವಿ ಮಾಡಿದ್ದಾರೆ. ಅಶೋಕ್ ಮಾತು ಕೇಳಿ ಅಚ್ಚರಿಗೊಂಡ ಪೊಲೀಸರು ಅವರಿಗೆ ಬುದ್ಧಿ ಹೇಳಿದ್ದಾರೆ.

'ಸರ್ಕಾರದ ವಾಹನ ಇರುವುದು ಸ್ವಂತದ ಬಳಕೆಗೆ ಅಲ್ಲ. ಇನ್ನೊಮ್ಮೆ ಈ ರೀತಿ ಕರೆ ಮಾಡಿದರೆ ನಿನ್ನ ಮೇಲೆ ಪ್ರಕರಣ ದಾಖಲಿಸಲಾಗುತ್ತದೆ' ಎಂದು ಎಚ್ಚರಿಸಿದ್ದಾರೆ.

ಬಳಿಕ ಚಾರ್ಮಾಡಿ ಕಡೆಯಿಂದ ಬಂದ ಲಾರಿಯೊಂದನ್ನು ನಿಲ್ಲಿಸಿ, ಅಶೋಕ್ ಅವರನ್ನು ಪೊಲೀಸರು ಫಲ್ಗುಣಿಗೆ ಕಳುಹಿಸಿದ್ದಾರೆ.

30ರಿಂದ ಸಾಮೂಹಿಕ ರಜೆ; ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದ ಎಲ್ಲ ಗ್ರಾಮ ಆಡಳಿತಾಧಿಕಾರಿಗಳು ಇದೇ 30ರಿಂದ ಒಂದು ತಿಂಗಳು ಸಾಮೂಹಿಕ ರಜೆ ಹಾಕಿ, ಪ್ರತಿಭಟನೆ ನಡೆಸಲು ಸಿದ್ಧತೆ ನಡೆಸಿದ್ದಾರೆ.

'ಕಂದಾಯ ಇಲಾಖೆಗೆ ಸೇರಿದ್ದರೂ, ಅನ್ಯ ಇಲಾಖೆಗಳ ಕಾರ್ಯದೊತ್ತಡವೇ ಹೆಚ್ಚಾಗಿದೆ. ಎಂದಿನ ಕೆಲಸದ ಜತೆಗೆ 17 ಆ್ಯಪ್‌ಗಳಲ್ಲಿ ವಿವಿಧ ದತ್ತಾಂಶಗಳನ್ನು ನಮೂದಿಸುವ ಕೆಲಸ ನೀಡಲಾಗಿದೆ. ಅಗತ್ಯ ಮೂಲಸೌಕರ್ಯವೂ ಇಲ್ಲ. ಈ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಲು ಪ್ರತಿಭಟಿಸಲಾಗುತ್ತದೆ' ಎಂದು ಗ್ರಾಮ ಆಡಳಿತಾಧಿಕಾರಿಗಳ ಸಂಘ ತಿಳಿಸಿದೆ.

'29ರಂದೂ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಿದ್ದು, 30ರಿಂದ ಒಂದು ತಿಂಗಳು ಸಾಮೂಹಿಕ ವಾಗಿ ರಜೆ ಹಾಕಲು ನಿರ್ಧರಿಸಲಾಗಿದೆ' ಎಂದು ಸಂಘವು ತಿಳಿಸಿದೆ.

1ರಂದು ಪ್ರತಿಭಟನೆ

ಕಲಬುರಗಿ: 'ಗ್ರಾಮ ಪಂಚಾಯಿತಿ ನೌಕರರ 19 ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಕ್ಟೋಬರ್ 1ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ಕಲಬುರಗಿ ನಿವಾಸದ ಎದುರು ಪ್ರತಿಭಟನೆ ನಡೆಸಲಾಗುವುದು' ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಅಧ್ಯಕ್ಷ ಎಂ.ಬಿ.ನಾಡಗೌಡ ತಿಳಿಸಿದರು.

350 ಕೆ.ಜಿ ಬೆಳ್ಳಿ, ₹1 ಕೋಟಿ ದರೋಡೆ

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ನೆಲಹಾಳ್ ಕ್ರಾಸ್ ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಶನಿವಾರ ಬೆಳಗಿನ ಜಾವ ಕಾರು ಅಡ್ಡಗಟ್ಟಿ 350 ಕೆ.ಜಿ ಬೆಳ್ಳಿ ಗಟ್ಟಿಗಳು ಹಾಗೂ ₹1 ಕೋಟಿ ನಗದು ದರೋಡೆ ಮಾಡಲಾಗಿದೆ.

ತಮಿಳುನಾಡಿನ ಸೇಲಂ ನಗರದ ಬೆಳ್ಳಿ ಆಭರಣ ವರ್ತಕ ಅನಿಲ್ ಮಹದೇವ್ ಎಂಬುವರು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಬೆಳ್ಳಿ ಗಟ್ಟಿ ಖರೀದಿಸಿ ಕಾರಿನಲ್ಲಿ ಸೇಲಂಗೆ ಕೊಂಡೊಯ್ಯುತ್ತಿದ್ದರು. ಅನಿಲ್ ಅವರ ಮಗ ಬಾಲಾಜಿ, ಸ್ನೇಹಿತರಾದ ಗಣೇಶ್, ವಿನೋದ್ ಜತೆಗಿದ್ದರು.

ದಾರಿ ಮಧ್ಯೆ ಮೂರು ಕಾರುಗಳಲ್ಲಿ ಬಂದ ಏಳೆಂಟು ಮಂದಿ ಕಾರು ಅಡ್ಡಗಟ್ಟಿ ಹಲ್ಲೆ ನಡೆಸಿದ್ದಾರೆ. ಬಾಲಾಜಿ, ಗಣೇಶ್, ವಿನೋದ್ ಕಾರಿನಿಂದ ಇಳಿದು ತಪ್ಪಿಸಿಕೊಂಡಿದ್ದಾರೆ.



ಅನಿಲ್ ಮಹದೇವ್ ಅವರ ಕಾರು

ದರೋಡೆಕೋರರು ಅನಿಲ್ ಅವರನ್ನು ಕಾರು ಸಮೇತ ಅಪಹರಿಸಿಕೊಂಡು ಹೋಗಿದ್ದಾರೆ. ಸ್ವಲ್ಪ ದೂರ ಕರೆದೊಯ್ದು ಕೋರ ಪೊಲೀಸ್ ಠಾಣೆ ವ್ಯಾಪ್ತಿಯ ಅಜ್ಜೇನಹಳ್ಳಿ ಬಳಿ ಅನಿಲ್ ಮತ್ತು ಕಾರನ್ನು ಬಿಟ್ಟು, ಹಣ ಮತ್ತು ಬೆಳ್ಳಿ ಗಟ್ಟಿಗಳೊಂದಿಗೆ ಪರಾರಿಯಾಗಿದ್ದಾರೆ. ಈ ಬಗ್ಗೆ ಅನಿಲ್ ಪೊಲೀಸರಿಗೆ ದೂರು ನೀಡಿದ್ದಾರೆ.

ಸೇಲಂನಲ್ಲಿ ಆಭರಣ ಮಾರಾಟ ಮಳಿಗೆ ಹೊಂದಿರುವ ಅನಿಲ್, ಹತ್ತು ವರ್ಷದಿಂದ ಬೆಳ್ಳಿ ಆಭರಣ ವ್ಯಾಪಾರ ಮಾಡುತ್ತಿದ್ದಾರೆ. ಕೊಲ್ಹಾಪುರದಿಂದ ಬೆಳ್ಳಿ ಗಟ್ಟಿ ಖರೀದಿಸಿ, ಆಭರಣ ತಯಾರಿಸಿ ಮಾರಾಟ ಮಾಡುತ್ತಾರೆ.

ದರೋಡೆಕೋರರು ಎಲ್ಲಿಂದ ಹಿಂಬಾಲಿಸಿಕೊಂಡು ಬಂದಿದ್ದರು, ಅವರಿಗೆ ಬೆಳ್ಳಿ ಗಟ್ಟಿ ಸಾಗಿಸುತ್ತಿರುವ ಮಾಹಿತಿ ಸಿಕ್ಕಿದ್ದು ಹೇಗೆ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪೊಲೀಸರ ಹೆಸರಿನಲ್ಲಿ ಬೆದರಿಕೆ ಸ್ವಾಮೀಜಿಗೆ ₹1 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ತಾಲ್ಲೂಕಿನ ಗದ್ದನಕೇರಿ ಬಳಿ ಇರುವ ರಾಮಾರೂಢ ಮಠದ ಪರಮಹಂಸ ಪರಮಾರೂಢ ಸ್ವಾಮೀಜಿಯವರಿಗೆ ಪೊಲೀಸ್ ಅಧಿಕಾರಿ ಹೆಸರಿನಲ್ಲಿ ಇಬ್ಬರು ಬೆದರಿಸಿ, ₹1 ಕೋಟಿ ವಂಚಿಸಿದ್ದಾರೆ.

ಮುಧೋಳದ ಜೆಡಿಎಸ್ ಮುಖಂಡ ಪ್ರಕಾಶ ಮುಧೋಳ ಎಂಬುವರು ಡಿವೈಎಸ್‌ಪಿ ಹೆಸರಿನಲ್ಲಿ ಮತ್ತು ಇನ್ನೊಬ್ಬ ವ್ಯಕ್ತಿ ಎಡಿಜಿಪಿ ಹೆಸರಿನಲ್ಲಿ ಸ್ವಾಮೀಜಿಗೆ ಕರೆ ಮಾಡಿ, ಗೃಹ ಸಚಿವರ ಕಚೇರಿಯಿಂದ ನಮ್ಮ ಕಚೇರಿಗೆ ಸಾಕಷ್ಟು ದೂರುಗಳು ಬಂದಿವೆ. ಅವುಗಳ ವಿಚಾರಣೆ ಮಾಡಬೇಕು. ಅವಾಚ್ಯ ಪದಗಳಿಂದ ನಿಂದಿಸಿದ್ದು ಅಲ್ಲದೇ ಜೈಲಿಗೆ ಕಳುಹಿಸುವುದಾಗಿ ಬೆದರಿಸಿದ್ದಾರೆ.

ಎಲ್ಲ ಪ್ರಕರಣಗಳನ್ನು ಮುಚ್ಚಿ ಹಾಕಲು ಸಾಹೇಬರಿಗೆ ಹಣ ಕೊಡದಿದ್ದರೆ, ಕೊಲೆ ಮಾಡುವುದಾಗಿ ಬೆದರಿಸಿ ₹1 ಕೋಟಿ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹೆದರಿಕೊಂಡ ಸ್ವಾಮೀಜಿ ಬೆಂಗಳೂರಿನ ವಿಧಾನಸೌಧದ ಬಳಿ ₹61 ಲಕ್ಷ ಮತ್ತು ಹುಬ್ಬಳ್ಳಿಯ ಈದ್ಗಾ ಮೈದಾನದ ಬಳಿ ₹31 ಲಕ್ಷ ಹಣವನ್ನು ಶಿವಕುಮಾರ ಮಡ್ಡಿ ಮೂಲಕ ಕೊಟ್ಟಿದ್ದಾರೆ. ಆದರೂ ಮತ್ತೆ ಹಣಕ್ಕೆ ಬೇಡಿಕೆ ಇಟ್ಟಾಗ, ಸ್ವಾಮೀಜಿ ಬಾಗಲಕೋಟೆಯ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆರೋಪಿ ಪ್ರಕಾಶ ಮುಧೋಳಗೆ ಬಂಧಿಸಲಾಗಿದೆ. ₹82 ಲಕ್ಷ ವಶಪಡಿಸಿಕೊಳ್ಳಲಾಗಿದೆ' ಎಂದು ಅವರು ತಿಳಿಸಿದ್ದಾರೆ.

2ನೇ ಮುಂದುವರಿದ ಸುತ್ತಿಗೆ ಪ್ರವೇಶ ಕಡ್ಡಾಯ

ಪಿಯು ಪರೀಕ್ಷೆ–3 ತೇರ್ಗಡೆಗೂ ಸಿಇಟಿ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ–3ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸಿಇಟಿ ಎರಡನೇ ಮುಂದುವರಿದ ಸುತ್ತಿನಲ್ಲಿ ಸೀಟು ಹಂಚಿಕೆಗೆ ಅವಕಾಶ ಕಲ್ಪಿಸಲಾಗಿದ್ದು, ಸೆ. 28ರಿಂದಲೇ ಆದ್ಯತಾ ಕ್ರಮದಲ್ಲಿ ಆಯ್ಕೆ ದಾಖಲಿಸಲು ವೆಬ್‌ಸೈಟ್ ಲಿಂಕ್ ಬಿಡುಗಡೆ ಮಾಡಲಾಗಿದೆ.

ರಾಜ್ಯ ಪಠ್ಯಕ್ರಮದ ಫಲಿತಾಂಶದ ಅಂಕಗಳನ್ನು ನೇರವಾಗಿ ಪಡೆಯಲಾಗಿದೆ. ಸಿಬಿಎಸ್‌ಇ, ಐಸಿಎಸ್‌ಇ ಮೊದಲಾದ ಪಠ್ಯಕ್ರಮದಲ್ಲಿ 12ನೇ ತರಗತಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ತಮ್ಮ ಅಂಕಪಟ್ಟಿ ಮತ್ತು 2024ನೇ ಸಾಲಿನ ಸಿಇಟಿ ಪ್ರವೇಶ ಪತ್ರವನ್ನು ಸೆ. 30ರ ಒಳಗೆ ಪ್ರಾಧಿಕಾರಕ್ಕೆ ಸಲ್ಲಿಸಿ, ಆಯ್ಕೆ ದಾಖಲಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಮೊದಲ ಎರಡೂ ಸುತ್ತುಗಳಲ್ಲಿ ಆಯ್ಕೆ ದಾಖಲು ಮಾಡದವರು ಹಾಗೂ ಹಂಚಿಕೆಯಾದ ಸೀಟಿಗೆ ಯಾವುದೇ 'ಚಾಯ್ಸ್' ನೀಡದವರು ಹಾಗೂ ಇದುವರೆಗೂ ಯಾವುದೇ ಸೀಟು ಹಂಚಿಕೆಯಾಗದವರಿಗೂ ಆಯ್ಕೆ ದಾಖಲಿಸಲು ಸೆ. 30ರಿಂದ ಅ. 4ರವರೆಗೆ ಅವಕಾಶ ನೀಡಲಾಗಿದೆ

ಮುಂದುವರಿದ ಎರಡನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಅ. 7ರಂದು ಮತ್ತು ಅಂತಿಮ ಫಲಿತಾಂಶವನ್ನು ಅ. 8ರಂದು ಪ್ರಕಟಿಸಲಾಗುವುದು. ಶುಲ್ಕ ಪಾವತಿ, ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ಅ. 9ರಿಂದ 14ರವರೆಗೆ ಅವಕಾಶ ನೀಡಲಾಗುವುದು. ಕಾಲೇಜಿಗೆ ವರದಿ ಮಾಡಿಕೊಳ್ಳಲು ಅ.15 ಕೊನೆ ದಿನ.

ಸೀಟು ರದ್ದು: ಐದು ಪಟ್ಟು ದಂಡ

ಮುಂದುವರಿದ ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟವಾದ ಅಭ್ಯರ್ಥಿಗಳಿಗೆ ಯಾವುದೇ ಆಯ್ಕೆ ದಾಖಲಿಸಲು ಅವಕಾಶ ಇರುವುದಿಲ್ಲ. ಸೀಟು ಸಿಕ್ಕ ನಂತರ ಪ್ರವೇಶ ಪಡೆಯಬೇಕು. ಪ್ರವೇಶ ಪಡೆಯದಿದ್ದರೆ ಸರ್ಕಾರ ನಿಗದಿಪಡಿಸಿರುವ ಎಂಜಿನಿಯರಿಂಗ್ ಶುಲ್ಕದ ಐದು ಪಟ್ಟು ದಂಡ ಕಟ್ಟಬೇಕಾಗುತ್ತದೆ ಎಂದು ಕೆಇಎ ಹೇಳಿದೆ.

ಮೊದಲ ಮತ್ತು ಎರಡನೇ ಸುತ್ತಿನಲ್ಲಿ ದೊರೆತಿರುವ ಸೀಟು ರದ್ದುಪಡಿಸಿಕೊಳ್ಳಲು ಅ. 3ರ ಬೆಳಿಗ್ಗೆ 11ರವರೆಗೆ ಅವಕಾಶ ನೀಡಲಾಗಿದೆ. ಅಂತಹವರಿಗೆ ₹5 ಸಾವಿರ ರೂಪಾಯಿ ದಂಡ ವಿಧಿಸಲಾಗುತ್ತದೆ.

ಪಿಜಿ-ಸಿಇಟಿ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024-25ನೇ ಸಾಲಿನ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಪಿಜಿ-ಸಿಇಟಿ) ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ವಿದ್ಯಾರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಎಲ್ಲ ಶೈಕ್ಷಣಿಕ, ಕಂದಾಯ ದಾಖಲೆಗಳನ್ನು ಸಿದ್ಧಪಡಿಸಿಟ್ಟುಕೊಳ್ಳಬೇಕು. ಸೀಟು ಹಂಚಿಕೆಯಾದ ನಂತರ ಪ್ರವೇಶ ಪಡೆಯುವ ಕಾಲೇಜಿಗೆ ಸಲ್ಲಿಸಬೇಕು ಎಂದು ಕೆಇಎ ಹೇಳಿದೆ.

ಡ್ರಗ್ಸ್ ದಂಧೆ ತಡೆಗೆ 'ಎಎನ್‌ಟಿಎಫ್'?

ಒಂದನೇ ಪುಟದಿಂದ...

ಮಾದಕವಸ್ತು ಮಾರಾಟ ಮತ್ತು ಖರೀದಿ ಚಟುವಟಿಕೆ ಡಾರ್ಕ್‌ವೆಬ್ ನೆಟ್ ಮೂಲಕ ನಡೆಯುತ್ತಿದೆ. ಅದರ ಮೇಲೆ ಕಣ್ಣಿಡಲು ಮತ್ತು ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಂದರುಗಳಲ್ಲಿ ಅನುಮಾನಾಸ್ಪದ ವ್ಯಕ್ತಿಗಳು ಮತ್ತು ವಸ್ತುಗಳ ಮೇಲೆ ತೀವ್ರ ನಿಗಾ ವಹಿಸಲು ಈಗಿರುವ ತಪಾಸಣಾ ವ್ಯವಸ್ಥೆಯನ್ನು ಮತ್ತಷ್ಟು ಕಠಿಣಗೊಳಿಸಬೇಕಿದೆ. ಮಾದಕವಸ್ತು ನಿಯಂತ್ರಣ ಕಾರ್ಯಾಚರಣೆಗಳಿಗಾಗಿಯೇ ಎಎನ್‌ಟಿಎಫ್ ಪಡೆಗಳಿಗೆ ವಿಶೇಷವಾಗಿ ತರಬೇತಿ ನೀಡಿದ ಶ್ವಾನಗಳನ್ನು ನಿಯೋಜಿಸಲು ಕೂಡಾ ಚಿಂತನೆ ನಡೆದಿದೆ ಎಂದು ಮೂಲಗಳು ಹೇಳಿವೆ.

ಮಾದಕವಸ್ತು ಪೂರೈಕೆ, ಮಾರಾಟ, ಸೇವನೆ ಪ್ರಕರಣಗಳ ಕುರಿತು ಅವಲೋಕಿಸಲು ಗೃಹ ಸಚಿವ ಜಿ. ಪರಮೇಶ್ವರ ಅಧ್ಯಕ್ಷತೆಯ ಕಾರ್ಯಪಡೆಯ ಸಭೆಯಲ್ಲಿ, ಮಾದಕವಸ್ತುಗಳಿಗೆ ಸಂಬಂಧಿಸಿದ ಕಾನೂನು ಬಲಪಡಿಸುವ ಕುರಿತು ಚರ್ಚೆ ನಡೆದಿದೆ. ಈ ದಂಧೆಯಲ್ಲಿ ಸಿಕ್ಕಿಬೀಳುವ ಪೆಡ್ಲರ್‌ಗಳಿಗೆ ಶಿಕ್ಷೆ ವಿಧಿಸಲು ವಿಫಲವಾದರೆ ಮಾದಕವಸ್ತು ನಿಯಂತ್ರಣ ಸಾಧ್ಯವಿಲ್ಲ. ಹೀಗಾಗಿ, ಸಿಕ್ಕಿಬಿದ್ದವರು ಯಾವುದೇ ಕಾರಣಕ್ಕೂ ಕಾನೂನು ಕುಣಿಕೆಯಿಂದ ತಪ್ಪಿಕೊಳ್ಳಬಾರದು. ಅಂಥವರಿಗೆ ಜಾಮೀನು ಸಿಗದಂತೆ ಕಾನೂನಿಗೆ ಅಗತ್ಯ ಬದಲಾವಣೆ ಮಾಡುವ ಬಗ್ಗೆ ಕಾರ್ಯಪಡೆ ಚಿಂತನೆ ನಡೆಸಿದೆ.

ಹಲವು ವರ್ಷಗಳಿಂದ ಒಂದೇ ಠಾಣೆಯಲ್ಲಿ ಠಿಕಾಣಿ ಹೂಡಿರುವ ಪೊಲೀಸ್ ಸಿಬ್ಬಂದಿಗೆ ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಮಾದಕವಸ್ತು ದಂಧೆಯ ಮಾಹಿತಿ ಗೊತ್ತಿದ್ದರೂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಿಲ್ಲ. ಅಂಥವರನ್ನು ಬೇರೆ ಠಾಣೆಗಳಿಗೆ ವರ್ಗಾವಣೆಗೊಳಿಸಲು ಮತ್ತು ಪೊಲೀಸ್ ಸಿಬ್ಬಂದಿಗೆ ಹೊಣೆಗಾರಿಕೆ ನಿಗದಿಪಡಿಸಲು ಕೂಡ ಕಾರ್ಯಪಡೆ ನಿರ್ಧರಿಸಿದೆ ಎಂದೂ ಗೊತ್ತಾಗಿದೆ.

ಚಿತ್ರಕಲಾವಿದ ವಿಜಯ ಸಿಂಧೂರ ನಿಧನ

ಜಮಖಂಡಿ: ಚಿತ್ರಕಲಾವಿದ ವಿಜಯ ಗಂಗಪ್ಪ ಸಿಂಧೂರ (84) ಶನಿವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.



ವಿಜಯ ಸಿಂಧೂರ

1940ರ ಜೂನ್ 7ರಂದು ಬನಹಟ್ಟಿಯಲ್ಲಿ ಜನಿಸಿದ ವಿಜಯ ಸಿಂಧೂರ ಅವರು ಶಾಲಾ ಶಿಕ್ಷಣವನ್ನು ಜಮಖಂಡಿಯಲ್ಲಿ ಪೂರ್ಣಗೊಳಿಸಿದರು. ಕಾಲೇಜು ಶಿಕ್ಷಣವನ್ನು ಮುಂಬೈನ ಜೆ.ಡಿ. ಆರ್ಟ್ ಮತ್ತು ಜೆ.ಜೆ.ಕಲಾಶಾಲೆಯಲ್ಲಿ ಪಡೆದ ಅವರು ಬಿತ್ತಿಚಿತ್ರ ರಚನೆ ಬಗ್ಗೆ ಅಧ್ಯಯನ ಮಾಡಿದರು. 1965ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿ ಮತ್ತು ಮದರಾಸಿನ ಕೇಂದ್ರ ಲಲಿತಕಲಾ ಅಕಾಡೆಮಿಯ ವಿಭಾಗೀಯ ಕೇಂದ್ರದ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಬೆಂಗಳೂರಿನ ಮ್ಯಾಕ್ಸ್‌ಮುಲ್ಲರ್ ಕಲಾ ಗ್ಯಾಲರಿ, ಮುಂಬೈನ ತಾಜ್ ಕಲಾ ಗ್ಯಾಲರಿ, ಜಹಾಂಗೀರ ಕಲಾ ಗ್ಯಾಲರಿ, ನವದೆಹಲಿ ಧರುಣಿ ಕಲಾ ಗ್ಯಾಲರಿಗಳಲ್ಲಿ ಅಲ್ಲದೇ ದೇಶ-ವಿದೇಶದ ಕಲಾ ಗ್ಯಾಲರಿಗಳಲ್ಲಿ ಅವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ವಿಶ್ವಕನ್ನಡ ಸಮ್ಮೇಳನ, ಸಾರ್ಕ್ ಸಮ್ಮೇಳನ, ರಾಷ್ಟ್ರೀಯ ಕಲಾ ಉತ್ಸವ ಸೇರಿದಂತೆ ಪ್ರಮುಖ ಕಾರ್ಯಕ್ರಮಗಳಲ್ಲೂ ಅವರ ಕಲಾಕೃತಿಗಳು ಪ್ರದರ್ಶನಗೊಂಡಿವೆ.

ವಿಜಯ ಸಿಂಧೂರ ಅವರಿಗೆ ವೆಂಕಟಪ್ಪ ಪ್ರಶಸ್ತಿ, ರಾಷ್ಟ್ರೀಯ ಲಲಿತ ಅಕಾಡೆಮಿ, ರಾಜ್ಯೋತ್ಸವ ಪ್ರಶಸ್ತಿ, ಪಟೇಲ್ ಟ್ರೋಫಿ, ಆರ್ಟ್ ಸೊಸೈಟಿ ಆಫ್ ಇಂಡಿಯಾ, ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಹಾಲಭಾವಿ ಕುಂಚಕಲಾ ತಪಸ್ವಿ ಸೇರಿ ಹಲವು ಪ್ರಶಸ್ತಿಗಳು ಸಂದಿವೆ.


ಸಿರವಾರ ತಾಲ್ಲೂಕಿನ ಮಕ್ಕಳ ಶೈಕ್ಷಣಿಕ ಪ್ರಗತಿ ಬಗ್ಗೆ ಪಾಲಕರಲ್ಲಿ ಆತಂಕ

19 ಸರ್ಕಾರಿ ಶಾಲೆಗಳಲ್ಲಿ ಕಾಯಂ ಶಿಕ್ಷಕರೇ ಇಲ್ಲ

• ಮಂಜುನಾಥ ಎನ್ ಬಳ್ಳಾರಿ

ಕವಿತಾಳ (ರಾಯಚೂರು ಜಿಲ್ಲೆ): ಸಿರವಾರ ತಾಲ್ಲೂಕಿನ ಚಿಕ್ಕಬಾದರದಿನ್ನಿ, ಗಂಗಾನಗರ ಕ್ಯಾಂಪ್ (74) ಮತ್ತು ಗುಡದಿನ್ನಿ ಗ್ರಾಮ ಸೇರಿ 19 ಕಡೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಠ ಒಬ್ಬರೂ ಕಾಯಂ ಶಿಕ್ಷಕರಿಲ್ಲ!. 'ಅತಿಥಿ ಶಿಕ್ಷಕ'ರಿಂದಲೇ ಸರ್ಕಾರಿ ಶಾಲೆ ನಡೆಯುತ್ತಿದ್ದು, ಮಕ್ಕಳ ಶೈಕ್ಷಣಿಕ ಪ್ರಗತಿ ಬಗ್ಗೆ ಪೋಷಕರಲ್ಲಿ ಆತಂಕ ಮನೆಮಾಡಿದೆ.

ಸೇವೆಯಲ್ಲಿದ್ದ ಕಾಯಂ ಶಿಕ್ಷಕರೆಲ್ಲ ಈಚೆಗೆ ವರ್ಗಾವಣೆಯಾಗಿ ಬೇರೆ ಜಿಲ್ಲೆಗಳಿಗೆ ತೆರಳಿದ್ದಾರೆ. ಹೀಗಾಗಿ ಶಾಲೆಯಲ್ಲಿ ಪಾಠ, ಆಟ, ಬಿಸಿಯೂಟ ನಿರ್ವಹಣೆ ಸೇರಿದಂತೆ ಎಲ್ಲಾ ಕಾರ್ಯಗಳನ್ನೂ ಅತಿಥಿ ಶಿಕ್ಷಕರೇ ನಿರ್ವಹಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ.



ಕವಿತಾಳ ಸಮೀಪದ ಪಾತಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕಿಯೊಬ್ಬರು ಮಕ್ಕಳಿಗೆ ಪಾಠ ಮಾಡಿದರು

'ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಬಡ ಮತ್ತು ಮಧ್ಯಮ ವರ್ಗದ ಮಕ್ಕಳು ಕಲಿಯುತ್ತಿದ್ದಾರೆ. ಮಕ್ಕಳ ಹಾಜರಾತಿ ಹೆಚ್ಚಿಸಲು ಸರ್ಕಾರ ಬಿಸಿಯೂಟ, ಪೌಷ್ಟಿಕತೆ ಹೆಚ್ಚಿಸಲು ಮೊಟ್ಟೆ, ಬಾಳೆಹಣ್ಣು ಹಾಗೂ ಶೇಂಗಾ ಚಿಕ್ಕಿ ನೀಡುತ್ತಿದೆ. ಆದರೆ, ಕಾಯಂ ಶಿಕ್ಷಕರೇ ಇಲ್ಲದಿದ್ದರೆ ಶಾಲೆಗಳಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿ ಹೇಗೆ ಸಾಧ್ಯ' ಎಂದು ಪಾಲಕರಾದ ಶರಣಪ್ಪ, ಮಲ್ಲಯ್ಯ, ಉಮೇಶ, ನಿಂಗಪ್ಪ ಮತ್ತು ದೇವಪ್ಪ ಪ್ರಶ್ನಿಸಿದರು.

ಪಾತಾಪುರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 101 ಮಕ್ಕಳು ಓದುತ್ತಿದ್ದಾರೆ. ಮೂವರು



ಕಾಯಂ ಶಿಕ್ಷಕರಿಲ್ಲದ ಕಾರಣ ಮಕ್ಕಳ ಕಲಿಕೆಗೆ ತೊಂದರೆಯಾಗುತ್ತಿದೆ. ಒಬ್ಬರನ್ನಾದರೂ ನೇಮಕ ಮಾಡಲು ಅಧಿಕಾರಿಗಳು ಕ್ರಮ ವಹಿಸಬೇಕು

ಕೆ.ಮೌನೇಶ ಪಾತಾಪುರ,
ಎಸ್‌ಡಿಎಂಸಿ ಅಧ್ಯಕ್ಷ

ಕಾಯಂ ಶಿಕ್ಷಕರು ವರ್ಗಾವಣೆಯಾಗಿದ್ದಾರೆ. ಸದ್ಯ ಮೂವರು ಅತಿಥಿ ಶಿಕ್ಷಕರು ಪಾಠ ಮಾಡುತ್ತಿದ್ದಾರೆ. ಗುಡದಿನ್ನಿ ಗ್ರಾಮದ ಶಾಲೆಯಲ್ಲಿ 30 ಮಕ್ಕಳಿದ್ದಾರೆ. ಇಲ್ಲಿದ್ದ ಒಬ್ಬ ಶಿಕ್ಷಕರೂ ಈಚೆಗೆ ವರ್ಗಾವಣೆಯಾಗಿದ್ದು, ಅವರ ಬದಲಿಗೆ ಅತಿಥಿ ಶಿಕ್ಷಕರನ್ನು



ಕಾಯಂ ಶಿಕ್ಷಕರಿಲ್ಲದ ಶಾಲೆಗಳಿಗೆ ಸಮೀಪದ ಶಾಲೆಯ ಒಬ್ಬ ಶಿಕ್ಷಕರನ್ನು ಎರವಲು ಸೇವೆಯ ಮೇಲೆ ನಿಯೋಜನೆ ಮಾಡಲಾಗುವುದು

ಚಂದ್ರಶೇಖರ ದೊಡ್ಮನಿ,
ಕ್ಷೇತ್ರ ಶಿಕ್ಷಣಾಧಿಕಾರಿ, ಮಾನ್ವಿ

ನೇಮಿಸಲಾಗಿದೆ.

ತಾಲ್ಲೂಕಿನ ಅತ್ತನೂರು ಗ್ರಾಮದ ಜನತಾ ಕಾಲೊನಿ, ನಡುಗಡ್ಡೆ ಕ್ಯಾಂಪ್, ಬಾಗಲವಾಡದ ವಾಲ್ಮೀಕಿ ನಗರದ ಶಾಲೆ, ಶಿವನಗರ ಕ್ಯಾಂಪ್, ಕುರಕುಂದ ಕ್ರಾಸ್, ಬೊಮ್ಮನಸನದೊಡ್ಡಿ, ಬುದ್ದಿನ್ನಿ, ವಡವಟ್ಟಿ ಕ್ರಾಸ್, ಬಲ್ಲಟಗಿ ತಾಂಡಾ, ಡಾಕ್ಟರ್ ಕ್ಯಾಂಪ್, ಕೆ.ಗುಡದಿನ್ನಿ ಕ್ಯಾಂಪ್, ಚಾಗಬಾವಿ ಕ್ಯಾಂಪ್, ಗಡ್ಡೆರಾಯನ ಕ್ಯಾಂಪ್, ಕಡದಿನ್ನಿ ಕ್ಯಾಂಪ್, ಬುಳ್ಳಾಪುರ, ಬಸವೇಶ್ವರ ಕ್ಯಾಂಪ್ ಶಾಲೆಗಳು 'ಶೂನ್ಯ ಕಾಯಂ ಶಿಕ್ಷಕರ ಶಾಲೆ' ಪಟ್ಟಿಗೆ ಸೇರಿವೆ.

'ಈಚೆಗೆ 8ನೇ ತರಗತಿಗೆ ಪ್ರವೇಶ ಪಡೆಯಲು ಬಂದ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ತಮ್ಮ ಹೆಸರು, ವಿಳಾಸ ಮತ್ತು ಕೆಲ ಪದ ಬರೆಯಲು ಹೇಳಿದಾಗ ಕೆಲ ಮಕ್ಕಳಿಗೆ ಬರೆಯಲು ಸಾಧ್ಯವಾಗಿಲ್ಲ. ಪ್ರೌಢಶಾಲೆಗಳಲ್ಲಿ ಅಕ್ಷರಾಭ್ಯಾಸದಿಂದ ಕಲಿಕೆ ಆರಂಭಿಸಬೇಕಾದ ಅನಿವಾರ್ಯತೆ ಇದೆ. ಶಿಕ್ಷಕರ ಕೊರತೆಯಿಂದ ಕಲಿಕಾ ಗುಣಮಟ್ಟ ಮತ್ತಷ್ಟು ಕುಸಿದರೆ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಿಸಲು ಹರಸಾಹಸ ಪಡಬೇಕು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಪ್ರೌಢಶಾಲೆಯ ಶಿಕ್ಷಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ಭಾಸ್ಮತಿಯೇತರ ಅಕ್ಕಿ ರಫ್ತಿಗೆ ಅಸ್ತು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಭಾಸ್ಮತಿಯೇತರ ಅಕ್ಕಿ ಮೇಲೆ ವಿಧಿಸಿದ್ದ ರಫ್ತು ನಿಷೇಧವನ್ನು ಶನಿವಾರ ವಾಪಸ್ ಪಡೆದಿದೆ. ಕನಿಷ್ಠ ರಫ್ತು ದರವನ್ನು (ಎಂಇಪಿ) 490 ಡಾಲರ್‌ಗೆ (₹41,022) ನಿಗದಿಪಡಿಸಿದೆ.

'ಮುಂದಿನ ಸೂಚನೆವರೆಗೂ ಆದೇಶ ಜಾರಿಯಲ್ಲಿ ಇರಲಿದೆ' ಎಂದು ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ ತಿಳಿಸಿದೆ. ದೇಶೀಯ ಪೂರೈಕೆ ಹೆಚ್ಚಳಕ್ಕೆ ಒತ್ತು ನೀಡುವ ದೃಷ್ಟಿಯಿಂದ ಕಳೆದ ವರ್ಷದ ಜುಲೈ 20ರಿಂದ ಭಾಸ್ಮತಿಯೇತರ ಅಕ್ಕಿ ರಫ್ತಿಗೆ ನಿಷೇಧ ಹೇರಲಾಗಿತ್ತು. ಕುಚ್ಚಲಕ್ಕಿ ಮೇಲೆ ವಿಧಿಸಿದ್ದ ಶೇ 20ರಷ್ಟು ರಫ್ತು ಸುಂಕವನ್ನು ಶೇ 10ಕ್ಕೆ ಇಳಿಸಿದೆ.

ಕೊಳೆರೋಗದಿಂದ ಇಳುವರಿ ಕುಸಿತ • ಬೆಳೆಗಾರರು ಕಂಗಾಲು

ಅವಧಿಪೂರ್ವ ಶುಂಠಿ ಕೊಯ್ಲು

• ರಾಜೇಂದ್ರ ಹೆಗಡೆ

ಶಿರಸಿ: ಅತಿವೃಷ್ಟಿಯಿಂದ ಶುಂಠಿ ಬೆಳೆಗೆ ಕಾಡಿದ ಕೊಳೆರೋಗಕ್ಕೆ ಬೆಳೆಗಾರರು ಕಂಗಾಲಾಗಿದ್ದಾರೆ. ಇಳುವರಿ ನಷ್ಟದ ಪ್ರಮಾಣ ತಗ್ಗಿಸಲು ಅವಧಿಪೂರ್ವ ಕೊಯ್ಲು ಆರಂಭಿಸಿದ್ದಾರೆ. ಇದರಿಂದ ತೂಕ ಮತ್ತು ದರ ಎರಡರಲ್ಲೂ ತೀವ್ರ ನಷ್ಟ ಅನುಭವಿಸುವಂತಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಬನವಾಸಿ, ಮುಂಡಗೋಡ ಭಾಗದಲ್ಲಿ ಒಂದು ಸಾವಿರ ಎಕರೆಗೂ ಹೆಚ್ಚು ಪ್ರದೇಶದಲ್ಲಿ ಶುಂಠಿ ಬೆಳೆಯಲಾಗುತ್ತಿದೆ. ವಾರ್ಷಿಕ 30 ಸಾವಿರ ಟನ್‌ಗೂ ಹೆಚ್ಚು ಉತ್ಪಾದನೆಯಿದೆ.

ಪ್ರಸಕ್ತ ಸಾಲಿನಡಿ ಕೊಳೆರೋಗವು ಶುಂಠಿ ಬೆಳೆಗಾರರನ್ನು ಕಂಗೆಡಿಸಿದೆ. ದಿನದಿಂದ ದಿನಕ್ಕೆ ಶುಂಠಿ ಗಡ್ಡೆ ಕೊಳೆಯುವ ಪ್ರಮಾಣ ಹೆಚ್ಚುತ್ತಿದ್ದು, ಇರುವ ಬೆಳೆಯನ್ನು ಕೊಯ್ಲು ಮಾಡಿ ನಷ್ಟದ ಪ್ರಮಾಣ ತಪ್ಪಿಸಿಕೊಳ್ಳಲು ಬೆಳೆಗಾರರು ಮುಂದಾಗಿದ್ದಾರೆ.



ಶಿರಸಿಯ ಬನವಾಸಿ ಭಾಗದ ಬೆಳೆಗಾರರೊಬ್ಬರು ಮಾರುಕಟ್ಟೆಗೆ ಒಯ್ಯಲು ಸಿದ್ಧಪಡಿಸಿಕೊಂಡಿರುವ ಶುಂಠಿ

ಕೊಳೆರೋಗ ಉಲ್ಬಣಿಸಿದ್ದರಿಂದ ಗೆಡ್ಡೆಗಳು ಕೊಳೆಯುತ್ತಿವೆ. ಔಷಧೋಪಚಾರ ಮಾಡಿದರೆ ಬೆಳೆ ಉಳಿಸಿಕೊಂಡು ನಷ್ಟವನ್ನು ಕಡಿಮೆ ಮಾಡಿಕೊಳ್ಳಬಹುದು

ಸತೀಶ ಹೆಗಡೆ, ತೋಟಗಾರಿಕೆ ಇಲಾಖೆ ಅಧಿಕಾರಿ

ಹಂಗಾಮಿನಲ್ಲಿ ಶುಂಠಿ ಕೊಯ್ಲು ಮಾಡಿದ್ದರೆ ಎಕರೆಗೆ 25 ಟನ್ ಇಳುವರಿ ಬರುತಿತ್ತು. ಈಗ ಶೇ 70ರಷ್ಟು ತೂಕ ಕಡಿಮೆಯಾಗುತ್ತದೆ. ಎಕರೆಗೆ 6 ರಿಂದ 8 ಟನ್ ಸಿಗಬಹುದು


ಶೇಖರಪ್ಪ, ಶುಂಠಿ ಬೆಳೆಗಾರ, ದಾಸನಕೊಪ್ಪ

ಹೀಗಾಗಿ, ನಾಟಿ ಮಾಡಿ ಐದನೇ ತಿಂಗಳಲ್ಲಿ ಬೆಳೆಯ ಕೊಯ್ಲಿಗೆ ಮುಂದಾಗಿದ್ದಾರೆ.

'ತಾಜಾ ಮಸಾಲೆ ಉದ್ದೇಶಕ್ಕೆ ಶುಂಠಿಯನ್ನು ಆರನೇ ತಿಂಗಳಿನಿಂದ ಕೊಯ್ಲು ಮಾಡಲಾಗುತ್ತದೆ. ಸಂಸ್ಕರಣೆಗೆ ಬಳಸಲು ಎಂಟು ತಿಂಗಳ ನಂತರ ಕೊಯ್ಲು ಮಾಡಲಾಗುತ್ತದೆ. ಆದರೆ, ಈ ಬಾರಿ ಕೊಳೆ ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಹಾಗಾಗಿ, ಎಳೆಯ ಗೆಡ್ಡೆಯನ್ನೇ ತೆಗೆದು ಮಾರುಕಟ್ಟೆಗೆ ಸಾಗಿಸುತ್ತಿದ್ದೇವೆ' ಎಂದು ದಾಸನಕೊಪ್ಪದ ಬೆಳೆಗಾರ ಶೇಖರಪ್ಪ ತಿಳಿಸಿದರು.

'ಜನವರಿ-ಮಾರ್ಚ್ ವೇಳೆ ಒಂದು ಕ್ವಿಂಟಲ್ ಶುಂಠಿಗೆ ₹5 ಸಾವಿರದಿಂದ ₹7 ಸಾವಿರಕ್ಕೂ ಹೆಚ್ಚು ದರ ಇತ್ತು. ಈಗ ಗರಿಷ್ಠ ₹2 ಸಾವಿರ ಮಾತ್ರ ಲಭಿಸುತ್ತಿದೆ. ಹಾಕಿದ ಬಂಡವಾಳ ಕೂಡ ಕೈಸೇರುವ ವಿಶ್ವಾಸವಿಲ್ಲ. ಮಾರುಕಟ್ಟೆಯಲ್ಲೂ ಸರಿಯಾಗಿ ಬೇಡಿಕೆ ಇಲ್ಲ' ಎಂದು ಹೇಳಿದರು.

ಎಫ್‌ಕೆಸಿಸಿಐ ಅಧ್ಯಕ್ಷರಾಗಿ ಬಾಲಕೃಷ್ಣ ಆಯ್ಕೆ



ಎಂ.ಜಿ. ಬಾಲಕೃಷ್ಣ

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) 2024-25ನೇ ಸಾಲಿನ ನೂತನ ಅಧ್ಯಕ್ಷರಾಗಿ ಎಂ.ಜಿ. ಬಾಲಕೃಷ್ಣ ಅಧಿಕಾರ ವಹಿಸಿಕೊಂಡಿದ್ದಾರೆ.

ಹಿರಿಯ ಉಪಾಧ್ಯಕ್ಷರಾಗಿ ಉಮಾ ರೆಡ್ಡಿ ಹಾಗೂ ಉಪಾಧ್ಯಕ್ಷರಾಗಿ ಟಿ. ಸಾಯಿರಾಂ ಪ್ರಸಾದ್ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಏರ್ ಇಂಡಿಯಾ ವಿಮಾನದಲ್ಲಿ ಅವಾಂತರ

ಆಮ್ಲೆಟ್‌ನಲ್ಲಿ ಜಿರಳೆ ಪತ್ತೆ

ನವದೆಹಲಿ (ಪಿಟಿಐ): ದೆಹಲಿಯಿಂದ ನ್ಯೂಯಾರ್ಕ್‌ಗೆ ತೆರಳುತ್ತಿದ್ದ ಏರ್ ಇಂಡಿಯಾಗೆ ಸೇರಿದ ವಿಮಾನದಲ್ಲಿ ಮಹಿಳೆಯೊಬ್ಬರಿಗೆ ನೀಡಿದ ಆಮ್ಲೆಟ್‌ನಲ್ಲಿ ಜಿರಳೆ ಪತ್ತೆಯಾಗಿದೆ. ಈ ಕುರಿತು ಅವರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಸೆಪ್ಟೆಂಬರ್ 17ರಂದು ನ್ಯೂಯಾರ್ಕ್‌ಗೆ ತೆರಳುತ್ತಿದ್ದ ವಿಮಾನದಲ್ಲಿ (ಎಐ 101) ಈ ಘಟನೆ ನಡೆದಿದೆ.

'ವಿಮಾನದೊಳಗೆ ಸಿಬ್ಬಂದಿ ಆಮ್ಲೆಟ್ ನೀಡಿದರು. ನನ್ನ ಎರಡು ವರ್ಷದ ಮಗು ಅರ್ಧದಷ್ಟು ಆಮ್ಲೆಟ್ ಅನ್ನು ತಿಂದಿತ್ತು. ಈ ವೇಳೆ ಜಿರಳೆ ಪತ್ತೆಯಾಗಿದೆ' ಎಂದು ಮಹಿಳೆ ದೂರಿದ್ದು, 'ಎಕ್ಸ್'ನಲ್ಲಿ ಈ ಕುರಿತು ಚಿಕ್ಕ ವಿಡಿಯೊ ಮತ್ತು ಫೋಟೊ ಹಂಚಿಕೊಂಡಿದ್ದಾರೆ.



ಇದನ್ನು ಏರ್ ಇಂಡಿಯಾ ಮತ್ತು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ (ಡಿಜಿಸಿಎ) ಅಧಿಕೃತ ಖಾತೆಗೂ ಟ್ಯಾಗ್ ಮಾಡಿದ್ದಾರೆ.

'ಈ ಪ್ರಕರಣದ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ಪ್ರಯಾಣಿಕರಿಗೆ ಭವಿಷ್ಯದಲ್ಲಿ ಇಂತಹ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗುವುದು' ಎಂದು ಏರ್ ಇಂಡಿಯಾದ ವಕ್ತಾರರು ತಿಳಿಸಿದ್ದಾರೆ.

'ಜಾಗತಿಕ ಮಟ್ಟದ ವಿಮಾನಯಾನ ಕಂಪನಿಗಳಿಗೆ ಆಹಾರ ಪೂರೈಸುವವರೇ ಏರ್ ಇಂಡಿಯಾಕ್ಕೂ ಪೂರೈಸುತ್ತಾರೆ. ಪೂರೈಕೆದಾರರೊಟ್ಟಿಗೆ ಕಟ್ಟುನಿಟ್ಟಿನ ಪ್ರಮಾಣಿತ ಕಾರ್ಯಾಚರಣೆ ವಿಧಾನ ಅನುಸರಿಸಲಾಗುತ್ತಿದೆ. ಪ್ರಯಾಣಿಕರಿಗೆ ಆಹಾರ ನೀಡುವುದಕ್ಕೂ ಮೊದಲು ವಿವಿಧ ಹಂತದಲ್ಲಿ ಪರಿಶೀಲನೆ ನಡೆಸಲಾಗುತ್ತದೆ' ಎಂದು ತಿಳಿಸಿದ್ದಾರೆ.

ಕೊತ್ತಂಬರಿ ಬೆಳೆದು ₹2 ಲಕ್ಷ ಗಳಿಸಿದ ರೈತ

• ಚಂದ್ರಶೇಖರ ಎಸ್. ಚಿನಕೇಕರ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಕೇರೂರ ಗ್ರಾಮದ ರೈತ ಅಪ್ಪಾಸಾಬ ರೇಂದಾಳೆ ಅವರು, ಒಂದು ಎಕರೆಯಲ್ಲಿ ಕೊತ್ತಂಬರಿ ಸೊಪ್ಪು ಬೆಳೆದು ₹2.05 ಲಕ್ಷ ಲಾಭ ಗಳಿಸಿದ್ದಾರೆ.

ಅಪ್ಪಾಸಾಬ ಅವರಿಗೆ 8 ಎಕರೆ ಜಮೀನಿದೆ. 7 ಎಕರೆಯಲ್ಲಿ ಕಬ್ಬು ಬೆಳೆದಿದ್ದು, 1 ಎಕರೆಯಲ್ಲಿ ಕೊತ್ತಂಬರಿ ಬೀಜ ಬಿತ್ತಿದ್ದರು. ಹದ ಮಳೆ ಸುರಿದಿದ್ದರಿಂದ ಉತ್ತಮ ಇಳುವರಿ ಬಂದಿದೆ. ಕೊತ್ತಂಬರಿ ಸೊಪ್ಪಿನ ದರ ಏರಿಕೆಯಿಂದಾಗಿ ಕೈತುಂಬ ಲಾಭವೂ ಸಿಕ್ಕಿದೆ.

ಕೆ.ಜಿಗೆ ₹370ರ ದರದಲ್ಲಿ ಅಶೋಕ ತಳಿಯ 60 ಕೆ.ಜಿ ಕೊತ್ತಂಬರಿ ಬೀಜಗಳನ್ನು ಖರೀದಿಸಿ ಬಿತ್ತಿದ್ದರು. ಒಮ್ಮೆಯಷ್ಟೇ ರಸಗೊಬ್ಬರ ಹಾಕಿ ಎರಡು ಬಾರಿ ರಾಸಾಯನಿಕ ಸಿಂಪಡಿಸಿದ್ದರು. ಆಗಾಗ್ಗೆ ನೀರುಣಿಸಿ, ಕಳೆ ತೆಗೆದು ಬೆಳೆ ಜತನ ಮಾಡಿದ್ದರು. ಮಳೆ ಮತ್ತು ಹವಾಗುಣಕ್ಕೆ ಕೊತ್ತಂಬರಿ ಸೊಪ್ಪು ಹುಲುಸಾಗಿ ಬೆಳೆದಿದೆ.

ಹೊಲದಲ್ಲಿ ಕೊತ್ತಂಬರಿ ಸೊಪ್ಪು ನೋಡಿದ ವರ್ತಕರೊಬ್ಬರು ₹2.50 ಲಕ್ಷಕ್ಕೆ ಎಲ್ಲವನ್ನೂ ಗುತ್ತಿಗೆ ಪಡೆದಿದ್ದಾರೆ. ಇದರಿಂದ ಅಪ್ಪಾಸಾಬ ಅವರಿಗೆ ಕೂಲಿಯಾಳು, ಸಾಗಣೆ ಮತ್ತು ಮಾರುಕಟ್ಟೆ ವೆಚ್ಚ ಉಳಿದಿದೆ. ಒಂದು ತಿಂಗಳಿನಲ್ಲಿ ಕಟಾವಿಗೆ ಬರುವ ಈ ಬೆಳೆಗೆ ಅವರು ₹45 ಸಾವಿರ ವೆಚ್ಚ ಮಾಡಿದ್ದಾರೆ.



ಚಿಕ್ಕೋಡಿ ತಾಲ್ಲೂಕಿನ ಕೇರೂರ ಗ್ರಾಮದ ರೈತ ಅಪ್ಪಾಸಾಬ ರೇಂದಾಳೆ ಅವರ ಹೊಲದಲ್ಲಿ ಬೆಳೆದಿರುವ ಕೊತ್ತಂಬರಿ ಸೊಪ್ಪು

'ಕೊತ್ತಂಬರಿ ಸೊಪ್ಪು ಖರೀದಿಸಿ ಎಂಟು ಕೂಲಿಯಾಳುಗಳ ನೆರವಿನಿಂದ ಕಟಾವು ಮಾಡಿ ಮುಂಬೈಗೆ ಸಾಗಿಸಿದ್ದೇನೆ. ಬೆಳಗಾವಿ, ಚಿಕ್ಕೋಡಿ ಮಾರುಕಟ್ಟೆಯಲ್ಲಿ ಒಂದು ಹಿಡಿ ಕೊತ್ತಂಬರಿ ಸೊಪ್ಪಿನ ದರ ₹20 ಇದ್ದರೆ, ಮುಂಬೈನಲ್ಲಿ ₹30ಕ್ಕೂ ಹೆಚ್ಚಿದೆ. ಉತ್ತಮ ಮಾರಾಟದಿಂದ ಹೆಚ್ಚಿನ ಲಾಭ ಬರುವ ನಿರೀಕ್ಷೆಯಿದೆ' ಎಂದು ವ್ಯಾಪಾರಿ ರಮೇಶ ಮಲ್ಲಾಪುರ ತಿಳಿಸಿದರು.



ಹೊಲದಲ್ಲಿ ನಿರಂತರವಾಗಿ ಒಂದೇ ಬೆಳೆ ಬೆಳೆಯುವುದರಿಂದ ಇಳುವರಿ ಕುಸಿಯುತ್ತದೆ. 2 ವರ್ಷ ಕಬ್ಬು ಬೆಳೆದು, ಕೊತ್ತಂಬರಿ ಬಿತ್ತಿದ್ದರಿಂದ ಹುಲುಸಾಗಿ ಬೆಳೆದಿದೆ

ಅಪ್ಪಾಸಾಬ ರೇಂದಾಳೆ, ರೈತ, ಕೇರೂರ, ಚಿಕ್ಕೋಡಿ ತಾಲ್ಲೂಕು

ಬ್ಯಾಂಕ್‌ಗಳ ಸಾಲ–ಠೇವಣಿ ಅನುಪಾತ ಏರಿಕೆ

ಠೇವಣಿ ಸಂಗ್ರಹಕ್ಕೆ ಹರಸಾಹಸ

ನವದೆಹಲಿ (ಪಿಟಿಐ): ಕಳೆದ ಎರಡು ಆರ್ಥಿಕ ವರ್ಷದಿಂದ ಬ್ಯಾಂಕ್‌ಗಳು ಸಾಲ ನೀಡಿಕೆ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ದೊಡ್ಡ ಪ್ರಮಾಣದಲ್ಲಿ ಠೇವಣಿ ಸಂಗ್ರಹಿಸಲು ಹರಸಾಹಸಪಡುತ್ತಿವೆ ಎಂದು ದೇಶೀಯ ಕ್ರೆಡಿಟ್ ರೇಟಿಂಗ್ಸ್ ಸಂಸ್ಥೆ ಇನ್ಫೋಮೆರಿಕ್ಸ್ ರೇಟಿಂಗ್ಸ್ ತಿಳಿಸಿದೆ.



ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳ ಸಾಲ ಮತ್ತು ಠೇವಣಿ ಅನುಪಾತ (ಸಿ:ಡಿ) ಹೆಚ್ಚುತ್ತಿದೆ. 2023–24ರಲ್ಲಿ ಶೇ 75.8ರಿಂದ ಶೇ 80.3ಕ್ಕೆ ಹೆಚ್ಚಳವಾಗಿದೆ. ಪ್ರಸಕ್ತ ವರ್ಷದ ಮಾರ್ಚ್‌ನಲ್ಲಿ ಶೇ 92.95ರಷ್ಟಿದ್ದ ಅನುಪಾತವು ಶೇ 95.94ಕ್ಕೆ ಏರಿಕೆಯಾಗಿದೆ. ಇದನ್ನು ಏಪ್ರಿಲ್‌ನಲ್ಲಿ ಪ್ರಕಟಿಸಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಸಿಕ ವರದಿಯಲ್ಲಿ ವಿವರಿಸಲಾಗಿದೆ ಎಂದು ತಿಳಿಸಿದೆ.

ತ್ರೈಮಾಸಿಕವಾರು ಲೆಕ್ಕಾಚಾರದಲ್ಲಿ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣದಲ್ಲಿ ಏರಿಕೆಯಾಗಿದ್ದರೆ, ಠೇವಣಿ ಸಂಗ್ರಹದಲ್ಲಿ ಇಳಿಕೆಯಾಗಿದೆ ಎಂದು ಹೇಳಿದೆ.

ಆದರೆ, ಈಕ್ವಿಟಿ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ವೈಯಕ್ತಿಕ ಹೂಡಿಕೆದಾರರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಅದರಲ್ಲೂ 30 ವರ್ಷದೊಳಗಿನ ಹೂಡಿಕೆದಾರರ ಸಂಖ್ಯೆಯಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

2018–19ರಲ್ಲಿ ಷೇರುಪೇಟೆಯಲ್ಲಿ ನೋಂದಾಯಿತ ಹೂಡಿಕೆದಾರರ ಸಂಖ್ಯೆ ಶೇ 22.6ರಷ್ಟಿತ್ತು. 2024–25ನೇ ಸಾಲಿಗೆ ಶೇ 39.9ರಷ್ಟಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಇದೇ ಅವಧಿಯಲ್ಲಿ 30ರಿಂದ 39 ವರ್ಷದೊಳಗಿನ ಹೂಡಿಕೆದಾರರ ಸಂಖ್ಯೆ ಸ್ಥಿರವಾಗಿದೆ. 40 ವರ್ಷ ಮೇಲ್ಪಟ್ಟ ಹೂಡಿಕೆದಾರರ ಸಂಖ್ಯೆಯಲ್ಲಿ ಇಳಿಕೆಯಾಗಿದೆ ಎಂದು ಹೇಳಿದೆ.

'ಠೇವಣಿ ಮೊತ್ತ ಹೆಚ್ಚಳಕ್ಕೆ ಬ್ಯಾಂಕ್‌ಗಳು ಮತ್ತು ಕೇಂದ್ರ ಸರ್ಕಾರ ಒಟ್ಟಾಗಿ ಕ್ರಮವಹಿಸಬೇಕಿದೆ. ಸಾರ್ವಜನಿಕರಿಂದ ಸಣ್ಣ ಮೊತ್ತದ ಠೇವಣಿ ಸಂಗ್ರಹಕ್ಕೆ ಒತ್ತು ನೀಡಬೇಕು. ಬೃಹತ್ ಮೊತ್ತದ ಕಾರ್ಪೊರೇಟ್ ಠೇವಣಿಗಳನ್ನು ಆಕರ್ಷಿಸುವ ಬದಲು ಈ ಮಾರ್ಗ ಅನುಸರಿಸುವುದು ಒಳಿತು. ಇದು ದೇಶದ ಆರ್ಥಿಕ ಬೆಳವಣಿಗೆಗೂ ಸಹಕಾರಿಯಾಗಲಿದೆ' ಎಂದು ಟ್ರೂ ನಾರ್ಥ್ ಫೈನಾನ್ಶಿಯಲ್ ಸರ್ವಿಸಸ್‌ನ ಸಿಇಒ ರೋಚಕ್ ಬಕ್ಷಿ ಹೇಳಿದ್ದಾರೆ.

ಪಾಕ್‌ಗೆ ತಿರುಗೇಟು

ವಿಶ್ವಸಂಸ್ಥೆ (ಪಿಟಿಐ): 'ಗಡಿಯಾಚೆಗಿನ ಭಯೋತ್ಪಾದನೆಗೆ ತಕ್ಕ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ' ಎಂದು ಭಾರತ, ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 79ನೇ ಅಧಿವೇಶನದಲ್ಲಿ ಮಾತನಾಡುತ್ತಾ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಅವರು ಜಮ್ಮು- ಕಾಶ್ಮೀರದ ವಿಷಯ ಪ್ರಸ್ತಾಪಿಸಿದ್ದಕ್ಕೆ ಭಾರತವು ತಕ್ಕ ಪ್ರತ್ಯುತ್ತರ ನೀಡಿದೆ.


'ಭಯೋತ್ಪಾದನೆ, ಮಾದಕ ವಸ್ತುಗಳ ಕಳ್ಳಸಾಗಣೆ, ಅಂತರ ರಾಷ್ಟ್ರೀಯಮಟ್ಟದ ಅಪರಾಧಗಳಿಗೆ ಕುಖ್ಯಾತಿ ಹೊಂದಿರುವ ಹಾಗೂ ಸೇನೆಯ ಆಡಳಿತದಲ್ಲಿರುವ ದೇಶವು, ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವದ ಮೇಲೆ ದಾಳಿ ನಡೆಸುವ ಧೈರ್ಯವನ್ನು ಪ್ರದರ್ಶಿಸುವ ಮೂಲಕ ವಿಶ್ವಸಂಸ್ಥೆಯ ಶುಕ್ರವಾರದ ಬೆಳಗಿನ ಅಧಿವೇಶನವನ್ನು ನಗೆಪಾಟಲಿಗೀಡು ಮಾಡಿತು' ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ನಿಯೋಗದ ಕಾರ್ಯದರ್ಶಿ ಭಾವಿಕಾ ಮಂಗಳಾನಂದನ್ ಹೇಳಿದರು.

ಸುದ್ದಿ 2 ನಿಮಿಷ

'ಜಿಎಸ್‌ಟಿ ವ್ಯಾಪ್ತಿಗೆ ಪೆಟ್ರೋಲ್, ಡೀಸೆಲ್: ರಾಜ್ಯಗಳ ಒಪ್ಪಿಗೆ ಅಗತ್ಯ'

ಪುಣೆ (ಪಿಟಿಐ): 'ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಸರಕು ಮತ್ತು ಸೇವಾ ತೆರಿಗೆ ವ್ಯಾಪ್ತಿಯಡಿ ತರಲು ನಾನು ಉತ್ಸುಕನಾಗಿದ್ದೇನೆ. ಆದರೆ, ರಾಜ್ಯಗಳು ಇದಕ್ಕೆ ಸರ್ವಾನುಮತದಿಂದ ಬೆಂಬಲ ನೀಡಬೇಕಿದೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಪುಣೆ ಇಂಟರ್‌ನ್ಯಾಷನಲ್ ಸೆಂಟರ್‌ನಿಂದ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಬಗ್ಗೆ ನಾನು ಹಲವು ದಿನಗಳಿಂದ ಸಲಹೆ ನೀಡುತ್ತಿದ್ದೇನೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕೂಡ ಹಲವು ಸಂದರ್ಭಗಳಲ್ಲಿ ಈ ಮಾತನ್ನು ಪುನರುಚ್ಚರಿಸಿದ್ದಾರೆ' ಎಂದರು.



ಕೇರಳದ ಹೈಕೋರ್ಟ್ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ಅಡಿ ತರುವ ಬಗ್ಗೆ ಸರಕು ಮತ್ತು ಸೇವಾ ತೆರಿಗೆ ಮಂಡಳಿಯು ತನ್ನ ಕಾರ್ಯಸೂಚಿಯಲ್ಲಿ ಪ್ರಸ್ತಾಪಿಸಿ ಚರ್ಚಿಸುವಂತೆ ಸಲಹೆ ನೀಡಿದೆ.

'ಅಲಹಾಬಾದ್‌ನಲ್ಲಿ ನಡೆದ ಮಂಡಳಿಯ ಸಭೆಯಲ್ಲಿ ಈ ವಿಷಯವು ಚರ್ಚೆಗೆ ಬಂದಿತ್ತು. ಆದರೆ, ಮಂಡಳಿಯು ರಾಜ್ಯಗಳ ಒಮ್ಮತ ನಿರ್ಧಾರದ ಮೇಲೆ ಕೆಲಸ ನಿರ್ವಹಿಸಲಿದೆ. ಇದಕ್ಕೆ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಒಪ್ಪಿಗೆ ನೀಡಬೇಕಿದೆ' ಎಂದು ಸಚಿವರು ತಿಳಿಸಿದರು.

'ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವ್ಯಾಟ್ ದರವನ್ನು ಇಳಿಕೆ ಮಾಡಲಾಗಿದೆ. ಆದರೆ, ಬಿಜೆಪಿ ಅಧಿಕಾರದಲ್ಲಿ ಇಲ್ಲದ ರಾಜ್ಯಗಳು ಹೆಚ್ಚುವರಿ ವ್ಯಾಟ್ ದರವನ್ನು ಕೈಬಿಡಲು ಸಿದ್ಧವಿಲ್ಲ. ಇದು ಕಾರ್ಯಗತವಾಗುವ ಸಾಧ್ಯತೆ ಕಡಿಮೆ' ಎಂದರು.

ಟಾಟಾ ಮೋಟರ್ಸ್ ಹೊಸ ಘಟಕಕ್ಕೆ ಭೂಮಿಪೂಜೆ


ರಾಣಿಪೇಟೆ (ತಮಿಳುನಾಡು) (ಪಿಟಿಐ): ಪಾನಪಕ್ಕಂ ಜಿಲ್ಲೆಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಟಾಟಾ ಮೋಟರ್ಸ್‌ನ ಕಾರು ತಯಾರಿಕಾ ಹೊಸ ಘಟಕಕ್ಕೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು, ಭೂಮಿಪೂಜೆ ನೆರವೇರಿಸಿದರು.

ಈ ಘಟಕಕ್ಕೆ ಕಂಪನಿಯು ₹9 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ. ಟಾಟಾ ಮೋಟರ್ಸ್ ಮತ್ತು ಜಾಗ್ವರ್ ಲ್ಯಾಂಡ್ ರೋವರ್‌ನ ಹೊಸಪೀಳಿಗೆಯ ಕಾರುಗಳನ್ನು ಇಲ್ಲಿ ತಯಾರಿಸಲಾಗುತ್ತದೆ ಎಂದು ಕಂಪನಿ ತಿಳಿಸಿದೆ.

ಈ ಘಟಕದಲ್ಲಿ ಹಂತ ಹಂತವಾಗಿ ಕಾರುಗಳ ತಯಾರಿಕಾ ಸಾಮರ್ಥ್ಯವನ್ನು ವಿಸ್ತರಿಸಲಾಗುವುದು. ಮುಂದಿನ ಐದು ಅಥವಾ ಏಳು ವರ್ಷದೊಳಗೆ ವಾರ್ಷಿಕ 2.50 ಲಕ್ಷ ಕಾರುಗಳನ್ನು ತಯಾರಿಸುವ ಗುರಿ ಹೊಂದಲಾಗಿದೆ. ಇದರಿಂದ 5 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ತಿಳಿಸಿದೆ.

'ದೇಶದಲ್ಲಿನ ದೊಡ್ಡ ಕಂಪನಿಗಳಿಗಷ್ಟೇ ತಮಿಳುನಾಡು ಬಂಡವಾಳ ಹೂಡಿಕೆಯ ತಾಣವಾಗಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೂ ಹೂಡಿಕೆಯ ವಾತಾವರಣ ಕಲ್ಪಿಸಿದೆ' ಎಂದು ಎಂ.ಕೆ. ಸ್ಟಾಲಿನ್ ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹555
12 ಕ್ಕೆ	₹75
ಮೈಸೂರು	
100ಕ್ಕೆ	₹550

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹18300
ಎಸಿ	₹11310
ಆರ್‌ಪಿ	₹21000
ಆರ್‌ಸಿ	₹10500

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹340-547
ದ್ವಿತಳಿ (ಬಿ.ವಿ)	₹444-695

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹222
ಆರ್‌ಎಸ್‌ಎಸ್-5	₹218
ಗುಡ್ ಲಾಟ್	₹203

(ಪ್ರತಿ ಕೆ.ಜಿಗೆ)

ನೇಪಾಳದಲ್ಲಿ ಪ್ರವಾಹ: 59 ಸಾವು

ಕಠ್ಮಂಡು (ಪಿಟಿಐ/ಎಎಫ್‌ಪಿ): ನೇಪಾಳದಲ್ಲಿ ಶುಕ್ರವಾರ ಸತತವಾಗಿ ಮಳೆ ಸುರಿದಿದ್ದು, ಭೂಕುಸಿತ ಹಾಗೂ ಪ್ರವಾಹದಲ್ಲಿ ಕನಿಷ್ಠ 59 ಜನರು ಮೃತಪಟ್ಟಿದ್ದು, 44 ಮಂದಿ ನಾಪತ್ತೆಯಾಗಿದ್ದಾರೆ.

ಲಲಿತ್‌ಪುರ, ಕಠ್ಮಂಡು, ಭಕ್ತಾಪುರ, ಕವ್ರೆಪಾಲನ್‌ಚೌಕ್, ಪಂಚತಾರ್, ಧನಕೂಟ, ಝೂಪಾ, ಧಾಡಿಂಗ್‌ನಲ್ಲಿ ಪ್ರವಾಹಕ್ಕೆ ಸಿಲುಕಿ ಕೆಲವರು ಮೃತಪಟ್ಟಿದ್ದು, 36 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಹಿಜ್ಬುಲ್ಲಾ ಮುಖ್ಯಸ್ಥ ನಸ್ರಲ್ಲಾ ಹತ್ಯೆ

ಒಂದನೇ ಪುಟದಿಂದ...

'ಹಿಜ್ಬುಲ್ಲಾ ಸಂಘಟನೆಯ ಸಭೆಯಲ್ಲಿದ್ದ ಇರಾನ್‌ನ 'ರೆವಲೂಷನರಿ ಗಾರ್ಡ್'ನ ಕಮಾಂಡರ್ ಅಬ್ಬಾಸ್ ನಿಲ್‌ಫೊರುಶಾನ್ (58) ಅವರೂ ದಾಳಿಯಲ್ಲಿ ಮೃತಪಟ್ಟಿದ್ದಾರೆ' ಎಂದು ಇರಾನ್ ಮಾಹಿತಿ ನೀಡಿದೆ.

ಯುದ್ಧ ಮುಗಿದಿಲ್ಲ: 'ನಸ್ರಲ್ಲಾ ಅವರ ಹತ್ಯೆಯ ಬಳಿಕ ಯುದ್ಧ ನಿಲ್ಲಲಿದೆ ಎಂದು ತಿಳಿಯಬೇಕಿಲ್ಲ' ಎಂದು ಇಸ್ರೇಲ್ ಹೇಳಿದೆ. ಹಿಜ್ಬುಲ್ಲಾ ಸಂಘಟನೆ ಕೂಡ ಈ ಬಗ್ಗೆ ಪ್ರತಿಕ್ರಿಯಿಸಿದ್ದು, 'ನಮ್ಮ ಶತ್ರುವಿನ ವಿರುದ್ಧ ಹಾಗೂ ಪ್ಯಾಲೆಸ್ಟೀನ್ ಪರವಾದ ನಮ್ಮ ಈ ಪವಿತ್ರ ಯುದ್ಧವು ಮುಂದುವರಿಯಲಿದೆ' ಎಂದಿದೆ.

ಇಸ್ರೇಲ್–ಹಿಜ್ಬುಲ್ಲಾ ಹೋರಾಟ ಶನಿವಾರವೂ ಮುಂದುವರಿದಿದೆ. ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ಹಾಗೂ ಉತ್ತರ ಹಾಗೂ ಮಧ್ಯ ಇಸ್ರೇಲ್ ಮೇಲೆ ಹಿಜ್ಬುಲ್ಲಾ ದಾಳಿ ನಡೆಸಿದೆ.

2006ರ ಇಸ್ರೇಲ್ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಾಯಕ

ಹಿಜ್ಬುಲ್ಲಾ ಸಂಘಟನೆ ಜತೆಗೇ ಬೆಳೆದ ನಸ್ರಲ್ಲಾ

ಜೆರುಸಲೇಂ/ಬೈರೂತ್ (ರಾಯಿಟರ್ಸ್/ಎಪಿ): ಇಸ್ರೇಲ್ ಹತ್ಯೆಗೈದಿರುವ ಹಿಜ್ಬುಲ್ಲಾ ಸಂಘಟನೆಯ ಮುಖ್ಯಸ್ಥ ಸಯ್ಯದ್ ಹಸನ್ ನಸ್ರಲ್ಲಾ ಅವರು ಲೆಬನಾನ್‌ನಲ್ಲಿ ಪ್ರಬಲ ನಾಯಕರಾಗಿ ಗುರುತಿಸಿಕೊಂಡಿದ್ದರು. ಆದರೆ, ತನ್ನ 'ಪರಮ ಶತ್ರು' ಇಸ್ರೇಲ್‌ನ ಹತ್ಯೆ ಯತ್ನಗಳಿಂದ ಪಾರಾಗಲು ತೆರೆಮರೆಯಲ್ಲೇ ಜೀವನ ನಡೆಸುತ್ತಿದ್ದರು.

ಇಸ್ರೇಲ್ ಗಡಿಯ ಉತ್ತರಕ್ಕಿರುವ ಪುಟ್ಟ ದೇಶ ಲೆಬನಾನ್‌ನ ಬಹುಭಾಗವನ್ನು ನಿಯಂತ್ರಿಸುವ ಬಂಡುಕೋರ ಸಂಘಟನೆ ಹಿಜ್ಬುಲ್ಲಾ. 2023ರ ಅಕ್ಟೋಬರ್‌ನಲ್ಲಿ ಗಾಜಾ ಪಟ್ಟಿಯ ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ದಾಳಿ ನಡೆಸಿದ್ದರು, ನಂತರ ಗಾಜಾ ಪಟ್ಟಿ ಮೇಲೆ ಇಸ್ರೇಲ್ ಯುದ್ಧ ಸಾರಿತ್ತು. ಈ ಯುದ್ಧ ಆರಂಭವಾದಾಗಿನಿಂದ ಹಿಜ್ಬುಲ್ಲಾ ಮತ್ತು ಇಸ್ರೇಲ್ ಪಡೆಗಳ ನಡುವೆ ಸಶಸ್ತ್ರ ಸಂಘರ್ಷ ನಡೆಯುತ್ತಲೇ ಇದೆ.

'ಇಲ್ಲಿ ನಿಜಕ್ಕೂ ಸಂಘರ್ಷ ಇರುವುದು ಇಸ್ರೇಲ್ ಮತ್ತು ಇರಾನ್ ನಡುವೆ. ಹಿಜ್ಬುಲ್ಲಾ ಅದರ ಒಂದು ಭಾಗ ಮಾತ್ರ. ಪ್ಯಾಲೆಸ್ಟೀನ್ ಮುಸ್ಲಿಮರ ನೆಲೆಯನ್ನು ಯಹೂದಿಗಳು ಅಕ್ರಮಿಸಿಕೊಂಡು, ಇಸ್ರೇಲ್ ದೇಶವನ್ನು ನಿರ್ಮಿಸಿದ್ದಾರೆ ಎಂಬ ಪ್ರತಿಪಾದನೆಯೇ ಈ ಸಂಘರ್ಷಕ್ಕೆ ಕಾರಣ' ಎಂಬುದು ಈಗ ಚಾಲ್ತಿಯಲ್ಲಿರುವ ವಿಶ್ಲೇಷಣೆ. ನಸ್ರಲ್ಲಾ ಅವರ ಜೀವನವನ್ನೂ ಈ ಸಂಘರ್ಷದ ಜತೆಗೇ ಗುರುತಿಸಬೇಕಾಗುತ್ತದೆ.



ನಸ್ರಲ್ಲಾ ಹತ್ಯೆಯ ಸುದ್ದಿ ತಿಳಿದು ಹಿಜ್ಬುಲ್ಲಾ ಸಂಘಟನೆಯ ಹಿಡಿತದಲ್ಲಿದ್ದ ಸಿರಿಯಾದ ಇದ್ಲಿಬ್ ಪ್ರಾಂತ್ಯದಲ್ಲಿ ಜನರು ಸಂಭ್ರಮಿಸಿದರು ಎಎಫ್‌ಪಿ ಚಿತ್ರ

1982ರ ಸಂದರ್ಭದಲ್ಲಿ ಇಸ್ರೇಲ್ ವಿರುದ್ಧ ಲೆಬನಾನ್‌ನಲ್ಲಿ ಪ್ರತಿರೋಧವೊಂದು ರೂಪು ತಳೆದಿತ್ತು. ಇಸ್ರೇಲ್‌ನ ಪಡೆಗಳ ವಿರುದ್ಧ ಸೆಣಸಲು ದಕ್ಷಿಣ ಲೆಬನಾನ್‌ನಲ್ಲಿ ಗೆರಿಲ್ಲಾ ಪಡೆ ಅಸ್ತಿತ್ವಕ್ಕೆ ಬಂದಿತ್ತು. ಈ ಪಡೆಯನ್ನೇ ಮುಂದೆ ಹಿಜ್ಬುಲ್ಲಾ ಎಂದು ಕರೆಯಲಾಯಿತು. ಈ ಬಂಡುಕೋರರಿಗೆ ಇರಾನ್ ನೆರವು ನೀಡುತ್ತಿತ್ತು ಎಂಬ ವಾದ ಇದೆ. ಇರಾನ್ ಸಹ ಇದನ್ನು ಅಲ್ಲಗೆಳೆಯುವುದಿಲ್ಲ.

ಇದು ಇಲ್ಲಿಗೆ ಮುಗಿದಿಲ್ಲ. ಇಸ್ರೇಲ್ ಜನರನ್ನು ಯಾರು ಬೆದರಿಸುತ್ತಾರೊ, ಅಂಥವರನ್ನು ಹೇಗೆ ಮಟ್ಟಹಾಕಬೇಕು ಎಂಬುದು ನಮಗೆ ತಿಳಿದಿದೆ

ಹರ್ಜಿ ಹಲೇವಿ, ಇಸ್ರೇಲ್ ಸೇನೆಯ ಲೆಫ್ಟಿನೆಂಟ್ ಜನರಲ್

ಲೆಬನಾನ್ ದಕ್ಷಿಣ ಭಾಗದ ಬೊಸುರಿಯೇ ಪ್ರದೇಶದ ಒಂದು ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದ ನಸ್ರಲ್ಲಾ, ಹಿಜ್ಬುಲ್ಲಾ ಜತೆಗೇ ಬೆಳೆದರು. ಗೆರಿಲ್ಲಾ ಹೋರಾಟಗಾರರೊಂದಿಗೆ ರಾತ್ರಿಗಳನ್ನು ಕಳೆಯುತ್ತಿದ್ದರು. ನಂತರದಲ್ಲಿ ಹಿಜ್ಬುಲ್ಲಾದ ಸಕ್ರಿಯ ಕಾರ್ಯಕರ್ತರಾದರು. ತಮ್ಮ ಭಾಷಣಗಳಿಗೆ ನಸ್ರಲ್ಲಾ ಹೆಸರುವಾಸಿ. ಸಂಘಟನೆಯಲ್ಲಿ ಹಂತ ಹಂತವಾಗಿ ಬೆಳೆದ ಇವರು, ತಮ್ಮ 35ನೇ ವಯಸ್ಸಿಗೆ (1992) ಹಿಜ್ಬುಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಲೆಬನಾನ್‌ನ ದಕ್ಷಿಣ ಭಾಗದ ಹಲವು ಪ್ರದೇಶಗಳು ಇಸ್ರೇಲ್ ವಶದಲ್ಲಿತ್ತು. 2006ರಲ್ಲಿ ಇಸ್ರೇಲ್ ವಿರುದ್ಧ ನಡೆಸಿದ ಸಶಸ್ತ್ರ ಹೋರಾಟದಲ್ಲಿ ಈ ಪ್ರದೇಶಗಳನ್ನು ಹಿಜ್ಬುಲ್ಲಾ ವಶಪಡಿಸಿಕೊಂಡಿತು. ಇದನ್ನು ನಸ್ರಲ್ಲಾ ಅವರು 'ಪವಿತ್ರ ಗೆಲುವು' ಎಂದಿದ್ದರು. ಈ ಬಳಿಕ ನಸ್ರಲ್ಲಾ ಅವರ ಹಿಡಿತ ಬಿಗಿಯಾಯಿತು. ಲೆಬನಾನ್ ಮಾತ್ರವಲ್ಲದೇ, ಮಧ್ಯಪ್ರಾಚ್ಯದಲ್ಲೂ ಪ್ರಭಾವಿ ನಾಯಕನಾಗಿ ಬೆಳೆದರು.

ಹೀಗಿದ್ದೂ, ಮಧ್ಯಪ್ರಾಚ್ಯದಲ್ಲಿ ಶಿಯಾ–ಸುನ್ನಿ ಸಂಘರ್ಷವನ್ನು ಹೆಚ್ಚಿಸಿದ ಆರೋಪ ನಸ್ರಲ್ಲಾ ಮೇಲಿದೆ. ಸಿರಿಯಾ–ಇರಾಕ್ ಆಂತರಿಕ ಕಲಹಗಳಲ್ಲಿ ನೇರವಾಗಿ ಭಾಗಿಯಾಗಿದ್ದು, ಶಿಯಾಗಳ ಪರವಾಗಿ ನಸ್ರಲ್ಲಾ ನಿಂತ ಕಾರಣದಿಂದಲೇ ಸುನ್ನಿ ಪ್ರಾಬಲ್ಯವಿರುವ ದೇಶಗಳು ಲೆಬನಾನ್‌ನಿಂದ ಅಂತರ ಕಾಯ್ದುಕೊಂಡವು ಎಂದು ಆರೋಪಿಸಲಾಗುತ್ತದೆ.

ಇಸ್ರೇಲಿಗರ ಸಂಭ್ರಮ ಮತ್ತು ಆತಂಕ

ಇಸ್ರೇಲ್–ಹಮಾಸ್ ಯುದ್ಧವು 2023ರ ಅ.7ರಂದು ಆರಂಭಗೊಂಡಿತು. ಮರುದಿನವೇ ಹಿಜ್ಬುಲ್ಲಾ ಸಂಘಟನೆಯು ಇಸ್ರೇಲ್ ಮೇಲೆ ದಾಳಿ ಆರಂಭಿಸಿತ್ತು. ಕಳೆದ ಒಂದು ವರ್ಷದಿಂದ ಹಿಜ್ಬುಲ್ಲಾ ಸಂಘಟನೆಯು ಇಸ್ರೇಲ್‌ನ ಉತ್ತರ ಭಾಗದ ಮೇಲೆ ದಾಳಿ ನಡೆಸುತ್ತಲೇ ಬಂದಿದೆ. ಇದರ ಪರಿಣಾಮವಾಗಿ, ಇಸ್ರೇಲ್‌ನ 60 ಸಾವಿರ ಜನರನ್ನು ಸ್ಥಳಾಂತರಿಸಲಾಗಿದೆ.

ಇದೇ ಕಾರಣಕ್ಕೆ ನಸ್ರಲ್ಲಾ ಅವರ ಹತ್ಯೆಯನ್ನು ಇಸ್ರೇಲಿಗರು ಸಂಭ್ರಮಿಸುತ್ತಿದ್ದಾರೆ. ಹಾಗೆಯೇ ಆತಂಕವನ್ನೂ ವ್ಯಕ್ತಪಡಿಸುತ್ತಿದ್ದಾರೆ. 'ಈ ಹತ್ಯೆಯು ಯುದ್ಧವನ್ನು ಅಂತ್ಯಗೊಳಿಸದೆ, ನಾವು ಇನ್ನಷ್ಟು ವರ್ಷಗಳವರೆಗೆ ಆತಂಕದಲ್ಲಿ ಇರುವಂತೆ ಮಾಡಲಿದೆಯೇ' ಎನ್ನುವ ಅಭಿಪ್ರಾಯವನ್ನೂ ಇಸ್ರೇಲ್ ಜನರು ವ್ಯಕ್ತಪಡಿಸುತ್ತಿದ್ದಾರೆ.

ಹರಿಯಾಣ: ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಗ್ಯಾರಂಟಿಗಳಿಗೆ ಸ್ಥಾನ

ಮಹಿಳೆ, ರೈತರಿಗೆ ಆದ್ಯತೆ

ಪ್ರಜಾವಾಣಿ ವಾರ್ತೆ/ಪಿಟಿಐ

ಚಂಡೀಗಢ (ಪಿಟಿಐ): ರಾಜ್ಯದಲ್ಲಿ ವಿದೇಶಿ ಉದ್ಯೋಗ ಮಂಡಳಿ ಸ್ಥಾಪನೆ, ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲು, ರೈತ ಕಲ್ಯಾಣಕ್ಕಾಗಿ ಆಯೋಗ ಸ್ಥಾಪನೆ, ಹುತಾತ್ಮ ಯೋಧರ ಕುಟುಂಬಗಳಿಗೆ ₹ 2 ಕೋಟಿ ಪರಿಹಾರ, ಉದ್ಯೋಗಾವಕಾಶಗಳ ಸೃಷ್ಟಿಗೆ ಕಾರ್ಮಿಕ ಘಟಕಗಳಿಗೆ ಉತ್ತೇಜನ, ಹರಿಯಾಣ ಅಲ್ಪಸಂಖ್ಯಾತ ಆಯೋಗದ ಪುನರ್ ರಚನೆ ಒಳಗೊಂಡಂತೆ ವಿವರವಾದ ಚುನಾವಣಾ ಪ್ರಣಾಳಿಕೆಯನ್ನು ಕಾಂಗ್ರೆಸ್ ಶನಿವಾರ ಬಿಡುಗಡೆ ಮಾಡಿದೆ.

ಹರಿಯಾಣ ಕಾಂಗ್ರೆಸ್ ಮುಖ್ಯಸ್ಥ ಉದಯ್ ಭಾನ್, ವಿರೋಧ ಪಕ್ಷದ ನಾಯಕ ಭೂಪಿಂದರ್ ಸಿಂಗ್ ಹೂಡಾ ಮತ್ತು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸೇರಿದಂತೆ ಇತರ ನಾಯಕರು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು. ಅಕ್ಟೋಬರ್ 5ರಂದು ರಾಜ್ಯದ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಅಕ್ಟೋಬರ್ 8ರಂದು ಮತ ಎಣಿಕೆ ನಡೆಯಲಿದೆ.

ಎಂಎಸ್‌ಪಿಗೆ ಕಾನೂನು ಖಾತರಿ, ಜಾತಿ ಸಮೀಕ್ಷೆ, ₹ 500ಕ್ಕೆ ಅಡುಗೆ ಅನಿಲ ಸಿಲಿಂಡರ್, 18ರಿಂದ 60 ವರ್ಷದೊಳಗಿನ ಮಹಿಳೆಗೆ ಮಾಸಿಕ ₹ 2,000 ಆರ್ಥಿಕ ನೆರವು, ವೃದ್ಧರು, ಅಂಗವಿಕಲರು ಮತ್ತು ವಿಧವೆಯರಿಗೆ ₹ 6,000 ಮಾಸಿಕ ಪಿಂಚಣಿ, ಎರಡು ಲಕ್ಷ ಸರ್ಕಾರಿ ಉದ್ಯೋಗ ಸೃಷ್ಟಿ, 300 ಯುನಿಟ್ ಉಚಿತ ವಿದ್ಯುತ್, ₹ 25 ಲಕ್ಷದವರೆಗೆ ಉಚಿತ ವೈದ್ಯಕೀಯ ಚಿಕಿತ್ಸೆ ಸೇರಿದಂತೆ ಹಲವು ಗ್ಯಾರಂಟಿಗಳನ್ನು ಕಾಂಗ್ರೆಸ್ ಈಗಾಗಲೇ ಘೋಷಿಸಿದ್ದು, ಅವುಗಳನ್ನು ಪ್ರಣಾಳಿಕೆಯಲ್ಲಿ ಪ್ರಕಟಿಸಲಾಗಿದೆ.

ಸಮಾಜದ ಎಲ್ಲ ವರ್ಗದ ಜನರ ಜತೆ ಚರ್ಚಿಸಿ, ಸಲಹೆಗಳನ್ನು ಪಡೆದು ಪ್ರಣಾಳಿಕೆ ಸಿದ್ಧಪಡಿಸಲಾಗಿದೆ ಎಂದು ಅಶೋಕ್ ಗೆಹಲೋತ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಕಾಂಗ್ರೆಸ್ ತಾನು ನೀಡುವ ಭರವಸೆಗಳನ್ನು ಈಡೇರಿಸುವ ವಿಶ್ವಾಸಾರ್ಹತೆ ಹೊಂದಿದೆ ಎಂದು ಅವರು ಹೇಳಿದರು.

ಪ್ರಣಾಳಿಕೆಯಲ್ಲಿರುವ ಪ್ರಮುಖಾಂಶಗಳು

- ರೈತರ ಸಮಸ್ಯೆಗಳನ್ನು ಆದ್ಯತೆ ಅನುಗುಣವಾಗಿ ಪರಿಹರಿಸಲಾಗುವುದು. ಸಣ್ಣ ರೈತರಿಗೆ ಸಬ್ಸಿಡಿ ದರದಲ್ಲಿ ಡೀಸೆಲ್ ಪೂರೈಕೆ ಮಾಡಲಾಗುವುದು. ಇದಕ್ಕಾಗಿ ರೈತರಿಗೆ ಡೀಸೆಲ್ ಕಾರ್ಡ್‌ಗಳ ವಿತರಣೆ.
- ಕೇಂದ್ರ ಸರ್ಕಾರ ಜಾರಿಗೊಳಿಸಿದ್ದ ಮೂರು ಕೃಷಿ ಕಾಯ್ದೆ ವಿರೋಧಿಸಿ ಹೋರಾಟ ನಡೆಸಿದ ವೇಳೆ ಮೃತಪಟ್ಟ ರೈತರಿಗಾಗಿ ಸ್ಮಾರಕ ನಿರ್ಮಿಸಲಾಗುವುದು. ಮೃತ ರೈತರ ಕುಟುಂಬದ ಒಬ್ಬರಿಗೆ ಸರ್ಕಾರಿ ನೌಕರಿ. ಧರಣಿ ವೇಳೆ ಮೃತಪಟ್ಟ 736 ರೈತರಿಗೆ ಹುತಾತ್ಮ ಸ್ಥಾನಮಾನ.
- ಬಿಜೆಪಿ ಸರ್ಕಾರ ಜಾರಿಗೊಳಿಸಿರುವ ಪರಿವಾರ ಪೆಹಚಾನ್ ಪತ್ರ ಅಥವಾ ಕುಟುಂಬ ಐಡಿ ಪೋರ್ಟಲ್ ಅನ್ನು ಸ್ಥಗಿತ. ಅಲ್ಲದೆ ಅಗ್ನಿ ಗುರುತಿನ ಯೋಜನೆಯೂ ಪರಿಶೀಲನೆ.
- ಮಹಿಳಾ ಆಯೋಗ, ಪರಿಶಿಷ್ಟ ಜಾತಿ ಆಯೋಗ ಮತ್ತು ಅಲ್ಪಸಂಖ್ಯಾತರ ಆಯೋಗಗಳ ಪುನರ್ ರಚನೆ. ಅವುಗಳಿಗೆ ಸಾಂವಿಧಾನಿಕ ಮತ್ತು ಆಡಳಿತಾತ್ಮಕ ಅಧಿಕಾರ.
- ಹಿಂದುಳಿದ ವರ್ಗಗಳ ಕೆನೆಪದರ ಮಿತಿಯನ್ನು ₹ 6 ಲಕ್ಷದಿಂದ ₹ 10 ಲಕ್ಷಕ್ಕೆ ಏರಿಸಲಾಗುವುದು. ಇತರ ಹಿಂದುಳಿದ ವರ್ಗದವರ ಏಳಿಗೆಗಾಗಿ ಹಿಂದುಳಿದ ವರ್ಗಗಳ ಆಯೋಗ ರಚನೆ.
- ಕ್ರೀಡಾಳುಗಳ ಅಭಿವೃದ್ಧಿಗೆ ಪೂರಕವಾಗಿ ಹೊಸ ಕ್ರೀಡಾ ನೀತಿ ರೂಪಿಸಲಾಗುವುದು.
- ಹುತಾತ್ಮರಾದ ಯೋಧರ ಕುಟುಂಬದವರಿಗೆ ₹ 2 ಕೋಟಿ ಪರಿಹಾರ. ಅಲ್ಲದೆ ಕುಟುಂಬದ ಒಬ್ಬರಿಗೆ ನೌಕರಿ.
- ನರೇಗಾ ಯೋಜನೆಯಡಿ ದಿನಗೂಲಿ ₹ 400ಕ್ಕೆ ಏರಿಕೆ.
- ಮೇವಾತ್‌ನಲ್ಲಿ ಗುರು ಗೋವಿಂದ್ ಸಿಂಗ್ ಹೆಸರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪನೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಮಹಿಳಾ ಕಾಲೇಜುಗಳ ಆರಂಭ.

'ಯುವಜನರ ಭವಿಷ್ಯ ಹಾಳು ಮಾಡಿದ ಮೋದಿ'



ನವದೆಹಲಿ (ಪಿಟಿಐ): 'ದೇಶದಲ್ಲಿ ನಿರುದ್ಯೋಗಕ್ಕಿಂತ ದೊಡ್ಡ ಸಮಸ್ಯೆ ಯಾವುದೂ ಇಲ್ಲ. ಯಾರ ಉದ್ಯೋಗವನ್ನು ಸರ್ಕಾರ ಕಸಿದಿದೆಯೋ ಅವರಿಂದಲೇ ಬಿಜೆಪಿ ಸೋಲಾಗಲಿದೆ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ನೆನಪಿನಲ್ಲಿಟ್ಟುಕೊಳ್ಳಬೇಕು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕಾರ್ಮಿಕ ಬಲದ ಸಮೀಕ್ಷಾ ವರದಿ ಪ್ರಸ್ತಾಪಿಸಿ (ಪಿಎಲ್‌ಎಫ್‌ಎಸ್) 'ಎಕ್ಸ್'ನಲ್ಲಿ ಸಂದೇಶವನ್ನು ಪೋಸ್ಟ್ ಮಾಡಿರುವ ಖರ್ಗೆ ಅವರು, 'ಈ ದತ್ತಾಂಶವು ಯುವಜನರ ಸಂಕಷ್ಟವನ್ನು ಬಹಿರಂಗಪಡಿಸಿದೆ. ಯುವಜನರ ಭವಿಷ್ಯ ಹಾಳು ಮಾಡುವುದರಲ್ಲಿ ಮೋದಿ ಕೊಡುಗೆ ಸಾಕಷ್ಟಿದೆ' ಎಂದು ಹೇಳಿದ್ದಾರೆ.

'ಯುವಜನರ ನಿರುದ್ಯೋಗ ಪ್ರಮಾಣವು 2023–24ರಲ್ಲಿ ಶೇ 10.2ಕ್ಕೆ ಏರಿಕೆಯಾಗಿರುವುದು ಆತಂಕಕಾರಿಯಲ್ಲವೇ? ವರ್ಣರಂಜಿತ ಘೋಷಣೆ ಮಾಡುವುದು ಹಾಗೂ ಫೋಟೊ ತೆಗೆಸಿಕೊಳ್ಳುವುದರ ಬದಲಿಗೆ ಮೋದಿ ಅವರು ಯುವಜನರಿಗೆ ಉದ್ಯೋಗ ನೀಡಲು ಏನು ಮಾಡಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

'ಅಧಿಕಾರಕ್ಕೆ ಬಂದರೆ ರಾಜ್ಯ ಸ್ಥಾನಮಾನ'

ಜಮ್ಮು–ಕಾಶ್ಮೀರ ಕೇಂದ್ರಾಡಳಿತ ಪ್ರದೇಶ ನಿರ್ಧಾರ ತಾತ್ಕಾಲಿಕ: ಪ್ರಧಾನಿ ಮೋದಿ

ಪ್ರಜಾವಾಣಿ ವಾರ್ತೆ/ಪಿಟಿಐ



ಜಮ್ಮುವಿನ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ಬೆಂಬಲಿಗರು ಹಾಗೂ ಬಿಜೆಪಿ ಕಾರ್ಯಕರ್ತರು ಪಿಟಿಐ ಚಿತ್ರ

ಜಮ್ಮು/ಶ್ರೀನಗರ: ಜಮ್ಮು–ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಪರಿವರ್ತಿಸುವ ನಿರ್ಧಾರ ತಾತ್ಕಾಲಿಕವಾದದ್ದು. ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ಪ್ರದೇಶಕ್ಕೆ ಮತ್ತೆ ರಾಜ್ಯದ ಸ್ಥಾನಮಾನ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ನಗರದ ಹೃದಯ ಭಾಗದಲ್ಲಿರುವ ಎಂ.ಎ.ಎಂ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಬೃಹತ್ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, 'ಜಮ್ಮು–ಕಾಶ್ಮೀರಕ್ಕೆ ಮತ್ತೆ ರಾಜ್ಯದ ಸ್ಥಾನಮಾನ ಮರುಸ್ಥಾಪಿಸುವ ಏಕೈಕ ಪಕ್ಷವೆಂದರೆ ಬಿಜೆಪಿ' ಎಂದು ಪುನರುಚ್ಚರಿಸಿದರು.

ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಹಾಗೂ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ವಿರುದ್ಧ ಟೀಕಾಪ್ರಹಾರ ನಡೆಸಿದ ಅವರು, 'ಜಮ್ಮು–ಕಾಶ್ಮೀರದ ಜನರಿಗೆ ಅವರ ಹಕ್ಕುಗಳನ್ನು ನಿರಾಕರಿಸುವ ಮೂಲಕ ಈ ಎರಡು ಪಕ್ಷಗಳು ಗಾಯದ ಮೇಲೆ ಬರೆ ಎಳೆದಿವೆ' ಎಂದರು.

'ಬಿಜೆಪಿಗೆ ಸ್ಪಷ್ಟ ಬಹುಮತ': ಸ್ಪಷ್ಟ ಬಹುಮತ ಪಡೆಯುವ ಮೂಲಕ ಬಿಜೆಪಿ, ಜಮ್ಮು–ಕಾಶ್ಮೀರದಲ್ಲಿ ಸರ್ಕಾರ ರಚಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚುನಾವಣಾ ಫಲಿತಾಂಶ ಹಾಗೂ ವಿಜಯದಶಮಿಗೂ ಸಂಬಂಧ ಬೆಸೆದ ಮೋದಿ, 'ಬದಲಾವಣೆಗೆ ಇದು ಒಳ್ಳೆಯ ಸಮಯ. ಈ ಅವಕಾಶವನ್ನು ಕಳೆದುಕೊಳ್ಳದೇ, ಎಲ್ಲರೂ ಮತ ಚಲಾಯಿಸಬೇಕು' ಎಂದು ಮನವಿ ಮಾಡಿದರು.

'2016ರ ಸರ್ಜಿಕಲ್ ಸ್ಟ್ರೈಕ್' ಪ್ರಸ್ತಾಪಿಸಿದ ಪ್ರಧಾನಿ

2016ರಲ್ಲಿ ನಡೆಸಿದ್ದ 'ಸರ್ಜಿಕಲ್ ಸ್ಟ್ರೈಕ್' ಕುರಿತು ಪ್ರಸ್ತಾಪಿಸಿದ ಮೋದಿ, 'ಉಗ್ರರು ಪಾತಾಳದಲ್ಲಿಯೇ ಅಡಗಿರಲಿ, ಮೋದಿ ಅವರನ್ನು ಹುಡುಕುತ್ತಾರೆ ಎಂಬುದನ್ನು ಭಯೋತ್ಪಾದಕರನ್ನು ಪೋಷಿಸುತ್ತಿರುವವರಿಗೆ ಗೊತ್ತಿದೆ' ಎಂದರು.

'ಇಂದು ಸೆ.28. 2016ರಲ್ಲಿ ಇದೇ ದಿನ 'ಸರ್ಜಿಕಲ್ ಸ್ಟ್ರೈಕ್' ನಡೆದಿತ್ತು. ಇದು ನೂತನ ಭಾರತ ಹಾಗೂ ಶತ್ರುಗಳ ಮನೆ ಹೊಕ್ಕು ಅವರನ್ನು ಹೊಡೆಯುತ್ತದೆ ಎಂಬ ಸಂದೇಶವನ್ನು ಜಗತ್ತಿಗೆ ಭಾರತ ರವಾನಿಸಿತ್ತು' ಎಂದರು.

'ನನ್ನ ಸರ್ಕಾರ 'ಸರ್ಜಿಕಲ್ ಸ್ಟ್ರೈಕ್' ನಡೆಸಿದ ನಂತರ, ಕಾಂಗ್ರೆಸ್ ಪಕ್ಷ ಈ ಕಾರ್ಯಾಚರಣೆ ಕುರಿತು ಪುರಾವೆ ಕೇಳಿತ್ತು. 'ಸರ್ಜಿಕಲ್ ಸ್ಟ್ರೈಕ್' ಕುರಿತು ಕಾಂಗ್ರೆಸ್ ಪಕ್ಷ ಪಾಕಿಸ್ತಾನದ ಧಾಟಿಯಲ್ಲಿಯೇ ಮಾತನಾಡುತ್ತದೆ. ಇಂತಹ ಮಾತುಗಳನ್ನಾಡುವ ಕಾಂಗ್ರೆಸ್ ಪಕ್ಷವನ್ನು ನೀವು ಕ್ಷಮಿಸುತ್ತೀರಾ' ಎಂದು ಜನರನ್ನು ಕೇಳಿದರು.

'ಬಾಪು', 'ಬೇಟಾ' ಇಬ್ಬರೂ ಆಕಾಂಕ್ಷಿಗಳು: ಮೋದಿ ವ್ಯಂಗ್ಯ

'ಸಿ.ಎಂ ಗಾದಿಗೆ 'ಕೈ'ನಲ್ಲಿ ಪೈಪೋಟಿ'

ಹಿಸಾರ್ (ಹರಿಯಾಣ) (ಪಿಟಿಐ): 'ಕಾಂಗ್ರೆಸ್‌ನಿಂದ ಸ್ಥಿರತೆ ಸಾಧ್ಯವಿಲ್ಲ. ಆ ಪಕ್ಷದಲ್ಲಿನ ಆಂತರಿಕ ಕಚ್ಚಾಟವೇ ಇದಕ್ಕೆ ಕಾರಣ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

'ಹರಿಯಾಣ ಮುಖ್ಯಮಂತ್ರಿಯಾಗಲು ಆ ಪಕ್ಷದ ನಾಯಕರಲ್ಲಿ ಪೈಪೋಟಿ ಶುರುವಾಗಿದೆ. 'ಬಾಪು' (ಭೂಪಿಂದರ್ ಸಿಂಗ್ ಹೂಡಾ), 'ಬೇಟಾ' (ದೀಪೇಂದರ್ ಹೂಡಾ) ಕೂಡ ಮುಖ್ಯಮಂತ್ರಿ ಸ್ಥಾನಕ್ಕಾಗಿ ಪೈಪೋಟಿಗಿಳಿದಿದ್ದಾರೆ' ಎಂದು ಕುಟುಕಿದರು.

ಇಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಹರಿಯಾಣದಲ್ಲಿ ಅಭಿವೃದ್ಧಿ ಕಾರ್ಯಗಳು ಮುಂದುವರಿಯಬೇಕು ಎಂದು ಬಯಸಿರುವ ಜನರು, ಬಿಜೆಪಿಗೆ ಮೂರನೇ ಬಾರಿ ಅವಕಾಶ ನೀಡುವುದಕ್ಕೆ ತೀರ್ಮಾನಿಸಿದ್ದಾರೆ' ಎಂದರು.

'ಮಧ್ಯಪ್ರದೇಶ, ರಾಜಸ್ಥಾನ ವಿಧಾನಸಭೆಗಳ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ಸುಳ್ಳುಗಳ ಆಧಾರದಲ್ಲಿ ಮತ ಕೇಳಿತು. ಆದರೆ, ಸುಳ್ಳುಗಳ ಬಲೂನ್ ಒಡೆದು ಹೋಯಿತು. ಹರಿಯಾಣದಲ್ಲಿಯೂ ಕಾಂಗ್ರೆಸ್ ನೆಲಕಚ್ಚಲಿದೆ. ಸ್ವತಃ ಕಾಂಗ್ರೆಸ್ ನಾಯಕರೇ ಈ ಮಾತು ಹೇಳಲು ಆರಂಭಿಸಿದ್ದಾರೆ' ಎಂದು ಮೋದಿ ಹೇಳಿದರು.

ಪ್ರಜಾ ಮತ
ಜನತಂತ್ರದ ಹಬ್ಬ

ತಮ್ಮ ನಾಯಕರಲ್ಲಿ ಒಗ್ಗಟ್ಟನ್ನು ತರಲಾರದ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಸ್ಥಿರತೆ ನೀಡಲು ಸಾಧ್ಯವೇ?
ನರೇಂದ್ರ ಮೋದಿ, ಪ್ರಧಾನಿ



ಹಿಸಾರ್‌ನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಜನರಿಗೆ ಕೈಮುಗಿದರು. ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ಉದಯನಿಧಿಗೆ ಡಿಸಿಎಂ ಪಟ್ಟ

ಚೆನ್ನೈ (ಪಿಟಿಐ): ಉದಯನಿಧಿ ಸ್ಟಾಲಿನ್ ಅವರಿಗೆ ಉಪ ಮುಖ್ಯಮುಖ್ಯಮಂತ್ರಿ ಸ್ಥಾನಕ್ಕೆ ಬಡ್ತಿ ನೀಡುವುದು, ವಿ. ಸೆಂಥಿಲ್ ಬಾಲಾಜಿ ಅವರನ್ನು ಮಂತ್ರಿ ಪರಿಷತ್ತಿಗೆ ಪುನಃ ಸೇರಿಸಿಕೊಳ್ಳುವುದು ಸೇರಿದಂತೆ ಸಂಪುಟದ ಪುನರ್ ರಚನೆಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮಾಡಿದ್ದ ಶಿಫಾರಸಿಗೆ ರಾಜ್ಯಪಾಲ ಆರ್.ಎನ್. ರವಿ ಅವರು ಅನುಮೋದನೆ ನೀಡಿದ್ದಾರೆ.

ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಾಲಾಜಿ ಅವರಿಗೆ ಈಚೆಗೆ ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿದೆ. ಮನೋ ತಂಗರಾಜನ್ ಸೇರಿದಂತೆ ಒಟ್ಟು ಮೂವರು ಸಚಿವರನ್ನು ಕೈಬಿಡಲಾಗಿದೆ.

ಉದ್ಯೋಗಕ್ಕಾಗಿ ಹಣ ಪ್ರಕರಣದಲ್ಲಿ ಇ.ಡಿ. ಅಧಿಕಾರಿಗಳು ತಮ್ಮನ್ನು ಬಂಧಿಸಿದ ಕೆಲವು ತಿಂಗಳುಗಳ ನಂತರ ಬಾಲಾಜಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಉದಯನಿಧಿ ಸ್ಟಾಲಿನ್ ಅವರನ್ನು ಉಪ ಮುಖ್ಯಮಂತ್ರಿಯಾಗಿಸಬೇಕು ಮತ್ತು ಅವರಿಗೆ ಯೋಜನೆ ಮತ್ತು ಅಭಿವೃದ್ಧಿ ಖಾತೆಯನ್ನು ಹೆಚ್ಚುವರಿಯಾಗಿ ನೀಡಬೇಕು ಎಂದು ಮುಖ್ಯಮಂತ್ರಿ ಶಿಫಾರಸು ಮಾಡಿದ್ದರು ಎಂದು ರಾಜಭವನದ ಪ್ರಕಟಣೆ ತಿಳಿಸಿದೆ.

ನಿಯೋಜಿತ ಮಂತ್ರಿಗಳ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮವು ರಾಜಭವನದಲ್ಲಿ ಭಾನುವಾರ ನಡೆಯಲಿದೆ.

ಮಹಾರಾಷ್ಟ್ರ: ದೀಪಾವಳಿ ಬಳಿಕ ಚುನಾವಣೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಒಟ್ಟು ಕ್ಷೇತ್ರಗಳು	288
ಎಸ್‌ಸಿ ಮೀಸಲು	29
ಎಸ್‌ಟಿ ಮೀಸಲು	25
ಒಟ್ಟು ಮತದಾರರು	9.59 ಕೋಟಿ
ಪುರುಷ ಮತದಾರರು	4.95 ಕೋಟಿ
ಮಹಿಳಾ ಮತದಾರರು	4.64 ಕೋಟಿ
ತೃತೀಯ ಲಿಂಗಿಗಳು	5,997

ಮುಂಬೈ: ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ದೀಪಾವಳಿ ಹಬ್ಬದ ಬಳಿಕ ಮತ್ತು ನವೆಂಬರ್ 26ರ ಮುನ್ನ ನಡೆಯುವ ಸಾಧ್ಯತೆ ಇದೆ.

ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಈ ಬಗ್ಗೆ ಸುಳಿವು ನೀಡಿದ್ದಾರೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಕೈಗೊಂಡಿರುವ ಪೂರ್ವಸಿದ್ಧತೆಗಳನ್ನು ಪರಿಶೀಲಿಸಲು ಮುಂಬೈಗೆ ಭೇಟಿ ನೀಡಿದ್ದ ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ನಾವು 11 ಪಕ್ಷಗಳ ನಾಯಕರನ್ನು ಭೇಟಿಯಾಗಿದ್ದೇವೆ. ಚುನಾವಣೆ ದಿನಾಂಕಗಳನ್ನು ಘೋಷಿಸುವ ಮುನ್ನ ದೀಪಾವಳಿ ಸೇರಿದಂತೆ ವಿವಿಧ ಹಬ್ಬಗಳನ್ನು ಸಹ ಪರಿಗಣಿಸಬೇಕು ಎಂದು ಕೋರಿದ್ದಾರೆ. ಹಬ್ಬದ ವೇಳೆ ರಜೆಗಳಿರುವುದರಿಂದ, ಮತದಾನ ಪ್ರಮಾಣ ಇಳಿಕೆಗೆ ಕಾರಣವಾಗಬಹುದು ಎನ್ನುವುದನ್ನು ಗಮನಕ್ಕೆ ತಂದಿದ್ದಾರೆ' ಎಂದು ವಿವರಿಸಿದರು.

'ಮಹಾರಾಷ್ಟ್ರ ವಿಧಾನಸಭೆಯ ಅವಧಿಯು ನವೆಂಬರ್ 26ಕ್ಕೆ ಅಂತ್ಯಗೊಳ್ಳಲಿದ್ದು, ಅದಕ್ಕೂ ಮೊದಲೇ ಚುನಾವಣೆ ನಡೆಯಬೇಕಿದೆ' ಎಂದು ತಿಳಿಸಿದರು.

'ನಗರ ಪ್ರದೇಶದ ಜನರ ನಿರಾಸಕ್ತಿ': ನಗರ ಪ್ರದೇಶದಲ್ಲಿನ ಜನರು ತಮ್ಮ ಮತ ಚಲಾಯಿಸಲು ನಿರಾಸಕ್ತಿ ಹೊಂದಿರುವ ಕುರಿತು ರಾಜೀವ್ ಕುಮಾರ್ ಅವರು ಕಳವಳ ವ್ಯಕ್ತಪಡಿಸಿದರು.

ಮುಂಬರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ನಗರ ಪ್ರದೇಶದಲ್ಲಿಯೂ ಮತದಾನ ಪ್ರಮಾಣ ಹೆಚ್ಚಿಸಲು ಚುನಾವಣಾ ಆಯೋಗವು ಕಾರ್ಯಪ್ರವೃತ್ತವಾಗಿದೆ ಎಂದು ಇದೇ ವೇಳೆ ಹೇಳಿದರು.

ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಕುರಿತ ಹೇಳಿಕೆಗೆ ಕಿಡಿ

ರಾಹುಲ್ ಸುಳ್ಳುಗಾರ: ಬಿಜೆಪಿ

ನವದೆಹಲಿ(ಪಿಟಿಐ): 'ಜ. 22ರಂದು ಅಯೋಧ್ಯೆಯಲ್ಲಿ ನಡೆದಿದ್ದ ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ 'ಹಾಡು–ಕುಣಿತ'ದ ಸಮಾರಂಭ ಆಗಿತ್ತು' ಎಂದಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಶನಿವಾರ ಟೀಕಾಪ್ರಹಾರ ಮಾಡಿದೆ.

'ರಾಹುಲ್ ದೊಡ್ಡ ಸುಳ್ಳುಗಾರ. ಈ ಹೇಳಿಕೆಯಿಂದ ಅವರ ಕುಟುಂಬದ ನಿಜ ಸ್ವರೂಪ ಹಾಗೂ ಹಿಂದೂ ಧರ್ಮ ಕುರಿತು ಹೊಂದಿರುವ ಅನಾದರ ತೋರಿಸುತ್ತದೆ' ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಅಮಿತಾಭ್ ಬಚ್ಚನ್, ಅಂಬಾನಿ, ಅದಾನಿ ಅವರನ್ನು ಆಹ್ವಾನಿಸಲಾಗಿತ್ತು. ಬಡವರು, ಕಾರ್ಮಿಕರು ಅಥವಾ ರೈತರನ್ನು ಕರೆದಿರಲಿಲ್ಲ. ಅಂದು ಹಾಡು, ಕುಣಿತ ಇತ್ತು' ಎಂಬ ರಾಹುಲ್ ಗಾಂಧಿ ಮಾತುಗಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದರ ಬೆನ್ನಲ್ಲೇ ಬಿಜೆಪಿ ಈ ಪ್ರತಿಕ್ರಿಯೆ ನೀಡಿದೆ.

ಹರಿಯಾಣದ ಬರ್ವಾಲಾದಲ್ಲಿ ಗುರುವಾರ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಈ ಮಾತುಗಳನ್ನಾಡಿದ್ದ ರಾಹುಲ್, 'ಇದೇ ಕಾರಣಕ್ಕೆ ಲೋಕಸಭೆ ಚುನಾವಣೆಯಲ್ಲಿ ಅಯೋಧ್ಯೆಯಲ್ಲಿ ಬಿಜೆಪಿ ಪರಾಭವಗೊಂಡಿತು. ಸಮಾಜವಾದಿ ಪಕ್ಷದ ಅವಧೇಶ್ ಸಿಂಗ್ ಆಯ್ಕೆಯಾದರು' ಎಂದೂ ಹೇಳಿದ್ದರು.

'ರಾಮ ಮಂದಿರ ಕುರಿತು ಕಾಂಗ್ರೆಸ್ ಪಕ್ಷ ಪದೇಪದೇ ಅಗೌರವ ತೋರುತ್ತಿದೆ. ಮಂದಿರ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗಿದ್ದ ಕಾರ್ಮಿಕರನ್ನು ಪ್ರಧಾನಿ ಸನ್ಮಾನಿಸಿದ್ದರು. ಅವರ ಮೇಲೆ ಹೂಮಳೆಗರೆದು ಅಭಿನಂದಿಸಿದ್ದರು' ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

30 ವರ್ಷದ ಹಿಂದೆ ವ್ಯಕ್ತಿ ಕಾಣೆ: ಅಸ್ಥಿಪಂಜರ ಪತ್ತೆ

ಮನೆ ಹಿತ್ತಲಿನಲ್ಲಿಯೇ ಗೋಚರ ● ಇಬ್ಬರು ಮಕ್ಕಳಿಂದಲೇ ಹತ್ಯೆ– ಆರೋಪ

ಪ್ರಜಾವಾಣಿ ವಾರ್ತೆ

ಲಖನೌ: 30 ವರ್ಷಗಳ ಹಿಂದೆ ನಾಪತ್ತೆಯಾಗಿದ್ದ ವ್ಯಕ್ತಿಯೊಬ್ಬರದ್ದು ಎನ್ನಲಾದ ಅಸ್ಥಿಪಂಜರ, ಅವರ ಮನೆಯ ಹಿತ್ತಲಿನಲ್ಲಿ ಪತ್ತೆಯಾಗಿದೆ.

ಹಾಥರಸ್ ಜಿಲ್ಲೆಯ ಗಿಲೋರ್‌ದಪುರ ಗ್ರಾಮದ ಬುದ್ಧಸಿಂಗ್ 1994ರಲ್ಲಿ ನಾಪತ್ತೆಯಾಗಿದ್ದರು. ಕುಟುಂಬಸ್ಥರು ಹಾಗೂ ಸಂಬಂಧಿಕರು, ಅವರ ಪತ್ತೆಗಾಗಿ ನಡೆಸಿದ್ದ ಪ್ರಯತ್ನಗಳು ಫಲ ನೀಡಿರಲಿಲ್ಲ.

ಬುದ್ಧಸಿಂಗ್ ಸನ್ಯಾಸ ಸ್ವೀಕರಿಸಿ, ಯಾವುದೋ ಆಶ್ರಮದಲ್ಲಿ ಇದ್ದಿರಬಹುದು ಎಂದು ಕುಟುಂಬಸ್ಥರು ಭಾವಿಸಿದ್ದರು. ಆದರೆ, ಈಗ ಅವರದ್ದು ಎನ್ನಲಾಗುತ್ತಿರುವ ಅಸ್ಥಿಪಂಜರ ಪತ್ತೆಯಾಗಿರುವುದು ಸಂಬಂಧಿಕರು ಹಾಗೂ ಗ್ರಾಮಸ್ಥರಿಗೆ ಆಘಾತ ತಂದಿದೆ.

ಬುದ್ಧಸಿಂಗ್ ಅವರನ್ನು ಅವರ ಮಕ್ಕಳೇ ಹತ್ಯೆ ಮಾಡಿ, ಮನೆ ಹಿತ್ತಲಲ್ಲಿ ಹೂತಿದ್ದರು ಎಂದು ಹೇಳಲಾಗುತ್ತಿದೆ.

ಸಿಂಗ್ ಅವರು ನಾಪತ್ತೆಯಾದಾಗ, ಕಿರಿಯ ಮಗ ಪಂಜಾಬಿ ಸಿಂಗ್ ಅವರಿಗೆ 9 ವರ್ಷ. ಇತ್ತೀಚೆಗೆ ಪೊಲೀಸರನ್ನು ಭೇಟಿ ಮಾಡಿದ್ದ ಪಂಜಾಬಿ ಸಿಂಗ್, 'ನನ್ನ ಇಬ್ಬರು ಅಣ್ಣಂದಿರೇ ತಂದೆಯನ್ನು ಕೊಂದಿದ್ದು, ಮೃತದೇಹವನ್ನು ಮನೆ ಹಿತ್ತಲಿನಲ್ಲಿ ಹೂತಿದ್ದರು. ಈ ಬಗ್ಗೆ ಬಾಯಿ ಬಿಡದಂತೆ ನನಗೆ ಬೆದರಿಕೆ ಹಾಕಿದ್ದರು' ಎಂದು ತಿಳಿಸಿದ್ದಾರೆ.

'ತಂದೆಯ ಹತ್ಯೆ ನಡೆದ ದಿನಾಂಕ ನನಗೆ ನೆನಪಿಲ್ಲ. ಅವರನ್ನು 1994ರಲ್ಲಿ ಹತ್ಯೆ ಮಾಡಲಾಗಿತ್ತು' ಎಂದು ಪೊಲೀಸರಿಗೆ ತಿಳಿಸಿದ್ದ ಪಂಜಾಬಿ ಸಿಂಗ್, 'ಮನೆಯ ಹಿತ್ತಲಿನಲ್ಲಿ ಶವ ಹೂತಿದ್ದ ನೆನಪಿದೆ' ಎಂಬ ಮಾಹಿತಿ ನೀಡಿದ್ದಾರೆ.

ಪೊಲೀಸರು, ಪಂಜಾಬಿ ಸಿಂಗ್ ಮನೆಯ ಹಿತ್ತಲಿನಲ್ಲಿ ಸುಮಾರು 15 ಅಡಿಗಳಷ್ಟು ಅಗೆದಾಗ, ಅಸ್ಥಿಪಂಜರ ಸಿಕ್ಕಿದೆ ಎಂದು ಮೂಲಗಳು ಹೇಳಿವೆ.

'ವಶಪಡಿಸಿಕೊಂಡಿರುವ ಅಸ್ಥಿಪಂಜರ ಸಿಂಗ್ ಅವರದ್ದೇ ಎಂಬುದನ್ನು ದೃಢಪಡಿಸುವುದಕ್ಕಾಗಿ ಡಿಎನ್‌ಎ ಪರೀಕ್ಷೆ ನಡೆಸಲಾಗುವುದು. ಈ ಕುರಿತು ತನಿಖೆಯನ್ನು ನಡೆಸಲಾಗುತ್ತಿದೆ' ಎಂದು ಹಾಥರಸ್‌ನ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಶುಕ್ರವಾರ ತಿಳಿಸಿದ್ದಾರೆ.



ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಶನಿವಾರ ದುರ್ಗಾ ಪೂಜೆ ಅಂಗವಾಗಿ ಕಲಾವಿದರು ಮಹಿಷಾಸುರ ಮರ್ದಿನಿ ನೃತ್ಯರೂಪಕ ಪ್ರದರ್ಶಿಸಿದರು ಪಿಟಿಐ ಚಿತ್ರ

ಮಣಿಪುರ ಬಂದ್: ಜನಜೀವನಕ್ಕೆ ಅಡ್ಡಿ

ಇಂಫಾಲ (ಪಿಟಿಐ): ಕುಕಿ–ಜೊ ಸಮುದಾಯಕ್ಕೆ ಸೇರಿದ ಸಂಘಟನೆಗಳು ಕರೆ ನೀಡಿದ್ದ ಬಂದ್ ಕಾರಣದಿಂದಾಗಿ ಮಣಿಪುರದ ಚುರಾಚಾಂದ್‌ಪುರ ಮತ್ತು ಕಾಂಗ್‌ಪೊಕ್‌ಪಿ ಜಿಲ್ಲೆಗಳಲ್ಲಿ ಶನಿವಾರ ಜನಜೀವನಕ್ಕೆ ಅಡ್ಡಿ ಉಂಟಾಯಿತು. ಜಿರಿಬಾಮ್‌ನ ಗ್ರಾಮವೊಂದರಲ್ಲಿ ಹಿಂಸಾಚಾರ ನಡೆಯಿತು.

ಉಗ್ರರು ಗಡಿಯಾಚೆಯಿಂದ ರಾಜ್ಯ ಪ್ರವೇಶಿಸುತ್ತಿದ್ದಾರೆ ಎಂದು ಭದ್ರತಾ ಸಲಹೆಗಾರ ಕುಲದೀಪ್ ಸಿಂಗ್ ಅವರು ಹೇಳಿದ್ದನ್ನು ಖಂಡಿಸಿ ಈ ಬಂದ್‌ಗೆ ಕರೆ ನೀಡಲಾಗಿತ್ತು. ಎರಡೂ ಜಿಲ್ಲೆಗಳಲ್ಲಿ ಮಾರುಕಟ್ಟೆಗಳು ಹಾಗೂ ವಾಣಿಜ್ಯ ಮಳಿಗೆಗಳು ಬಾಗಿಲು ಮುಚ್ಚಿದ್ದವು. ರಸ್ತೆಗಳು ವಾಹನಗಳಿಲ್ಲದೆ ಬಿಕೊ ಎನ್ನುತ್ತಿದ್ದವು ಎಂದು ಅಧಿಕಾರಿಗಳು ಹೇಳಿದ್ದಾರೆ. ಭಾನುವಾರವೂ ಬಂದ್ ಇರಲಿದೆ.

ಜಿರಿಬಾಮ್ ಜಿಲ್ಲೆಯ ಗ್ರಾಮವೊಂದರಲ್ಲಿ ಹಿಂಸಾಚಾರ ನಡೆದಿದೆ. ಶಸ್ತ್ರಸಜ್ಜಿತ ವ್ಯಕ್ತಿಗಳು ಮೊಂಗ್‌ಬಂಗ್ ಗ್ರಾಮದ ಮೇಲೆ ಸನಿಹದ ಬೆಟ್ಟಗಳಿಂದ ಮನಬಂದಂತೆ ಗುಂಡು ಹಾರಿಸಿದ್ದಾರೆ. ಇದಕ್ಕೆ ಗ್ರಾಮದ ಸ್ವಯಂಸೇವಕರು ಕೂಡ ತಿರುಗೇಟು ನೀಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಹಿಂಸಾಚಾರ ನಡೆದ ನಂತರ ಮಹಿಳೆಯರು, ಮಕ್ಕಳು ಮತ್ತು ಹಿರಿಯರನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸ್ಫೋಟಕ ಜಪ್ತಿ: ಮಣಿಪುರದ ಮೂರು ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸಿದ ಭದ್ರತಾ ಪಡೆಗಳು ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ಜಪ್ತಿ ಮಾಡಿವೆ.

ಕಾಂಗ್ಪೋಕ್ಪಿ ಜಿಲ್ಲೆಯಲ್ಲಿ ಕಾರ್ಯಾಚರಣೆ ನಡೆಸಿ ಎರಡು ರೈಫಲ್, ಪಿಸ್ತೂಲ್, 4 ಗ್ರೆನೇಡ್‌ಗಳು, 2 ಡಿಟೊನೇಟರ್‌ಗಳು ಮತ್ತು ದೇಸಿ ಫಿರಂಗಿ ಮತ್ತು ಇನ್ನೊಂದು ಅತ್ಯಾಧುನಿಕ ಫಿರಂಗಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ನಾಲ್ವರು ಯೋಧರು, ಪೊಲೀಸ್ ಅಧಿಕಾರಿಗೆ ಗಾಯ

ಜಮ್ಮು–ಕಾಶ್ಮೀರ: ಇಬ್ಬರು ಉಗ್ರರು ಹತ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯ ಆದಿಗಂ ಪ್ರದೇಶದಲ್ಲಿ ಶನಿವಾರ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಉಗ್ರರು ಹತರಾಗಿದ್ದರೆ, ನಾಲ್ವರು ಯೋಧರು ಮತ್ತು ಒಬ್ಬರು ಹಿರಿಯ ಪೊಲೀಸ್ ಅಧಿಕಾರಿ ಗಾಯಗೊಂಡಿದ್ದಾರೆ.

ಆದಿಗಂ ಗ್ರಾಮದ ಬಳಿ ಉಗ್ರರು ಅಡಗಿರುವ ಕುರಿತು ಖಚಿತ ಮಾಹಿತಿ ಆಧರಿಸಿ ಸೇನೆ, ಕೇಂದ್ರೀಯ ಮೀಸಲು ಪೊಲೀಸ್ ಪಡೆ, ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಪಡೆ ಜಂಟಿಯಾಗಿ ಕಾರ್ಯಾಚರಣೆ ಹಮ್ಮಿಕೊಂಡಿತ್ತು. ಜಂಟಿ ಪಡೆ ಬರುವುದು ತಿಳಿದ ಉಗ್ರರು ಗುಂಡಿನ ದಾಳಿ ನಡೆಸಿದರು. ಈ ವೇಳೆ ಪ್ರತಿದಾಳಿ ನಡೆಸಲಾಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಈ ವೇಳೆ ಇಬ್ಬರು ಉಗ್ರರನ್ನು ಹತ್ಯೆ ಮಾಡಲಾಗಿದ್ದು, ಅವರಿಂದ ಎರಡು ಎ.ಕೆ ರೈಫಲ್‌ಗಳು ಸೇರಿದಂತೆ ಕೆಲ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸೇನಾ ಉತ್ತರ ವಿಭಾಗದ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಎಂ.ವಿ.ಸುಚೆಂದ್ರ ಕುಮಾರ್ ತಿಳಿಸಿದ್ದಾರೆ.

ಗಾಯಗೊಂಡವರನ್ನು ಕುಲ್ಗಾಮ್‌ನ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮುಮ್ತಾಜ್ ಅಲಿ ಭಟ್ಟಿ ಮತ್ತು ಯೋಧರಾದ ಮೋಹನ್ ಶರ್ಮಾ, ಸೋಹನ್ ಕುಮಾರ್, ಯೋಗಿಂದರ್, ಮೊಹಮ್ಮದ್ ಇಸ್ರಾನ್ ಎಂದು ಗುರುತಿಸಲಾಗಿದೆ. ಅವರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಅವರು ಹೇಳಿದ್ದಾರೆ.

ದಶಕದ ಬಳಿಕ ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿದ್ದು, ಈಗಾಗಲೇ ಎರಡು ಹಂತದ ಮತದಾನ ಮುಗಿದಿದೆ. ಕೊನೆಯ ಹಂತದ ಮತದಾನ ಅಕ್ಟೋಬರ್ 1ರಂದು ನಿಗದಿಯಾಗಿದ್ದು, ಮತ ಎಣಿಕೆ ಅಕ್ಟೋಬರ್ 8 ರಂದು ನಡೆಯಲಿದೆ. ಕೆಲ ತಿಂಗಳಿಂದ ಕಣಿವೆ ಪ್ರದೇಶದಲ್ಲಿ ಉಗ್ರರ ದಾಳಿ ಹೆಚ್ಚಾಗಿದ್ದು, ಸೇನೆ, ಪೊಲೀಸರು ಜಂಟಿಯಾಗಿ ಶೋಧ ಕಾರ್ಯಾಚರಣೆಯನ್ನೂ ತೀವ್ರಗೊಳಿಸಿದ್ದಾರೆ.

ಲಾಡು ಕಲಬೆರಕೆ ಪ್ರಕರಣ; ಟಿಟಿಡಿ ಸಿಬ್ಬಂದಿ ಜತೆ ಚರ್ಚೆ

ತಿರುಪತಿ: ತನಿಖೆ ಆರಂಭಿಸಿದ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಪತಿಯ ಲಾಡು ಕಲಬೆರಕೆ ಪ್ರಕರಣದ ತನಿಖೆಗೆ ಆಂಧ್ರಪ್ರದೇಶ ಸರ್ಕಾರ ನೇಮಕ ಮಾಡಿರುವ ವಿಶೇಷ ತಂಡವು (ಎಸ್‌ಐಟಿ) ಶನಿವಾರ ತನ್ನ ಕೆಲಸ ಆರಂಭಿಸಿದೆ. ಎಸ್‌ಐಟಿ ಮುಖ್ಯಸ್ಥ, ಗುಂಟೂರು ಐ.ಜಿ ಸರ್ವಶ್ರೇಷ್ಠ ತ್ರಿಪಾಠಿ ಅವರು ತಮ್ಮ ತಂಡದ ಜೊತೆ ತಿರುಪತಿ ತಲುಪಿದ್ದಾರೆ.

ಟಿಟಿಡಿಯ ಕೆಲವು ಸಿಬ್ಬಂದಿ ಜೊತೆ ಎಸ್‌ಐಟಿ ತಂಡವು ಚರ್ಚೆ ನಡೆಸಿತು. ಅಲ್ಲದೆ, ತಮಿಳುನಾಡು ಮೂಲದ ಎ.ಆರ್. ಡೈರಿ ವಿರುದ್ಧ ದೂರು ದಾಖಲಾಗಿರುವ ತಿರುಪತಿ ಪಶ್ಚಿಮ ಪೊಲೀಸ್ ಠಾಣೆಯ ಸಿಬ್ಬಂದಿ ಜೊತೆಯೂ ಎಸ್‌ಐಟಿ ತಂಡವು ಮಾತುಕತೆ ನಡೆಸಿತು.

ಟಿಟಿಡಿ ಕಾರ್ಯನಿರ್ವಹಣಾ ಅಧಿಕಾರಿ ಜೆ. ಶ್ಯಾಮಲ ರಾವ್ ಅವರ ಜತೆ ತ್ರಿಪಾಠಿ ಅವರು ಮಾತುಕತೆ ನಡೆಸಿದರು. ಎಸ್‌ಐಟಿ ಸದಸ್ಯರು ಮುಂದಿನ ಮೂರು ಅಥವಾ ನಾಲ್ಕು ದಿನಗಳವರೆಗೆ ತಿರುಮಲ ದೇವಸ್ಥಾನದಲ್ಲಿಯೇ ಇರಲಿದ್ದಾರೆ ಎಂದು ಗೊತ್ತಾಗಿದೆ.

ಧರ್ಮನಿರಪೇಕ್ಷತೆ ವಿಚಾರವಾಗಿ ವೈಎಸ್‌ಆರ್‌ಸಿಪಿ ನಾಯಕ ಜಗನ್ ಮೋಹನ್ ರೆಡ್ಡಿ ಆಡಿರುವ ಮಾತುಗಳನ್ನು ಉಲ್ಲೇಖಿಸಿ ಅವರ ವಿರುದ್ಧ ಟಿಡಿಪಿ ವಾಗ್ದಾಳಿ ತೀವ್ರಗೊಳಿಸಿದೆ.

'ಜಗನ್ ರೆಡ್ಡಿ ಅವರಿಗೆ ಹಿಂದೂ ಧರ್ಮದಲ್ಲಿ ನಂಬಿಕೆ ಇಲ್ಲ, ಅವರಿಗೆ ತಿರುಮಲಕ್ಕೆ ತೆರಳಲು ಇಷ್ಟವಿಲ್ಲ. ಹೀಗಾಗಿ ಅವರು ಸೆಕ್ಷನ್ 30ನ್ನು ನೆಪವಾಗಿ ಉಲ್ಲೇಖಿಸುತ್ತಿದ್ದಾರೆ. ಅವರು ತಿರುಮಲಕ್ಕೆ ತೆರಳುವುದನ್ನು ಯಾರೂ ತಡೆದಿಲ್ಲ' ಎಂದು ರಾಜ್ಯದ ಗೃಹ ಸಚಿವೆ ವಂಗಲಪುಡಿ ಅನಿತಾ ಹೇಳಿದರು.

'ತಿರುಮಲಕ್ಕೆ ಭೇಟಿ ನೀಡುವುದಾಗಿ ಹೇಳಿದ ನಂತರ ಅವರು ಒಪ್ಪಲಾಗದ ಕಾರಣ ನೀಡಿ ಹಿಂದೆ ಸರಿದರು. ಜಗನ್ ರೆಡ್ಡಿ ಅವರು 10 ಸಾವಿರ ಜನರೊಂದಿಗೆ ತಿರುಮಲಕ್ಕೆ ಭೇಟಿ ನೀಡುತ್ತಾರೆ ಎಂಬ ಪ್ರಚಾರವು ಸಾಮಾಜಿಕ ಜಾಲತಾಣಗಳ ಮೂಲಕ ನಡೆದಿತ್ತು. ಅವರ ಭೇಟಿಗೆ ಅಡ್ಡಿಪಡಿಸುವುದಾಗಿ ಸಾರ್ವಜನಿಕ ಸಂಘಟನೆಗಳು, ಧಾರ್ಮಿಕ ಸಂಘಟನೆಗಳು ಹೇಳಿದ್ದವು. ಹೀಗಾಗಿ ಪೊಲೀಸರು, ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗ ಉಂಟಾಗದಿರಲಿ ಎಂಬ ಕಾರಣಕ್ಕೆ ಪೊಲೀಸ್ ಕಾಯ್ದೆಯ ಸೆಕ್ಷನ್ 30ನ್ನು ಜಾರಿಗೊಳಿಸಿದರು. ಶಾಂತಿಗೆ ಭಂಗ ಉಂಟಾಗದಿರಲಿ ಎಂದು ಇದನ್ನು ಯಾವಾಗಲೂ ಬಳಕೆ ಮಾಡಲಾಗುತ್ತದೆ. ಜಗನ್ ಅವರು ಮಾಧ್ಯಮಗಳ ಬಳಿ ಇದನ್ನು ತಪ್ಪಾಗಿ ಉಲ್ಲೇಖಿಸಿ, ಸುಳ್ಳು ಹೇಳಿ ಜನರನ್ನು ತಪ್ಪುದಾರಿಗೆ ಎಳೆಯಲು ಯತ್ನಿಸುತ್ತಿದ್ದಾರೆ' ಎಂದು ದೂರಿದರು.

ಧರ್ಮನಿರಪೇಕ್ಷತೆ ವಿಚಾರವಾಗಿ ಆಡಿರುವ ಮಾತುಗಳಿಗಾಗಿ ಜಗನ್ ಅವರನ್ನು ತಕ್ಷಣವೇ ದೇಶದಿಂದ ಹೊರಹಾಕಬೇಕು ಎಂದು ಇಂಧನ ಸಚಿವ ಗೊಟ್ಟಿಪತಿ ರವಿ ಕುಮಾರ್ ಆಗ್ರಹಿಸಿದರು. 'ಜಗನ್ ಅವರು, ಎಂತಹ ದೇಶದಲ್ಲಿ ನಾವಿದ್ದೇವೆ ಎಂದು ಆಡಿರುವ ಮಾತನ್ನು ತಕ್ಷಣವೇ ಹಿಂಪಡೆಯಬೇಕು. ಪ್ರತಿ ಧರ್ಮವೂ ಕೆಲವು ತತ್ವ ಮತ್ತು ನಂಬಿಕೆಗಳನ್ನು ಹೊಂದಿರುತ್ತದೆ. ಅವುಗಳನ್ನು ಗೌರವಿಸುವುದರಿಂದ ಮಾತ್ರವೇ ದೇಶದ ಉತ್ತಮ ಪ್ರಜೆಯಾಗಬಹುದು. ಧಾರ್ಮಿಕ ನಂಬಿಕೆ ಹಾಗೂ ಸಂಪ್ರದಾಯಗಳನ್ನು ಹಗುರವಾಗಿ ಕಾಣುವ ಮೂಲಕ ಜಗನ್ ಅವರು ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿರುವುದು ದುರದೃಷ್ಟಕರ' ಎಂದು ರವಿ ಕುಮಾರ್ ಹೇಳಿದರು.

ವೈಎಸ್‌ಆರ್‌ಸಿಪಿ ನಾಯಕರಿಂದ ಪ್ರಾಯಶ್ಚಿತ್ತ ಕಾರ್ಯ

ಅಮರಾವತಿ(ಪಿಟಿಐ): ತಿರುಪತಿ ದೇವಸ್ಥಾನದ ಪ್ರಸಾದವಾದ ಲಾಡು ತಯಾರಿಕೆಯಲ್ಲಿ ಕಲಬೆರಕೆ ತುಪ್ಪ ಬಳಸಲಾಗಿದೆ ಎಂದು ಸುಳ್ಳು ಆರೋಪ ಮಾಡುವ ಮೂಲಕ, ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು 'ಪಾಪ' ಮಾಡಿದ್ದಾರೆ ಹಾಗೂ ಈ ಪಾಪ ಪರಿಹಾರಕ್ಕಾಗಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಶನಿವಾರ ಪ್ರಾಯಶ್ಚಿತ್ತ ವಿಧಿ ಕೈಗೊಂಡಿದ್ದರು.

'ಮುಖ್ಯಮಂತ್ರಿ ನಾಯ್ಡು ಅವರ ತಪ್ಪಿನಿಂದಾದ ಅಪಚಾರ ನಿವಾರಣೆಗಾಗಿ ಪ್ರಾಯಶ್ಚಿತ್ತ ಹಾಗೂ ಕ್ಷಮಾಪಣೆ ವಿಧಿಗಳನ್ನು ಕೈಗೊಳ್ಳಬೇಕು' ಎಂದು ಪಕ್ಷದ ಮುಖ್ಯಸ್ಥ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಕರೆ ನೀಡಿದ್ದರು.

ಪಕ್ಷದ ಹಿರಿಯ ನಾಯಕ ಹಾಗೂ ಟಿಟಿಡಿ ಮಾಜಿ ಅಧ್ಯಕ್ಷ ಬಿ.ಕರುಣಾಕರ ರೆಡ್ಡಿ ಅವರು ತಿರುಪತಿಯ ತಾತಯ್ಯ ಗುಂಟದಲ್ಲಿರುವ ಗಂಗಮ್ಮ ದೇವಸ್ಥಾನದಲ್ಲಿ ನಡೆದ ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಂಡಿದ್ದರು.

ಮಾಜಿ ನೀರಾವರಿ ಸಚಿವ ಅಂಬಟಿ ರಾಮ್‌ಬಾಬು, ಗುಂಟೂರಿನ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆದ ಪೂಜಾ ವಿಧಿಗಳಲ್ಲಿ ಪಾಲ್ಗೊಂಡಿದ್ದರು.

ಏಲೂರು ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ವಿಶೇಷ ಪೂಜಾ ಕಾರ್ಯಗಳಲ್ಲಿಯೂ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಬೆಂಬಲಿಗರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಎಟಿಎಂ ದರೋಡೆ ₹67 ಲಕ್ಷ ವಶ


ನಮಕ್ಕಲ್ (ತಮಿಳುನಾಡು) (ಪಿಟಿಐ): ಕೇರಳದ ತ್ರಿಶೂರ್ ಜಿಲ್ಲೆಯಲ್ಲಿ ನಡೆದ ಎಟಿಎಂ ದರೋಡೆ ಪ್ರಕರಣದ ಆರು ಮಂದಿ ಆರೋಪಿಗಳ ವಿರುದ್ಧ ತಮಿಳುನಾಡಿನ ನಮಕ್ಕಲ್ ಜಿಲ್ಲೆಯ ವೆಪ್ಪಡೈ ಪೊಲೀಸರು ಶನಿವಾರ ಪ್ರಕರಣ ದಾಖಲಿಸಿದ್ದಾರೆ.

ಆರೋಪಿಗಳಿಂದ ₹67 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಅವರ ವಿರುದ್ಧ ಕೊಲೆ ಯತ್ನ, ಕ್ರಿಮಿನಲ್ ಪಿತೂರಿ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಕೇರಳದ ಎಟಿಎಂಗಳ ದರೋಡೆಯಲ್ಲಿ ಆರೂ ಮಂದಿಯ ಪಾತ್ರ ಇದೆ. ಅವರು ದರೋಡೆ ನಡೆಸಲು ತ್ರಿಶೂರ್‌ಗೆ ತೆರಳುವ ಮೊದಲು ಚೆನ್ನೈನಲ್ಲಿ ಒಂದುಗೂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಬಿಐಗೆ ಸೇರಿದ ಮೂರು ಎಟಿಎಂಗಳಿಂದ ಈ ತಂಡವು ಅಂದಾಜು ₹70 ಲಕ್ಷ ದೋಚಿತ್ತು.

ಪ್ರಜಾವಾಣಿ
ಭಾನುವಾರದ ಪುರವಣಿ
10
ಭಾನುವಾರ, 29 ಸೆಪ್ಟೆಂಬರ್ 2024

ಭರವಸೆ ಮೂಡಿಸದ ಹೆಜ್ಜೆಗಳು


ಶೋಲಾ ಕಾಡು ಚಿತ್ರಗಳು: ಲೇಖಕರವು

ಕೃಪಾಕರ–ಸೇನಾನಿ

ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಭಾರತೀಯ ಅರಣ್ಯ ಸೇವೆಯ ಅಧಿಕಾರಿಯೊಬ್ಬರು ಈಚೆಗೆ ಸಿಕ್ಕಿದ್ದರು. ಕೇಂದ್ರ ಸರ್ಕಾರದ ಕ್ರಿಯಾಶೀಲತೆಯನ್ನು, ತ್ವರಿತವಾಗಿ ಕಾರ್ಯರೂಪಕ್ಕೆ ಬರುತ್ತಿರುವ ಯೋಜನೆಗಳನ್ನು ಉತ್ಸಾಹದಿಂದ ವಿವರಿಸುತ್ತಿದ್ದರು.

ಮುಂದುವರಿದು, ಸದಸ್ಯರಾಗಿದ್ದ ಸಮಿತಿಯು ಅಂಡಮಾನ್–ನಿಕೋಬಾರ್ ದ್ವೀಪಕ್ಕೆ ಸಂಬಂಧಿಸಿದ ಯೋಜನೆಯ ಕಡತಗಳಿಗೆ ಕೆಲವೇ ಗಂಟೆಗಳಲ್ಲಿ ಅನುಮೋದನೆ ನೀಡಿದ ಸಾಧನೆಯನ್ನು, ಆ ಅಭಿವೃದ್ಧಿಗೆ ತೊಡಕಾಗಿರುವ ಕಾನೂನು ಪೀಡೆಗಳನ್ನು ಹೇಗೆ ಬದಿಗೆ ಸರಿಸಿ ಹಸಿರು ನಿಶಾನೆ ತೋರಿದೆವು ಎಂದು ಭಾವಪರವಶರಾಗಿ ಹೇಳಿದರು.

ಅಂಡಮಾನ್‌ನ ಉತ್ತರದಲ್ಲಿರುವ ನಿಕೋಬಾರ್ ದ್ವೀಪ. ಅಲ್ಲಿ ದೈತ್ಯ ಮರಗಳಿಂದ ತುಂಬಿದ ಕತ್ತಲೆಯ ಕಾಡು. ದ್ವೀಪದ ಸುತ್ತಲೂ ಸ್ಫಟಿಕದಷ್ಟು ಸ್ವಚ್ಛವಾದ ಮರಳಿನ ಮೈದಾನ. ಮರಳಿನ ಮೈದಾನದ ಮೇಲೆ ತೇಲಿ ಬರುವ ಅಲೆಗಳು ಸದ್ದಿಲ್ಲದೆ ಮರಳಿ ಸಮುದ್ರಕ್ಕೆ ಹಿಂದಿರುಗುವ ದೃಶ್ಯಗಳು ಸ್ವರ್ಗ ಸದೃಶ.

ಈ ಕತ್ತಲ ಕಾಡಿನೊಳಗಿಂದ ಮೆಗಾಪೋಡ್ ಹಕ್ಕಿಗಳ ಕಲರವ. ನಾರ್ಕೊಂಡಮ್ ಹಾರ್ನ್‌ಬಿಲ್ ಹಕ್ಕಿಗಳ ರೆಕ್ಕೆಗಳ ಸದ್ದು. ಸೂರ್ಯ ಮುಳುಗುವ ಹೊತ್ತಿಗೆ ಕಣ್ಣುಜ್ಜಿಕೊಂಡು ಬೆಳಗಾಯಿತೆಂದು ಪೊಟರೆಗಳಿಂದ ಇಣುಕುವ ಅಂಡಮಾನ್ ಗೂಬೆಗಳು. ಒಣಗಿದ ಎಲೆಗಳ ರಾಶಿಯ ನಡುವೆ ಸದ್ದಿಲ್ಲದೆ ಸರಿಯುವ ಕಾಳಿಂಗ ಸರ್ಪಗಳು.

ಗಂಧರ್ವ ಲೋಕದಂತಿದ್ದ ಆ ಪುಟ್ಟ ದ್ವೀಪದ 32,371 ಎಕರೆ ಕಾಡನ್ನು ಎರಡು ವರ್ಷಗಳ ಹಿಂದೆ ಬುಲ್ಡೋಜರ್‌ಗಳು ಕೆಲವೇ ದಿನಗಳಲ್ಲಿ ನೆಲಸಮ ಮಾಡಿದವು. ಹೆಚ್ಚು ಕಡಿಮೆ ದ್ವೀಪವೇ ಬಯಲಾಯಿತು. 72,000 ಕೋಟಿ ರೂಪಾಯಿಗಳ ಯೋಜನೆ ಕೆಲಸ ಆರಂಭಿಸಿತು. ಬಂದರು, ವಿಮಾನ ನಿಲ್ದಾಣ, ಸೋಲಾರ್ ವಿದ್ಯುತ್ ಉತ್ಪಾದನಾ ಘಟಕ ಮತ್ತು ನಗರ ನಿವೇಶನಗಳ ಮಹಾ ಯೋಜನೆ. ಅಭಿವೃದ್ಧಿಯ ಗದ್ದಲಕ್ಕೆ ಬೆಚ್ಚಿಬಿದ್ದ ಶೋಮ್ಪೆನ್ ಬುಡಕಟ್ಟು ಜನ ಎತ್ತ ಹೋದರೋ ಗೊತ್ತಿಲ್ಲ. ಕೇವಲ 229 ಮಂದಿಯಷ್ಟೇ ಉಳಿದಿರುವ, ಕಣ್ಮರೆಗೆ ಸಿದ್ಧತೆ ನಡೆಸಿರುವ ಅಪರೂಪದ ಸಮುದಾಯವದು.

ಇದಾವುದನ್ನೂ ಅರಿಯದೆ ದೆಹಲಿಯಲ್ಲಿ ಕುಳಿತು ವಿಡಿಯೊ ಕಾನ್ಫರೆನ್ಸ್ ಮೂಲಕ ತ್ವರಿತಗತಿಯಲ್ಲಿ ಯೋಜನೆಗೆ ಅನುಮತಿ ನೀಡಿದ್ದನ್ನು ಅವರು ಸಾಧನೆ ಎಂದು ಭಾವಿಸಿದ್ದಂತೆ ಕಂಡಿದ್ದರು. ಮಹಾ ದಕ್ಷ ಮತ್ತು ಪರಿಣಾಮಕಾರಿ ತೀರ್ಮಾನಗಳಿಗೆ ಹೆಸರಾದ ಅನೇಕ ನಾಯಕರು ಚರಿತ್ರೆಯ ಕಾಲಘಟ್ಟದಲ್ಲಿ ಖಳನಾಯಕರಾಗಿ ಉಳಿದಿರುವ ಅನೇಕ ಉದಾಹರಣೆಗಳಿವೆ. ಮುಂದೊಂದು ದಿನ ಆ ಪಟ್ಟಿಗೆ ಇವರೂ ಸೇರಬಹುದೇನೋ. ಅಂಡಮಾನ್ ದ್ವೀಪಗಳ ವಿಶೇಷತೆ, ಅಲ್ಲಿಯ ಜೀವ ಪರಿಸರ, ನೆಲೆಸಿರುವ ಬುಡಕಟ್ಟು ಜನಾಂಗಗಳ ಬಗ್ಗೆ ಅವರಿಗೆ ಅಲ್ಪಸ್ವಲ್ಪ ಜ್ಞಾನವಿದ್ದು, ಕನಿಷ್ಠ ಕಳಕಳಿಯಿದ್ದಿದ್ದಲ್ಲಿ ಖಂಡಿತವಾಗಿ ಆ ಪಾಪದ ಕೃತ್ಯದಲ್ಲಿ ಪಾಲ್ಗೊಳ್ಳುತ್ತಿರಲಿಲ್ಲವೇನೋ. ಅಥವಾ ಸತ್ಯದ ಪ್ರಜ್ಞೆ ಬೇಕೆಂದೇ ನಿದ್ರಿಸಿಬಿಟ್ಟಿರಬಹುದು. ವೈಜ್ಞಾನಿಕ ಒಳನೋಟ, ತಾತ್ವಿಕ ಚಿಂತನೆಗಳಿಲ್ಲದಿದ್ದಾಗ ಇಂತಹ ಅನಾಹುತಗಳು ಜರುಗುವುದು ಸಹಜ.

ಇಷ್ಟು ಕಠಿಣವಾಗಿ ಮಾತನಾಡಲು ಕಾರಣವಿದೆ. ಅಂಡಮಾನ್–ನಿಕೋಬಾರ್ ದ್ವೀಪ ಸಮೂಹ ಸಂಕೀರ್ಣ ಜೈವಿಕ ವೈವಿಧ್ಯತೆಯ ಪ್ರದೇಶ. ಭಾರತ ಮತ್ತು ಏಷ್ಯಾ ಖಂಡದ ಈಶಾನ್ಯ ದೇಶಗಳ ಜೀವಸಂಕುಲಗಳು ಇಲ್ಲಿ ನೆಲೆಕಂಡಿವೆ.

ನಾರ್ಕೊಂಡಮ್ ಹಾರ್ನ್‌ಬಿಲ್ ಇಲ್ಲಷ್ಟೇ ಜೀವಿಸುವ ಹಕ್ಕಿಗಳು. ಮೆಗಾಪೋಡ್ ಹಕ್ಕಿಗಳದ್ದು ಇನ್ನಷ್ಟು ವಿಶೇಷ. ಇವು ದೂರಕ್ಕೆ ಹಾರಲಾರದ ಹಕ್ಕಿಗಳು. ಪುಟ್ಟ ದಿಬ್ಬಗಳ ನಡುವೆ ಇವುಗಳ ಗೂಡು. ಆದರೆ ಮೊಟ್ಟೆಗಳಿಗೆ ಕಾವು ಕೊಡುವ ಕಾಯಕ ಅವುಗಳಿಗಿಲ್ಲ. ಉದುರಿದ ಎಲೆಗಳು ಕೊಳೆತು ವಿಘಟಿಸುವ ಪ್ರಕ್ರಿಯೆಯಲ್ಲಿ ಉತ್ಪತ್ತಿಯಾಗುವ ಶಾಖಕ್ಕೆ ಮೊಟ್ಟೆಗಳು ಬಿರಿದು ಮರಿಗಳು ಹೊರಬರುತ್ತವೆ.

ಇದೇ ರೀತಿ ಅಂಡಮಾನ್ ಮಾಸ್ಕ್ಡ್ ಗೂಬೆಗಳು ಇಲ್ಲಿಗಷ್ಟೇ ಸೀಮಿತ.

ಇದಲ್ಲದೆ ಅರಣ್ಯದೊಂದಿಗೆ ನಿರಂತರವಾಗಿ ಸಮುದ್ರ ಇಟ್ಟುಕೊಂಡಿರುವ ಸಂವಾದವನ್ನು ಇಂದಿಗೂ ಯಾರೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ.

ಲಕ್ಷ ಲಕ್ಷ ವರ್ಷಗಳಲ್ಲಿ ವಿಕಸಿಸುತ್ತ ರೂಪುಪಡೆದ ಜೀವಸಂಕುಲಗಳ ನೆಲೆಯನ್ನು ಧ್ವಂಸಗೊಳಿಸಿ, ಅಭಿವೃದ್ಧಿ ಎಂಬ ಭ್ರಮೆಗೆ ಅಡಿಪಾಯ ಹಾಕುವುದರಲ್ಲಿ ಏನಾದರೂ ಅರ್ಥವಿದೆಯೆ?

ಇದು ಅಂಡಮಾನ್‌ನ ಉತ್ತರ ನಿಕೋಬಾರ್‌ನ ದುರಂತ ಕಥೆ. ಸರ್ಕಾರಗಳು ಇಂತಹ ಮೂರ್ಖ ತೀರ್ಮಾನಗಳಿಗೆ ಸದಾ ಹಾತೊರೆಯುತ್ತಿರುತ್ತವೆ. ಕೆಲವು ವರ್ಷಗಳ ಹಿಂದೆ ಮಲೇಷ್ಯಾ ಸರ್ಕಾರದ ಯಾವುದೋ ರಾಜಕೀಯ ನಿಲುವಿಗೆ ಸಿಟ್ಟಾದ ಕೇಂದ್ರ, ಈಶಾನ್ಯ ರಾಜ್ಯಗಳ ಕಾಡುಗಳನ್ನು ಸವರಿ ಪಾಮ್ ಗಿಡಗಳನ್ನು ನೆಡುವಂತೆ ಆಜ್ಞಾಪಿಸಿತ್ತು. ಆ ಮೂಲಕ ಮಲೇಷ್ಯಾದಿಂದ ಆಮದಾಗುತ್ತಿದ್ದ ಪಾಮ್ ಎಣ್ಣೆ ಖರೀದಿಯನ್ನು ಸ್ಥಗಿತಗೊಳಿಸಿ ಅವರಿಗೆ ಪಾಠ ಕಲಿಸುವುದು ಉದ್ದೇಶವಾಗಿತ್ತು. ಇದು ಅವಿವೇಕದ ನಿರ್ಧಾರವೆ. ವ್ಯವಹಾರಿಕವಾಗಿ ಈ ತೀರ್ಮಾನ ಲಾಭದಾಯಕವಾಗಿರಲಿಲ್ಲ. ಜೊತೆಗೆ, ಈ ಅಮೂಲ್ಯ ಮಳೆ ಕಾಡುಗಳನ್ನು ಛಿದ್ರಗೊಳಿಸಿ ನಾವು ಬೆಳೆಸುವ ಪಾಮ್ ತೋಟಗಳು ಪರಿಸರಕ್ಕೆ ಹಾನಿಕರ.


ಮರದ ಮೇಲಿನ ಪಾಚಿ ಸಸ್ಯ

ಇದೇ ರೀತಿ ಲೇಹ್ ಲಡಾಖ್ ಕೇಂದ್ರಾಡಳಿತ ಪ್ರದೇಶಗಳಲ್ಲಿ ಗಣಿಗಾರಿಕೆ ಆರಂಭಿಸಲು ಸಿದ್ಧತೆ ನಡೆಸಿದೆ. ವಾಸ್ತವವಾಗಿ ಈ ಇಡೀ ವಲಯವೇ ಅತ್ಯಂತ ಸೂಕ್ಷ್ಮ. ಅಲ್ಲಿಯ ಹೆಚ್ಚಿನ ದೈತ್ಯ ಹಿಮಪರ್ವತಗಳಿಗಾಗಲಿ ಅಥವಾ ಗುಡ್ಡ ಕಣಿವೆಗಳಿಗಾಗಲಿ ಭದ್ರ ಅಡಿಪಾಯವಿಲ್ಲ. ಅವು ಪುಡಿಪುಡಿಯಾದ ಮಣ್ಣಿನಿಂದ ರೂಪುಗೊಂಡಿರುವ ಸ್ಥಿರತೆ ಇಲ್ಲದ ಪರ್ವತಗಳು. ಗಣಿಗಾರಿಕೆಯಲ್ಲಿ ಸಿಡಿಯುವ ಸದ್ದಿನ ಕಂಪನಕ್ಕೆ ಈ ಪರ್ವತಗಳು ಜಾರಬಹುದು. ಈ ಗುಡ್ಡಗಳ ನೆತ್ತಿಯಲ್ಲಿ ಕುಳಿತ ಮಂಜುಗೆಡ್ಡೆಗಳೇ ಅಲ್ಲಿನ ನೀರಿನ ಮೂಲ. ಇದಲ್ಲದೆ ಹಿಮಚಿರತೆಗಳ ನೆಲೆಯೂ ಹೌದು. ಈ ಅಪರೂಪದ ಜೀವಿಗಳನ್ನು ನೋಡಲೆಂದೇ ದೇಶ ವಿದೇಶಗಳಿಂದ ಅಲ್ಲಿಗೆ ಪ್ರವಾಸಿಗಳು ಭೇಟಿ ನೀಡುತ್ತಾರೆ. ಈ ಪ್ರವಾಸೋದ್ಯಮ ಸ್ಥಳೀಯ ಜನರ ಬದುಕಿಗೆ ಆಧಾರವಾಗಿದೆ. ಈ ಹಿನ್ನೆಲೆಯಲ್ಲಿ ಅಲ್ಲಿಯ ಜನ ಗಣಿ ಕೈಗಾರಿಕೆ ಬೇಡವೆಂದು ಕೈಮುಗಿದು ಕೇಳಿಕೊಳ್ಳುತ್ತಿದ್ದಾರೆ. ನಿರುತ್ತರ ಸರ್ಕಾರದ ಉತ್ತರವಾಗಿದೆ.

ಇದಲ್ಲದೆ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಭಾರತವನ್ನು ಈಗಾಗಲೇ 67 ಲಕ್ಷ ಕಿಲೋಮೀಟರ್ ಉದ್ದದ ರಸ್ತೆಗಳು, 132 ಸಾವಿರ ಕಿಲೋಮೀಟರ್ ರೈಲ್ವೆ ಹಳಿಗಳು ತುಂಡರಿಸಿವೆ. ಇದರಿಂದ ಮಾರ್ಗದ ಆಸುಪಾಸಿನ ಜೀವಪರಿಸರದ ನಿತ್ಯ ಚಟುವಟಿಕೆಗೆ ಧಕ್ಕೆಯಾಗಿದೆ. ಜೀವಿ ಜೀವಿಗಳ ನಡುವೆ ಜರುಗಲೇಬೇಕಿರುವ ಸಂವಾದ ಸಾಧ್ಯವಾಗುತ್ತಿಲ್ಲ.

ಇದರಿಂದ ಜಿನುಗುವ ಝರಿಗಳು, ಹರಿಯುವ ಹಳ್ಳಗಳು ತಮ್ಮ ಅಸ್ಮಿತೆಯನ್ನು ಕಳೆದುಕೊಂಡಿವೆ. ಅಭಿವೃದ್ಧಿಯ ನಕ್ಷೆಗಳು ತೋರುವ ದಿಕ್ಕಿಗೆ ಅವು ಹರಿಯಬೇಕಾದ ಸನ್ನಿವೇಶಗಳು ನಿರ್ಮಾಣವಾಗಿದೆ.

ಅಕ್ಟೋಬರ್ ಮೊದಲ ವಾರ ವಿಶ್ವದೆಲ್ಲೆಡೆ ವನ್ಯಜೀವಿ ಸಪ್ತಾಹದ ಸಮಾರಂಭಗಳಿಗೆ ಸಿದ್ಧತೆ ನಡೆದಿದೆ. ಭಾರತವೂ ಸಹ 67ನೇ ಸಮಾರಂಭ ಆಚರಿಸುತ್ತಿದೆ. ಸಾಂಕೇತಿಕ ಹಬ್ಬವಾಗಿ...ಬಂದು ಹೋಗುವ ನೂರಾರು ಹಬ್ಬಗಳಲ್ಲಿ ಒಂದಾಗಿ...

ಇದರಿಂದ ಭೂಮಿ ಕ್ರಮೇಣ ತೇವಾಂಶವನ್ನು ಕಳೆದುಕೊಳ್ಳುತ್ತದೆ. ಅಂತರ್ಜಲದ ಪುನಶ್ಚೇತನಕ್ಕೂ ಅಡ್ಡಿಯಾಗುತ್ತದೆ. ಅಷ್ಟೇ ಅಲ್ಲ, ಮಣ್ಣಿನ ಕಣಗಳಲ್ಲಿ ಕುಳಿತ ಲಕ್ಷ ಲಕ್ಷ ಸೂಕ್ಷ್ಮಾಣು ಜೀವಿಗಳು ನಿಷ್ಕ್ರಿಯವಾಗಿಬಿಡುತ್ತವೆ. ಆಗ ಮಣ್ಣು ತನ್ನ ರಚನೆ, ಗುಣಗಳನ್ನೆಲ್ಲ ಕಳೆದುಕೊಳ್ಳುತ್ತದೆ. ಭೂಮಿ ಸತ್ವವನ್ನು ಕಳೆದುಕೊಂಡು ಬರಡಾಗಲು ಸಿದ್ಧವಾಗುತ್ತದೆ.

ಸರ್ಕಾರ ಈ ದಿಕ್ಕಿನಲ್ಲಿ ಎಚ್ಚರವಾಗಿಲ್ಲವೇ? ಅಪಾಯಕ್ಕೆ ಸಿಕ್ಕಿರುವ ಭೂಮಿ, ಪರಿಸರ ಮತ್ತು ಜೀವಸಂಕುಲಗಳ ರಕ್ಷಣೆಗೆ ಕಾರ್ಯಕ್ರಮಗಳನ್ನು ಹೆಣೆದಿಲ್ಲವೆ? ಈ ಪ್ರಶ್ನೆಗಳಿಗೆ ಉತ್ತರ ನಿರಾಶಾದಾಯಕ.

> “ನಾವು ಸೃಷ್ಟಿಸಿದ ಅದ್ಭುತಗಳಿಗಿಂತ, ನಾವು ಗಾಸಿಗೊಳಿಸದೆ ಯಾವುದನ್ನೆಲ್ಲ ಸಂರಕ್ಷಿಸಿದ್ದೇವೆ ಎಂಬ ಆಧಾರದ ಮೇಲೆ ಮುಂದಿನ ಜನಾಂಗ ನಮ್ಮನ್ನು ಗೌರವಿಸಬಹುದು”
> **ಮೈಕೆಲ್ ಕಾಲಿನ್ಸ್**
> 1969ರ ಚಂದ್ರಯಾನದಲ್ಲಿದ್ದ ವಿಜ್ಞಾನಿ

ಹಾಗೆಯೇ, ನಿರರ್ಥಕ ಯೋಜನೆಗಳ ಬಗ್ಗೆ ಚರ್ಚಿಸೋಣ. ಕಾಡನ್ನಾಗಲಿ, ಹುಲ್ಲುಗಾವಲುಗಳನ್ನಾಗಲಿ ಎಂದಿಗೂ ಮಾನವ ಸೃಷ್ಟಿಸಲು ಸಾಧ್ಯವಿಲ್ಲ. ಅವುಗಳನ್ನು ಸಂರಕ್ಷಿವುದಷ್ಟೇ ನಮ್ಮ ಮುಂದಿರುವ ಆಯ್ಕೆ. ಈ ಸರಳ ಸತ್ಯ ಅರ್ಥವಾದಂತೆ ಕಾಣುತ್ತಿಲ್ಲ. ಈಚೆಗೆ ಹುಲ್ಲುಗಾವಲು ಅಭಿವೃದ್ಧಿ ಯೋಜನೆಯನ್ನು ರೂಪಿಸಿದೆ. ಅಭಿವೃದ್ಧಿ ಎನ್ನುವ ಪದ ಪರಿಸರದ ಸಂದರ್ಭದಲ್ಲಿ ನಾಶ ಅಥವಾ ಧ್ವಂಸ ಎಂಬ ಅರ್ಥ ಬರುತ್ತದೆ.

ಇಲ್ಲಿ ಹುಲ್ಲುಗಾವಲುಗಳನ್ನು ಸೃಷ್ಟಿಸುವುದಾದರೂ ಹೇಗೆ? ಎಲ್ಲೋ ಸಂಗ್ರಹಿಸಿದ ಹುಲ್ಲಿನ ಬೀಜಗಳನ್ನು ತೆರೆದ ಬಯಲಿಗೆ ಬಿಸಾಡಿಬಿಡುವುದೆ? ಹುಲ್ಲುಗಾವಲೆಂದರೆ ನಾವು ಪಾರ್ಕ್‌ಗಳಲ್ಲಿ, ರೆಸಾರ್ಟ್‌ಗಳಲ್ಲಿ ಬೆಳೆಸುವ ಹಸಿರು ಮೈದಾನಗಳಲ್ಲ. ಹುಲ್ಲುಗಾವಲಿಗೆ ತನ್ನದೇ ಗುಣವಿರುತ್ತದೆ. ಅಲ್ಲಿ ಎಷ್ಟು ಜಾತಿಯ ಹುಲ್ಲುಗಳಿವೆ? ಆ ಸಂಯೋಜನೆಯನ್ನು ತೀರ್ಮಾನಿಸುವ ಅಂಶಗಳು ಯಾವುವು? ಅವುಗಳ ಆಯ್ಕೆಗಳೇನು? ಇವುಗಳಿಗೆ ಉತ್ತರ ಕಂಡುಕೊಳ್ಳುವುದು ಸುಲಭದ ಕೆಲಸವಲ್ಲ.

ಇದಕ್ಕೆ ಉದಾಹರಣೆ ಎಂದರೆ ತಾಂಜೇನಿಯಾದ ಸವನ್ನಾ ಕಾಡುಗಳಲ್ಲಿನ ವೈವಿಧ್ಯತೆ. ಇಲ್ಲಿ 275ಕ್ಕೂ ಹೆಚ್ಚಿನ ಹುಲ್ಲಿನ ಪ್ರಭೇದಗಳಿವೆ. ಅಲ್ಲಿರುವ ಲಕ್ಷ ಲಕ್ಷ ಗೊರಸುಪಾದದ ಜೀವಿಗಳ ದೈನಂದಿಕ ಸವಾಲಿನೊಂದಿಗೆ ಅವು ಹೇಗೆ ಉಳಿದು ಬಂದಿರಬಹುದು? ಹೀಗೆ ವಿಷಯಗಳ ಆಳಕ್ಕೆ ಹೋದಷ್ಟೂ ಅವು ಇನ್ನಷ್ಟು ಸಂಕೀರ್ಣವಾಗುತ್ತಾ ಹೋಗುತ್ತವೆ. ಈ ಹಿನ್ನೆಲೆಯಲ್ಲಿ ತಜ್ಞರು ನಿರ್ವಹಿಸಬೇಕಾದ ಕೆಲಸಗಳನ್ನು ಅವರೇ ನಿರ್ವಹಿಸಬೇಕು. ಇಲ್ಲಿ ಅಹಂಗಿಂತ ವಿನಯ ಮುಖ್ಯವಾಗುತ್ತದೆ. ಹಾಗಾಗಿ ವೈಜ್ಞಾನಿಕ ಮನೋಧರ್ಮ ಮಾತ್ರ ಭವಿಷ್ಯವನ್ನು ಕಾಪಾಡಬಹುದು.

ಇದನ್ನೆಲ್ಲ ಹೇಳುವಾಗ ಕಾಡು, ಬೆಟ್ಟ-ಗುಡ್ಡ, ನದಿ-ಸರೋವರ ಇವುಗಳೆಲ್ಲ ಏಕೆ ಬೇಕು? ಎಂಬ ಪ್ರಶ್ನೆ ಎದುರಾಗಬಹುದು. ಇಂದು ಭೂಮಂಡಲವನ್ನು ಕಾಡುತ್ತಿರುವ ದೊಡ್ಡ ಸಮಸ್ಯೆಯೆಂದರೆ ವಾತಾವರಣದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಇಂಗಾಲದ ಅಂಶ. ಇದು ಹವಾಮಾನದ ಬದಲಾವಣೆಗೆ ಮುಖ್ಯ ಕಾರಣವೆಂದು ವಿಜ್ಞಾನಿಗಳು ಹೇಳುತ್ತಲೇ ಇದ್ದಾರೆ. ಈ ಸಮಸ್ಯೆಗೆ ಇರುವ ಏಕೈಕ ಪರಿಹಾರವೆಂದರೆ ಜೀವ ಪರಿಸರವನ್ನು ಉಳಿಸಿಕೊಳ್ಳುವುದು. ಈ ಜೀವ ಪರಿಸರಕ್ಕೆ ಇಂಗಾಲ ವನ್ನು ಪರಿಣಾಮಕಾರಿ ಆಗಿ ನಿಯಂತ್ರಿಸುವ ಶಕ್ತಿಯಿದೆ.

ಈ ಕಾರಣದಿಂದಲೇ ಹಲವಾರು ಆಫ್ರಿಕಾ ದೇಶಗಳನ್ನು ಬರ ಮೇಲಿಂದ ಮೇಲೆ ಕಾಡುತ್ತಿದೆ. ಜನರಬದುಕುಅಸ್ತವ್ಯಸ್ತವಾಗಿದೆ.ಕಾನೂನಿನಲ್ಲಿರಕ್ಷಣೆ ಒದಗಿಸಿದ್ದ ಕಾಡುಪ್ರಾಣಿಗಳನ್ನು ಬೇಟೆಯಾಡಲು ಸರ್ಕಾರ ಅನುಮತಿ ನೀಡಿದೆ. ಕೆಲವೆಡೆ ಸರ್ಕಾರಗಳೇ ಆ ಕೆಲಸನ್ನು ನಿರ್ವಹಿಸುತ್ತಿವೆ. ಏಕೆಂದರೆ ಹಸಿವಿನಿಂದ ಜನರನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯ ಸವಾಲು ಅಲ್ಲಿ ಎದುರಾಗಿದೆ. ಇಂತಹ ಗಂಭೀರ ಸನ್ನಿವೇಶದಲ್ಲೂ ನಮ್ಮ ಸಮಾಜ, ಸರ್ಕಾರಗಳು ಹಾಗೆಯೇ ಮಾಧ್ಯಮ ಎಚ್ಚೆತ್ತುಕೊಳ್ಳುವುದು ಯಾವಾಗ? ನಮಗಂತೂ ಭರವಸೆಗಳು ಕಾಣುತ್ತಿಲ್ಲ. ಸಮಾಜ ಎಚ್ಚೆತ್ತುಕೊಳ್ಳುವ ಹೊತ್ತಿಗೆ ಜೀವಸಂಕುಲಗಳು ದೇವಲೋಕಕ್ಕೆ ಪ್ರಯಾಣಿಸಿ ಬಿಟ್ಟಿರಬಹುದು.

ಆಗಾ ಖಾನ್ ಅರಮನೆ ಗಾಂಧಿಗೆ ಸೆರೆಮನೆ!

ಮಹಾಂತೇಶ ಗಂಗಯ್ಯ ಓಶಿಮಠ

ಮಹಾರಾಷ್ಟ್ರ ದ ಪುಣೆ ನಗರದಲ್ಲಿ ಸುತ್ತಾಡುವಾಗ ಆಗಾ ಖಾನ್ ಅರಮನೆ ಕಂಡಿತು. ಅದರ ಹೊರನೋಟಕ್ಕೆ ಮರುಳಾದ ನಾನು, ಕುತೂಹಲಕ್ಕೆ ಅಲ್ಲಿ ಇದ್ದವರನ್ನು ವಿಚಾರಿಸಿದೆ. ಅದು ಬ್ರಿಟಿಷರ ಆಳ್ವಿಕೆಯಲ್ಲಿ ಸೆರೆಮನೆ ಕೂಡ ಆಗಿತ್ತು ಎನ್ನುವುದು ಗೊತ್ತಾಯಿತು! ಅರಮನೆ ಯಾರಿಗಾಗಿ ಸೆರೆಮನೆ ಆಯಿತು ಎನ್ನುವ ಪ್ರಶ್ನೆಗೆ ‘ಮಹಾತ್ಮಗಾಂಧಿ’ ಎನ್ನುವ ಉತ್ತರ ಸಿಕ್ಕಿತು. ಈ ಕಾರಣಕ್ಕಾಗಿ ಆಗಾ ಖಾನ್ ಅರಮನೆ ಇತಿಹಾಸದ ಪುಟಗಳನ್ನು ಸೇರಿದೆ. ಆ ಪುಟಗಳಲ್ಲಿ ಗಾಂಧೀಜಿಯ ದೀರ್ಘಾವಧಿ ಉಪವಾಸವೂ ಇದೆ. ‘ಕ್ವಿಟ್ ಇಂಡಿಯಾ’ ಚಳವಳಿಯ ಸಂದರ್ಭದಲ್ಲಿ ಗಾಂಧೀಜಿ ಫ್ಯಾಸಿಸ್ಟ್ ಶಕ್ತಿಗಳೊಂದಿಗೆ ಒಳಒಪ್ಪಂದ ಮಾಡಿಕೊಂಡಿದ್ದಾರೆ ಎಂಬ ಬ್ರಿಟಿಷರ ಆಪಾದನೆಗೆ ಮನನೊಂದು ಗಾಂಧೀಜಿ ಉಪವಾಸ ಕೈಗೊಂಡಿದ್ದರು. ಅವರು ಇಲ್ಲಿ 21 ತಿಂಗಳು ಸೆರೆಯಲ್ಲಿರುತ್ತಾರೆ.

ಕ್ವಿಟ್ ಇಂಡಿಯಾ ಚಳವಳಿ

‘ಕ್ವಿಟ್ ಇಂಡಿಯಾ’ ಚಳವಳಿಯ ಘೋಷಣೆ ಆಗುತ್ತದೆ. ಇದಕ್ಕೆ ಮುಖ್ಯ ಕಾರಣ ಎರಡನೆಯ ಮಹಾಯುದ್ಧದ ಸ್ಥಿತಿಗತಿ ಹಾಗೂ ರಾಷ್ಟ್ರೀಯ ಕಾಂಗ್ರೆಸ್‌ನ ಸಮಾಜವಾದಿಗಳ ಒತ್ತಾಸೆ. ಯುದ್ಧ ಶುರುವಿಗೆ ಫ್ಯಾಸಿಸ್ಟ್ ಶಕ್ತಿಗಳಾದ ಜರ್ಮನಿ ಹಾಗೂ ಜಪಾನ್ ದೇಶಗಳ ಉಪಟಳವನ್ನು ಮೆಟ್ಟಲು ಬ್ರಿಟನ್, ಅಮೆರಿಕದ ನೆರವು ಕೇಳುತ್ತದೆ. ಅದಕ್ಕೆ ಉತ್ತರವಾಗಿ ಸ್ವಾತಂತ್ರ್ಯ ಬಯಸುತ್ತಿದ್ದ ಭಾರತದಂತಹ ದೇಶಗಳಿಗೆ ಸಾರ್ವಭೌಮತ್ವದ ಹಕ್ಕುಗಳನ್ನು


ಎಸ್.ಎಂ.ಪಂಡಿತ್ ರಚಿಸಿದ ಗಾಂಧೀಜಿ ಕಲಾಕೃತಿ

ಮಾನ್ಯ ಮಾಡುವುದಾದರೆ ತಾನು ಸಿದ್ಧ ಎಂದು ಅಮೆರಿಕ ತಿಳಿಸುತ್ತದೆ. ಈ ವಿಚಾರಗಳಿಗೆ ಪೂರಕವಾಗಿ ಎರಡೂ ರಾಷ್ಟ್ರಗಳ ನಡುವೆ ಐತಿಹಾಸಿಕ ‘ಅಟ್ಲಾಂಟಿಕ್ ಒಪ್ಪಂದ’ ಏರ್ಪಟ್ಟು, ಅದರನ್ವಯ ಭಾರತಕ್ಕೆ ಬಂದಿದ್ದ ಸಂಧಾನಕಾರ ಸ್ಟಾಫರ್ಡ್ ಕ್ರಿಪ್ಸ್, ರಾಷ್ಟ್ರೀಯ ಕಾಂಗ್ರೆಸ್ ಯುದ್ಧದಲ್ಲಿ ಸಹಕರಿಸಿದರೆ ಭಾರತಕ್ಕೆ ಇತರ ಸಂಸ್ಥಾನಗಳು ಸೇರಿಕೊಳ್ಳುವ ಆಯ್ಕೆಯನ್ನು ಆಯಾ ಸಂಸ್ಥಾನಗಳಿಗೆ ನೀಡಲಾಗುತ್ತದೆ ಎಂದು ಹೇಳುತ್ತಾರೆ.

11ನೇ ಪುಟಕ್ಕೆ


ಆಗಾ ಖಾನ್ ಅರಮನೆ

ಹಸಿರ ನಡುವೆ ಓದಿನ ಸಂಭ್ರಮ


ತೇಜಸ್ವಿ ಧ್ಯಾನದಲ್ಲಿ... ಚಿತ್ರಗಳು: ರಂಜು ಪಿ

ಸ್ವರ್ಗವೆಂಬುದು ಇರುವುದಾದರೆ... ಹಸಿರ ಹುಲ್ಲಹಾಸಿನ ಮೇಲೆ ಕಾಲು ಚಾಚಿ ಕುಳಿತು, ಪುಸ್ತಕ ಓದುತ್ತ ಬಿಸಿಬಿಸಿ ಟೀ ಹೀರುವ ಆ ದೃಶ್ಯ ಆಹಹಾ ಜೀವವೇ.. ಜೀವನವೇ ಅದೆಷ್ಟು ಸುಂದರ ಅಂತನಿಸದೇ ಇರದು. (ಅ)ಪರಿಚಿತ ಓದುಗರು ಬಳಗದ ಚಿತ್ರಣ ಇದು...

ರಶ್ಮಿ ಎಸ್

ಭಾನುವಾರದ ಕಬ್ಬನ್ ಪಾರ್ಕೆಂದರೆ ಚಿನ್ನಾಟವಾಡುವ ನಾಯಿಮರಿಗಳು, ಕಾಲುಬಂದ ಕೂಸುಗಳ ಓಡಾಟ, ಅಲ್ಲಲ್ಲೇ ಹಾಸಿಗೆ ಹಾಸಿ, ಮರದ ನೆರಳಿಗೆ ಮಲಗಿರುವ, ಕುಳಿತಿರುವ ಪೋಷಕರು, ಮರದ ಕಾಂಡಕ್ಕೆ ಆನಿ ಕುಳಿತಿರುವ ಸಂಗಾತಿಯ ಮಡಲಿಲಲ್ಲಿ ಮಗುವಾಗಿ ಬೆಳಕಿನ ಗೆರೆಗಳನ್ನು ಹಿಡಿಯುವಲ್ಲಿ ತಲ್ಲೀನರಾದ ಪ್ರೇಮಿಗಳು.. ಗುರಿತಪ್ಪುವ ಚೆಂಡು, ಕೆಳಗೆ ಬೀಳುವ ಟೆನ್ನಿಸ್‌ಬಾಲುಗಳು ಇದೊಂದು ಬಗೆಯ ಪ್ರಪಂಚ.

ಇನ್ನೊಂದು ಕಡೆ ತಲೆ ತಗ್ಗಿಸಿ, ಪುಸ್ತಕದಲ್ಲಿ ಹುದುಗಿಹೋದ ಜೀವಗಳು. ಅಲ್ಲಲ್ಲೇ ಗುಂಪುಗುಂಪಾಗಿ, ಸ್ನೇಹಿತರ ಜೊತೆಗೂಡಿ, ಏಕಾಂಗಿಯಾಗಿ, ಕಾಲು ಚಾಚಿ, ಆರಾಮಾಸನದಲ್ಲಿ ಅನಂತ ಶಯನನಂತೆ ಮಲಗಿ, ಮರಕ್ಕೆ ಒರಗಿ, ಕಲ್ಲುಬಂಡೆಯ ಮೇಲೆ ಕಾಲು ಚಾಚಿ, ಪುಸ್ತಕದೊಳಗೆ ಕಳೆದುಹೋಗಿದ್ದವು.

ಹಕ್ಕಿಗಳ ಕೂಜನ, ತಣ್ಣನೆಯ ಕುಳಿರ್ಗಾಳಿಯ ನಡುವೆ ಆಗಾಗ ಪುಟ ತಿರುಗಿಸುವ ಸದ್ದು ಮಾತ್ರ ಕೇಳುತ್ತಿತ್ತು.

ಇದು ತಿಂಗಳಿಗೆ ಒಮ್ಮೆ ಕನ್ನಡದ ಓದುಗರು ಒಟ್ಟಾಗಿ ಓದುವ ಸುಖ ಅನುಭವಿಸುವ ಕಾರ್ಯಕ್ರಮ. ಅವ್ವ ಪ್ರಕಾಶನದವರು ಆಯೋಜಿಸುತ್ತಿರುವ (ಅ)ಪರಿಚಿತ ಓದುಗರು ಎಂಬ ಕಾರ್ಯಕ್ರಮದ ಝಲಕು ಇದು.

ಹದಿನೆಂಟು ತಿಂಗಳ ಹಿಂದೆ ಹತ್ತು ಜನರ ಸಮಾನ ಮನಸ್ಕ ತಂಡವೊಂದು ಕಬ್ಬನ್ ಪಾರ್ಕಿನಲ್ಲಿ ಇಂಗ್ಲಿಷ್ ಓದುಗರಂತೆ ಕನ್ನಡದ ಓದುಗರು ಸೇರಬಾರದೇಕೆ ಎಂದೆನಿಸಿದಾಗ ಕಾರ್ಯಪ್ರವೃತ್ತರಾದರು.

ಓದುವ ಅಭ್ಯಾಸ ಇದ್ದವರು ಎಲ್ಲಿಯಾದರೂ ಓದಬಹುದು. ಓದುವುದೇ ಏಕಾಂತ. ಅದನ್ನು ಹೀಗೆ ಸಾಮೂಹಿಕ ಚಟುವಟಿಕೆ ಮಾಡುವುದು ಹೇಗೆ? ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಬರೆದರು. ಸಮಾನಮನಸ್ಕರು ಒಟ್ಟುಗೂಡಲಾರಂಭಿಸಿದರು. ಹದಿನೆಂಟು ಜನರಿಂದ ಆರಂಭವಾದ ಈ ಚಟುವಟಿಕೆಯಲ್ಲೀಗ ನೂರಾರು ಜನ ಪಾಲ್ಗೊಳ್ಳುತ್ತಿದ್ದಾರೆ. ಬಂದು ಮೌನವಾಗಿ ಎರಡು ಗಂಟೆ ಓದಿನಲ್ಲಿ ಕಳೆದುಹೋಗುತ್ತಾರೆ.

ಕಬ್ಬನ್‌ಪಾರ್ಕಿನ ಹಸಿರಿನ ನಡುವೆ ಇವರ, ಉಸಿರು, ನಿಟ್ಟುಸಿರುಗಳೂ ಸೇರಿ ಹೋಗುತ್ತವೆ. ಕಳೆದ ಹದಿನೆಂಟೂ ತಿಂಗಳಿಂದ ಬರುತ್ತಿರುವ ಕಿಶೋರ್, ‘ಪ್ರತಿ ತಿಂಗಳು ಬಂದಾಗಲೂ ಹೊಸ ಲೇಖಕರನ್ನು ಭೇಟಿಯಾಗುತ್ತೇನೆ. ಹೊಸ ಪುಸ್ತಕದ ಪರಿಚಯ ಆಗುತ್ತದೆ’ ಎನ್ನುತ್ತಲೇ ಓದಿನಲ್ಲಿ ಕಳೆದುಹೋದರು.

ಮತ್ತೊಬ್ಬರು ಮಣಮಣವೆಂದು ಜೋರುಜೋರಾಗಿ ತಮ್ಮಷ್ಟಕ್ಕೆ ತಾವೇ ತೂಗಿಕೊಳ್ಳುತ್ತ ಓದುತ್ತಿದ್ದರು. ಡಿವಿಜಿಯವರ ಮಂಕುತಿಮ್ಮನ ಕಗ್ಗ ಪುಸ್ತಕ ಅದು. ಕಗ್ಗವನ್ನು ಜೋರಾಗಿ ಉಚ್ಚರಿಸುತ್ತ, ಬಾಯಿಪಾಠ ಮಾಡುತ್ತಿದ್ದವರು, ಅರ್ಥವನ್ನು ಮನಸಿನಲ್ಲಿಯೇ ಓದುತ್ತಿದ್ದರು.

ಹೊರಗೂ ಒಂದು ಲೋಕ.. ಅವರೊಳಗೂ ಒಂದು ಲೋಕ. ಒಳಗಿನ ಲೋಕದಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ‘ಕರ್ವಾಲೊ’ ಹಾರುವ ಓತಿ ನಗೆ ಮೂಡಿಸಿತ್ತು. ಇನ್ನೊಂದು ಕಡೆ ಭೈರಪ್ಪ ಅವರ ‘ಯಾನ’ ಗಂಭೀರವದನವಾಗಿಸಿತ್ತು. ಮತ್ತೊಬ್ಬರು ನಾಯಿನೆರಳಿನ ಮೊದಲ ಕೆಲ ಪುಟಗಳಲ್ಲಿ ಮುಳಗಿ ಹೋಗಿದ್ದರೆ ‘ನಿಗೂಢ ಮನುಷ್ಯರು’, ‘ಚಿದಂಬರ ರಹಸ್ಯ’ಗಳಲ್ಲಿ ತೇಜಸ್ವಿ ಅಲ್ಲಿ ಉಸಿರಾಡುತ್ತಿದ್ದರು.

11ನೇ ಪುಟಕ್ಕೆ...

ಮುಂದಿನ ಓದು ಬಗ್ಗೆ ತಿಳಿಯಬೇಕೆ?
ಮುಂದಿನ ತಿಂಗಳು ಯಾವತ್ತು ನಡೆಯಲಿದೆ? ಯಾರು ಬರಲಿದ್ದಾರೆ ಎಂಬುದು ತಿಳಿಯಬೇಕಿದೆಯೇ? ಇನ್‌ಸ್ಟಾಗ್ರಾಂನಲ್ಲಿ **https://www.instagram.com/dayavittu.gamanisi/** ಈ ಪುಟವನ್ನು ಫಾಲೊ ಮಾಡಿ.


(ಅ)ಪರಿಚಿತ ಓದುಗರು...

ಮತ್ತೆ ಮುಖ್ಯಮಂತ್ರಿ

ರಾಜಕಾರಣಕ್ಕೆ ನಿಲುವುಗನ್ನಡಿ

ಕೆ.ನರಸಿಂಹಮೂರ್ತಿ

80ರ ದಶಕದ ರಂಗಭೂಮಿ ಕ್ಷೇತ್ರದಲ್ಲಿ ಸಂಚಲನೆ ಮೂಡಿಸಿದ್ದ 'ಮುಖ್ಯಮಂತ್ರಿ' ನಾಟಕದ 'ಮುಖ್ಯಮಂತ್ರಿ' ಪಾತ್ರದ ಮೂಲಕವೇ ದಾಖಲೆಗಳನ್ನು ನಿರ್ಮಿಸಿ, 'ಶಾಶ್ವತ ಮುಖ್ಯಮಂತ್ರಿ' ಎಂಬ ಹಿರಿಮೆಗೆ ಪಾತ್ರರಾಗಿರುವ ಮುಖ್ಯಮಂತ್ರಿ ಚಂದ್ರು, 'ಮತ್ತೆ ಮುಖ್ಯಮಂತ್ರಿ'ಯಾಗಿ ರಂಗದ ಮೇಲೆ ಬಂದಿದ್ದಾರೆ.

44 ವರ್ಷಗಳ ಬಳಿಕವೂ 'ಮುಖ್ಯಮಂತ್ರಿ' ನಾಟಕವನ್ನು ಪ್ರೇಕ್ಷಕರು ಕಿಕ್ಕಿರಿದು ನೋಡುತ್ತಿದ್ದಾರೆ. ಆದರೂ, ಹೊಸತೇನಾದರೂ ಮಾಡಬೇಕೆಂಬ ಹಂಬಲದಿಂದ, ಸಮಕಾಲೀನ ರಾಜಕಾರಣದ ಹೂರಣ ಹೊತ್ತು 'ಮತ್ತೆ ಮುಖ್ಯಮಂತ್ರಿ' ಮೂಡಿದೆ. ಇದು ರಾಜಕೀಯ ಆತ್ಮಾವಲೋಕನ ಮತ್ತು ವಿಡಂಬನೆಯೇ ಪ್ರಧಾನವಾದ ನಾಟಕ. ಈ ಕಾಲದ ರಾಜಕಾರಣ, ರಾಜಕಾರಣಿಗಳಿಗೆ ಹಿಡಿದ ನಿಲುವುಗನ್ನಡಿ. ಹಳೆಯ 'ಮುಖ್ಯಮಂತ್ರಿ' ಜೊತೆಗೆ 'ಮತ್ತೆ ಮುಖ್ಯಮಂತ್ರಿ'ಯನ್ನು ಹೋಲಿಸುವ ಅವಕಾಶವೂ ಇದೆ.

'ಮುಖ್ಯಮಂತ್ರಿ ನಾಟಕದಲ್ಲಿ ಹೇಗಾದರೂ ಮಾಡಿ ಕುರ್ಚಿ ಉಳಿಸಿಕೊಳ್ಳಬೇಕೆಂಬ ಚತುರ, ಪಿತೂರಿಗಾರ ಮುಖ್ಯಮಂತ್ರಿ ಕೃಷ್ಣ ದ್ವೈಪಾಯನ ಕೌಲ್ ಅರ್ಥಾತ್ ಕೆ.ಡಿ. ಕೌಲ್ ಕಂಡರೆ, ಇಲ್ಲಿ, ಪ್ರಜಾತಂತ್ರದ ದಾರಿಯಲ್ಲಿ ನಡೆಯಲು ಬಯಸಿದ, ಸ್ಥಾನವನ್ನು ತ್ಯಜಿಸಲು ನಿರ್ಧರಿಸುವ ಮುಖ್ಯಮಂತ್ರಿ ಶೀಲವಂತನಿದ್ದಾನೆ. 71ರ ಇಳಿವಯಸ್ಸಿನಲ್ಲಿ ಚಂದ್ರು ಅವರದ್ದು ಪ್ರಬುದ್ಧ ಹಾಗೂ ಎಂದಿನ ಲೀಲಾಜಾಲ ಅಭಿನಯ.

'ಮುಖ್ಯಮಂತ್ರಿ' ನಾಟಕವನ್ನು ಅಭಿನಯಿಸಿರುವ ಬೆಂಗಳೂರಿನ 'ಕಲಾ ಗಂಗೋತ್ರಿ' ಹವ್ಯಾಸಿ ತಂಡದ ಕಲಾವಿದರೇ 'ಮತ್ತೆ ಮುಖ್ಯಮಂತ್ರಿ' ನಾಟಕದಲ್ಲಿ ಅಭಿನಯಿಸಿದ್ದಾರೆ. ಅಂದು ಆ ನಾಟಕವನ್ನು ನಿರ್ದೇಶಿಸಿದ್ದ ಬಿ.ವಿ.ರಾಜರಾಂ ಇದನ್ನೂ ನಿರ್ದೇಶಿಸಿದ್ದಾರೆ. ರಣಜಿತ್ ಕಪೂರ್ ಅವರ ಹಿಂದಿ ನಾಟಕವನ್ನು ಟಿ.ಎಸ್.ಲೋಹಿತಾಶ್ವ ಅನುವಾದಿಸಿದ್ದರು.

ಸಾಮಾಜಿಕ, ಪೌರಾಣಿಕ ನಾಟಕಗಳ ಮೂಲಕ ಕನ್ನಡ ರಂಗಭೂಮಿ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಗಳಿಸಿರುವ ವಿಮರ್ಶಕ, ನಾಟಕಕಾರ ಕೆ.ವೈ. ನಾರಾಯಣಸ್ವಾಮಿ, 'ಮತ್ತೆ ಮುಖ್ಯಮಂತ್ರಿ'ಯನ್ನು ರಚಿಸಿರುವುದು ವಿಶೇಷ. ಮೊದಲ ರಾಜಕೀಯ ನಾಟಕದಲ್ಲೇ ಅವರ ಪ್ರತಿಭೆ ಹೊಸ ದಿಕ್ಕಿಗೆ ವಿಸ್ತರಿಸಿದೆ. ತಂಡವು ಹೇಳಿಕೊಳ್ಳುವಂತೆ, 'ಇದು ದೇಶದ 75 ವರ್ಷಗಳ ರಾಜಕೀಯ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವ ಯತ್ನ'.



'ಮತ್ತೆ ಮುಖ್ಯಮಂತ್ರಿ' ನಾಟಕದಲ್ಲಿ ಮುಖ್ಯಮಂತ್ರಿ ಚಂದ್ರು ಮತ್ತು ಎಂ.ಎಸ್.ವಿದ್ಯಾ

ತನ್ನ ಸಚಿವ ಸಂಪುಟದಲ್ಲಿ ನಡೆದ ಅಪಾರ ಭ್ರಷ್ಟಾಚಾರವನ್ನು ತಡೆಯಲು ಆಗಲಿಲ್ಲವೆಂಬ ಹತಾಶೆ, ಪಶ್ಚಾತ್ತಾಪದಿಂದ ಕೊರಗುವ ಹಂಗಾಮಿ ಮುಖ್ಯಮಂತ್ರಿ ಶೀಲವಂತ, ನಾಲ್ಕನೇ ಬಾರಿ ಮುಖ್ಯಮಂತ್ರಿಯಾಗಲು ನಿರಾಕರಿಸಿ, ಆದರ್ಶ ರಾಜಕಾರಣದ ಪ್ರತಿನಿಧಿಯಾಗಿ ಎದುರಿಸುವ ತೊಳಲಾಟಗಳು ಹಾಗೂ ಮುಖ್ಯಮಂತ್ರಿ ಹುದ್ದೆಗಾಗಿ ಆಕಾಂಕ್ಷಿಗಳು ನಡೆಸುವ ಪಿತೂರಿಯೇ ನಾಟಕದ ಕೇಂದ್ರ ವಸ್ತು.

ನಾಟಕದುದ್ದಕ್ಕೂ ಶಾಂತವೇರಿ ಗೋಪಾಲಗೌಡರು ಸೇರಿದಂತೆ ಹಿಂದಿನ, ಇಂದಿನ ಪ್ರಸಿದ್ಧ ರಾಜಕಾರಣಿಗಳ ವ್ಯಕ್ತಿತ್ವದ ನೆರಳೂ ಕಾಣುವುದರಿಂದಲೇ ಇದಕ್ಕೆ ಸಮಕಾಲೀನ ಮಹತ್ವವೂ ಸಿಕ್ಕಿದೆ. ಜನವಿರೋಧಿ ಆಡಳಿತದಿಂದ ಬಳಲುವ ಹೋರಾಟಗಾರರು, ರೈತರು, ಅಲ್ಪಸಂಖ್ಯಾತರ ಅಸಹಾಯಕತೆ, ಮಾಧ್ಯಮಗಳ ಓಲೈಕೆಯೂ ಎದುರಾಗುತ್ತದೆ.

ಇಲ್ಲಿ ರಾಜಕೀಯ ವಿಡಂಬನೆಯೇ ಪ್ರಧಾನ. ಹೀಗಾಗಿ ಚುರುಕು ಮುಟ್ಟಿಸುವ, ವ್ಯಂಗ್ಯ ಒಳಗೊಂಡ ಪಂಚಿಂಗ್ ಸಂಭಾಷಣೆಗಳೇ ಜೀವಾಳ. ಚಂದ್ರು ಅವರೊಂದಿಗೆ ಮಂಜುನಾಥ ಹೆಗಡೆ, ಬಿ.ವಿ. ರಾಜಾರಾಂ, ಶ್ರೀನಿವಾಸ ಮೇಷ್ಟ್ರು ಅವರಂಥ ಹಿರಿಯ ನಟರ ಸಲೀಸಾದ ಅಭಿನಯವು ಅದನ್ನು ನಾಟಕೀಯವಾಗಿ ಮೇಲಕ್ಕೆತ್ತುತ್ತದೆ. ಈ ನಟರ ಉತ್ಸಾಹವೇ ನಾಟಕದ ಹೈಲೈಟ್. ಆದರೂ, 25ಕ್ಕೂ ಹೆಚ್ಚು ಪಾತ್ರಗಳ ನಿರಂತರ ಸಂಭಾಷಣೆಯಿಂದ ಒಮ್ಮೊಮ್ಮೆ ವಾಚ್ಯವೆನಿಸುವುದೂ ಉಂಟು. ಮಾತಿಗೇ ಇಲ್ಲಿ ಮಹತ್ವ.

ಕೆಲವೇ ಕುರ್ಚಿ, ಮೇಜುಗಳು ಹಾಗೂ ಸಾಂಕೇತಿಕ ಭಿತ್ತಿಫಲಕಗಳ ರಂಗಸಜ್ಜಿಕೆ ಗಮನ ಸೆಳೆಯುತ್ತದೆ. ಕೆಲವು ಪಾತ್ರಗಳಿಗೆ ಸಹಜತೆ ಮೀರಿ ಮೇಕಪ್ ಮಾಡಿದ್ದು ಕಣ್ಣಿಗೆ ರಾಚುತ್ತದೆ. ಬೆಳಕಿನ ವಿನ್ಯಾಸದಲ್ಲಿ ವೈವಿಧ್ಯತೆ ಕೊಂಚ ಕಡಿಮೆ.

ನಾಟಕದಲ್ಲೊಂದು ವೈರುಧ್ಯವೂ ಇದೆ. 'ಸತ್ಯಂ ವದ, ಧರ್ಮಂ ಚರ' (ಸತ್ಯವನ್ನು ಮಾತನಾಡಿ, ನೀತಿವಂತ ಜೀವನವನ್ನು ನಡೆಸು) ಎಂಬುದು ನಾಣ್ನುಡಿ. ಅದರ ಮೊದಲ ಭಾಗವನ್ನು 'ಸತ್ಯಂ ವಧ' ಎಂದು ಬದಲಾಯಿಸಿ, ನಾಟಕದ ಶೀರ್ಷಿಕೆಯ ಅಡಿಸಾಲಾಗಿ ಬಳಸಲಾಗಿದೆ. ಎಂದರೆ ಸತ್ಯವನ್ನು ವಧೆ ಮಾಡು, ಕೊಲ್ಲು ಎಂದರ್ಥ. ಇನ್ನೂ ಮುದ್ರಣದ ಹಂತದಲ್ಲಿರುವ ನಾಟಕದ ಪಠ್ಯದಲ್ಲಿ, ಕೋರ್ಟಿನ ಕಲಾಪದ ನಡುವೆಯೇ ಗುಂಡು ಹಾರಿಸಿ ಶೀಲವಂತನನ್ನ ಕೊಲ್ಲುವುದೇ ಕೊನೇ ದೃಶ್ಯವಾಗಿ ಬರುತ್ತದೆ. ಸ್ವಾರ್ಥಿ ರಾಜಕಾರಣವು ಸತ್ಯವನ್ನು ಕೊಲ್ಲುತ್ತದೆ ಎಂಬುದು ಇಲ್ಲಿ ಗ್ರಹಿಸಬೇಕಾದ ಅರ್ಥ. ಆದರೆ, ರಂಗ ಪ್ರಯೋಗದಲ್ಲಿ ಕೊನೆಗೆ ಶೀಲವಂತನೇ ಮತ್ತೆ ಮುಖ್ಯಮಂತ್ರಿಯಾಗುತ್ತಾನೆ!

'ನಾನು ರಾಜಕೀಯ ಅಪರಾಧಿ. ಮತ್ತೆ ಸಿಎಂ ಆಗುವುದಿಲ್ಲ. ಸಿಎಂ ಅನ್ನು ಆಯ್ಕೆ ಮಾಡುವ ಅಧಿಕಾರವೂ ಇಲ್ಲ' ಎಂದು ತನ್ನ ಅವಧಿಯ ಎಲ್ಲ ಹಗರಣಗಳ ತನಿಖೆ ನಡೆಸಬೇಕೆಂದು ಕೋರ್ಟಿಗೆ ಪತ್ರ ಬರೆಯುವ ಶೀಲವಂತ, ಕೊನೆಯಲ್ಲಿ ಮುಗುಳ್ನಗುತ್ತಾ ಮತ್ತೆ ಅದೇ ಸ್ಥಾನಕ್ಕೆ ಮರಳುವಲ್ಲಿ ತಾರ್ಕಿಕ ಸಮರ್ಥನೆಯೂ ಕಾಣುವುದಿಲ್ಲ.

ಹೀಗಾಗಿ, ನಾಟಕದ ಅಂತ್ಯಕ್ಕೂ, ಶೀರ್ಷಿಕೆಯ ಅಡಿ ಸಾಲು ಸೂಚಿಸುವ ಆಶಯಕ್ಕೂ ಹೊಂದಿಕೆಯಾಗುವುದಿಲ್ಲ. ದುರಂತದ ಆಶಯಕ್ಕೆ ತಕ್ಕಂತೆಯೇ ನಾಟಕದ ದೃಶ್ಯಾವಳಿಗಳನ್ನು ಕಟ್ಟಿಕೊಟ್ಟ ನಾಟಕಕಾರರ ಉದ್ದೇಶವನ್ನು, ನಟ, ನಿರ್ದೇಶಕರ 'ಸುಖಾಂತ್ಯವೇ ಮುಖ್ಯ' ಎಂಬ ಭಾವನಾತ್ಮಕ ನಿಲುವು ಮರೆ ಮಾಡಿದೆ. ನಾಟಕದ ಒಟ್ಟಾರೆ ತಾತ್ವಿಕತೆಯ ಕುರಿತು ಇಡೀ ತಂಡದಲ್ಲಿ ಒಂದೇ ನಿಲುವಿಲ್ಲದಿರುವುದೂ ಇದಕ್ಕೆ ಕಾರಣವಿರಬಹುದು.

ಅದರಿಂದಲೇ, 'ಭ್ರಷ್ಟಾಚಾರ, ಸ್ವಾರ್ಥ, ಹಗೆತನಗಳಿಂದ ತುಂಬಿರುವ ರಾಜಕೀಯ ವರ್ತಮಾನದಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಸ್ವಲ್ಪ ಮಟ್ಟಿಗೆ ಪಾಪಪ್ರಜ್ಞೆಯನ್ನು ಜಾಗೃತಗೊಳಿಸಬೇಕು' ಎಂಬ ತಂಡದ ಆಶಯಕ್ಕೆ ತಕ್ಕ ಮಹತ್ವವೂ ದೊರಕಿಲ್ಲ.

ಮೈಸೂರಿನ 'ನಟನ' ವೇದಿಕೆಯಲ್ಲಿ ಕಿಕ್ಕಿರಿದ ಪ್ರೇಕ್ಷಕರ ನಡುವೆ ಪ್ರದರ್ಶನ ಕಂಡ ರಂಗಪ್ರಯೋಗವನ್ನು 'ಕಲಾ ಗಂಗೋತ್ರಿ' ತಂಡ ಪರಿಷ್ಕರಿಸಲು ಚಿಂತಿಸುತ್ತಿರುವುದು ಸಮಾಧಾನಕರ ಅಂಶ.

ಹಸಿರ ನಡುವೆ ಓದಿನ ಸಂಭ್ರಮ

10ನೇ ಪುಟದಿಂದ..

ಜೊತೆಗೆ ಸೀತಾ ಎಂಬ ಥ್ರಿಲ್ಲರ್ ಕಾದಂಬರಿ ಮೂರು ನಾಲ್ಕು ಜನರ ಕೈಗಳಲ್ಲಿತ್ತು. ಸುಧಾಮೂರ್ತಿಯವರ ಪುಸ್ತಕಗಳನ್ನೂ ಯುವತಿಯರು ಓದುತ್ತಿದ್ದರು.

ಓದುಗರಲ್ಲಿ ಯುವಜನಾಂಗವೇ ಹೆಚ್ಚಿನ ಸಂಖ್ಯೆಯಲ್ಲಿತ್ತು. ಒಂದಿಬ್ಬರು ಹಿರಿಯರು ಓದುವ ಕುರಿತಾಗಿ ಚರ್ಚಿಸುತ್ತಿದ್ದರು.

ನೂರಾರು ಜನರು, ಹಲವಾರು ಗುಂಪುಗಳು. ಭಾನುವಾರದ ಬೆಳಗ್ಗೆ ಸೋಂಬೇರಿಯಾಗಿ ಸಮಯ ಕಳೆಯಬಹುದಿತ್ತು. ಮನೆಯಲ್ಲಿಯೇ ಕುಳಿತು ಪುಸ್ತಕ ಮುಗಿಸಬಹುದಿತ್ತು. ಇಲ್ಲಿಯವರೆಗೂ ಎಳೆದುತಂದಿದ್ದು, ಸೆಳೆದು ತಂದಿದ್ದು ಅನಂತ ಕುಣಿಗಲ್ ಮತ್ತು ಅವರ ಸಂಗಾತಿಗಳು ಏರ್ಪಡಿಸುವ ಸಂವಾದಗಳು, ಕೊಡುಗೆ ರೂಪದಲ್ಲಿ ಸಿಗುವ ಹೊಸ ಪುಸ್ತಕಗಳು, ಓದಿನೊಂದಿಗೆ ಬರೆಹದಲ್ಲಿ ತೊಡಗಿಸಿಕೊಳ್ಳಬೇಕೆನ್ನುವವರಿಗೆ ಲೇಖಕರೊಂದಿಗಿನ ಸಂವಾದಗಳು. ಈಗಾಗಲೇ ಜೋಗಿ, ರವೀಂದ್ರ ಮುದ್ದಿ, ಶುಭಶ್ರೀ ಭಟ್, ಅಂಬರೀಶ್ ಎಂ ಮುಂತಾದವರೆಲ್ಲ ಅತಿಥಿಗಳಾಗಿ ಬಂದು ಹೋಗಿದ್ದಾರೆ.

(ಅ)ಪರಿಚಿತ ಓದುಗರ ತಂಡ ಮುಖ್ಯ ಕಾರ್ಯನಿರ್ವಾಹಕರಾಗಿರುವ ಅನಂತ ಕುಣಿಗಲ್ ಅವರಿಗೆ ಪುಸ್ತಕ ಸಂಸ್ಕೃತಿ ಬೆಳೆಸುವುದು ಈ ಚಟುವಟಿಕೆಯ ಉದ್ದೇಶವಾಗಿತ್ತು. ಪ್ರತಿ ಸಲವೂ ಹೊಸ ಓದುಗರು ಬರುತ್ತಾರೆ. ಪುಸ್ತಕಗಳನ್ನು ಓದುವವರಿಲ್ಲ ಎನ್ನುವುದೊಂದು ಆರೋಪ ಅಷ್ಟೆ. ಇಲ್ಲಿ ಬರುವವರೆಲ್ಲರೂ ತಮ್ಮ ಪುಸ್ತಕಗಳನ್ನೇ ತರುತ್ತಾರೆ. ಇಲ್ಲಿ ಮಾರಾಟದ ವ್ಯವಸ್ಥೆ ಮಾಡಿದಾಗ, ಪುಸ್ತಕ ಕೊಂಡುಕೊಳ್ಳುತ್ತಾರೆ. ಆ ಪುಸ್ತಕಗಳನ್ನು ತಿಂಗಳ ಓದಿಗೆ ತರುತ್ತಾರೆ. ಚರ್ಚೆ, ಮಾತು, ವಿಚಾರ ವಿನಿಮಯಗಳಲ್ಲಿ ಆಸಕ್ತಿ ತೋರುತ್ತಿದ್ದಾರೆ ಎನ್ನುತ್ತಾರೆ.

ಅವ್ವ ಪ್ರಕಾಶನದಿಂದ ಆಯೋಜಿಸಲಾಗುವ ಈ ತಿಂಗಳ ಓದು ಕಾರ್ಯಕ್ರಮ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ನಡೆಯುತ್ತಿದೆ. ರಾಜ್ಯದ 20 ಜಿಲ್ಲೆಗಳಲ್ಲಿ ಕನ್ನಡ ಪುಸ್ತಕ ಓದುಗರು ತಿಂಗಳಿಗೆ ಒಮ್ಮೆ ಒಟ್ಟಿಗೆ ಸೇರಿ ಓದುತ್ತಾರೆ. ಬೆಂಗಳೂರಿನ ಈ ಕಾರ್ಯಕ್ರಮದಿಂದ ಸ್ಫೂರ್ತಿ ಪಡೆದು, ಮೈಸೂರಿನಲ್ಲಿ ಆರಂಭಿಸಲಾಯಿತು. ಆಕ್ಟೋಬರ್ ತಿಂಗಳಿನಲ್ಲಿ ಮೈಸೂರಿನಲ್ಲಿಯೂ (ಅ)ಪರಿಚಿತ ಓದು ಕಾರ್ಯಕ್ರಮಕ್ಕೆ ಒಂದು ವರ್ಷ ತುಂಬಲಿದೆ.

ಎಲ್ಲಕಡೆಯೂ ಪುಸ್ತಕ ಪರಿಚಯ, ಕನ್ನಡ ಸಾರಸ್ವತ ಲೋಕದ ಆಸಕ್ತಿಕರ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಉತ್ತರಿಸಿದವರಿಗೆ ಪುಸ್ತಕ ಕಾಣಿಕೆಯಾಗಿ ನೀಡುತ್ತಾರೆ. ಸಿಹಿಹಂಚಿದ ನಂತರ ಸವಿ ನೆನಪುಗಳೊಂದಿಗೆ ಮತ್ತೊಂದು ತಿಂಗಳ ಓದಿಗಾಗಿ, ಮೂರು ತಿಂಗಳ ನಂತರದ ಚಾರಣಕ್ಕಾಗಿ ಮತ್ತೆ ಯೋಜನೆಗಳನ್ನು ಹೆಣೆಯುತ್ತಾರೆ.

'ಬದುಕು ಬರಿದಾದಾಗ ಪುಸ್ತಕ ತೆರೆಯಿರಿ' ಎನ್ನುವ ಈ ಯುವ ಗುಂಪು ಬರಿದೇ ಓದುತ್ತಲೇ ಸಂತೋಷ ಸಮಾಧಾನಗಳನ್ನು ಭರಿಸುತ್ತಿದೆ. ಇದೇ ಕಾರಣಕ್ಕೆ ತುಮಕೂರಿನಿಂದಲೂ ತಿಂಗಳ ಓದಿಗೆ ಬರುತ್ತಾರೆ.

ಒಂದೊಂದು ಮರದ ಕೆಳಗೂ ಒಂದಷ್ಟು ಕತೆಗಳು.. ಒಳ ಹೊರಗೆ ಒಟ್ಟೊಟ್ಟಿಗೆ ಮಾತಿನ ಯಾನ ನಡೆಸಿದ್ದವು.

ಕೊನೆಗೆ ಒಂದೆಡೆ ಅರೆ ವೃತ್ತಾಕಾರದಲ್ಲಿ ಕುಳಿತು ಪುಸ್ತಕ ಪರಿಚಯ ಮತ್ತು ಸಂವಾದ, ರಸಪ್ರಶ್ನೆಯಂಥ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ. ಜೋರಾಗಿ ಚಪ್ಪಾಳೆ ತಟ್ಟುವುದಿಲ್ಲ. ಬದಲಿಗೆ ತಮ್ಮ ಹೆಬ್ಬೆರಳಿಗೆ ಉಳಿದ ಬೆರಳುಗಳೆಲ್ಲವೂ ಮುಟ್ಟಿ ಮುತ್ತಿಡುವಂತಹ ಮೌನ ಚಪ್ಪಾಳೆ ತಟ್ಟಿ, ತಮ್ಮ ಮೆಚ್ಚುಗೆ ಸೂಚಿಸುತ್ತಾರೆ. ನೆರೆದವರ ಕಂಗಳಲ್ಲಿ ಹೊಸ ಹೊಳಪಿನೊಂದಿಗೆ ಮತ್ತೊಂದು ಓದಿನತ್ತ ಸಾಗುತ್ತಾರೆ. ಸದ್ದಿಲ್ಲದೆಯೇ ಕನ್ನಡ ಪುಸ್ತಕ ಸಂಸ್ಕೃತಿಯೊಂದು ಭರಾಟೆಯಲ್ಲಿ ಸಾಗಿದೆ. ಸಾಧ್ಯವಾದವರೆಲ್ಲ ಹೋಗಿ ಓದಬಹುದು, ಹೊಸ ಓದುಗರ ಪರಿಚಯ ಮಾಡಿಕೊಳ್ಳಬಹುದು.

ಪುಸ್ತಕ ಮತ್ತು ಪರಿಸರ ಪ್ರಿಯರು...

(ಅ)ಪರಿಚಿತ ಓದುಗರು ಪರಿಕಲ್ಪನೆಯೊಂದು ಪುಸ್ತಕ ಪ್ರಿಯರ, ಪರಿಸರ ಪ್ರಿಯರ ಗುಂಪಾಗಿ ಬದಲಾಯಿತು. ಹೀಗೆ ಬದಲಾಗುವಲ್ಲಿ ಅನಂತ್ ಅವರ ಜೊತೆಗೆ ನಿಂತವರು, ಬೆನ್ನಿಗೆ ನಿಂತವರು, ಒಟ್ಟಿಗೆ ನಿಂತವರು ಹಲವರು.



ಸಂಜಯ್ ಶೆಟ್ಟಿ, ಅಲೆಮಾರಿ ಭಾಸ್ಕರ್, ಕವನ ವಿ, ಚೇತನ್ ಗವಿಗೌಡ, ರಾಜು ಸಿ, ಕೃಪಾ ಬಿ.ಎಂ, ನವೀನ್ ಕುಮಾರ್, ಶಿವಾಗ್, ಸ್ಫೂರ್ತಿ ಮುರಳೀಧರ್, ನಂದಕುಮಾರ ಜಿ.ಕೆ ಇವರೆಲ್ಲ ಜೊತೆಯಾದರು.

18 ತಿಂಗಳಲ್ಲಿ ವರ್ಷಕ್ಕೆ ನಾಲ್ಕು ಚಾರಣ, ಒಂದು ವಾರ್ಷಿಕ ಪುಸ್ತಕೋತ್ಸವ ಮತ್ತು ಓದುಗರ ಮಿಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ಪ್ರಕೃತಿಯ ಮಡಿಲಲ್ಲಿ ಹೋಗಿ ಓದುವ, ಓದಿನ ಸುಖದ ಕುರಿತೇ ಸಲ್ಲಾಪ, ಸಂವಾದ ಹಮ್ಮಿಕೊಳ್ಳುತ್ತಿದ್ದಾರೆ.




ಕಬ್ಬನ್ ಪಾರ್ಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಓದುಗರು

ಆಗಾ ಖಾನ್ ಅರಮನೆ ಗಾಂಧಿಗೆ ಸೆರೆಮನೆ!

10ನೇ ಪುಟದಿಂದ..

ಕ್ರಿಪ್ಸ್‌ನ ಕರಾಳ ಸಂಧಾನ ಹಾಗೂ ವಿಶ್ವ ರಾಜಕಾರಣದ ಅನಿರೀಕ್ಷಿತ ತಿರುವುಗಳು ರಾಷ್ಟ್ರೀಯ ಕಾಂಗ್ರೆಸಿನಲ್ಲಿ ದಿಗಿಲು ಹುಟ್ಟಿಸುತ್ತವೆ. ಆಗ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷರ ವಿರುದ್ಧ 'ಭಾರತ ಬಿಟ್ಟು ತೊಲಗಿ' ಎಂಬ ಅಂತಿಮ ಚಳವಳಿಯನ್ನು ಹೂಡಲು ನಿರ್ಧರಿಸುತ್ತದೆ. ಗಾಂಧಿ ಕ್ರಿಪ್ಸ್ ಗೆ "ಒಡೆದು ಚೂರುಚೂರಾದ ಹುಸಿ ಭಾರತ ನಮಗೆ ಬೇಡ, ಈಗಲೇ ನಮ್ಮ ಪಾಡಿಗೆ ನಮ್ಮನ್ನು ಬಿಟ್ಟು ಬಿಡಿ; ನಾವೇ ನಮ್ಮ ಸವಾಲುಗಳನ್ನು ಬಗೆಹರಿಸಿಕೊಳ್ಳುತ್ತೇವೆ" ಎಂದು ಖಡಾಖಂಡಿತವಾಗಿ ಹೇಳುತ್ತಾರೆ. ಮಾತುಕತೆ ಮುರಿದು ಬೀಳುತ್ತದೆ. ಆಗಸ್ಟ್ 8, 1942 ರಂದು ರಾಷ್ಟ್ರೀಯ ಕಾಂಗ್ರೆಸ್ 'ಕ್ವಿಟ್ ಇಂಡಿಯಾ' ಚಳವಳಿಗೆ ಕರೆ ಕೊಡುತ್ತದೆ. 'ಮಾಡು ಇಲ್ಲವೇ ಮಡಿ' ಕ್ರಾಂತಿಘೋಷ ದೇಶದೆಲ್ಲೆಡೆ ಅನುರಣಿಸುತ್ತದೆ. ಉಗ್ರಗೊಂಡ ಬ್ರಿಟಿಷರು, ಗಾಂಧೀಜಿಯನ್ನು ಚಳವಳಿ ಪ್ರಾರಂಭವಾಗುವ ಮುನ್ನವೇ ಬಂಧಿಸುತ್ತಾರೆ. ಅಲ್ಲದೆ, ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಮುಖರನ್ನೂ ವಿವಿಧ ಸೆರೆಮನೆಗಳಿಗೆ ತಳ್ಳುತ್ತಾರೆ. ಆಗಸ್ಟ್ 9 ರಂದೇ ಗಾಂಧೀಜಿ ಪರಿವಾರವನ್ನು ಪಾಳು ಬಿದ್ದಿದ್ದ 'ಆಗಾ ಖಾನ್ ಅರಮನೆ'ಯನ್ನು ಸೆರಮನೆಯನ್ನಾಗಿಸಿ ಅದರಲ್ಲಿ ಬಂಧಿಸಿಡುತ್ತಾರೆ.

ಗಾಂಧೀಜಿಯೊಂದಿಗೆ ಪತ್ನಿ ಕಸ್ತೂರ ಬಾ, ಸರೋಜಿನಿ ನಾಯ್ಡು, ಮಹದೇವ ದೇಸಾಯಿ, ಮೀರಾಬೆನ್ ಹಾಗೂ ಸಹಾಯಕ ಪ್ಯಾರೆಲಾಲ್ ಇರುತ್ತಾರೆ. ಸೆರೆಗೆ ಹಾಕಿದ ಐದೇ ದಿನಗಳಲ್ಲಿ (ಆಗಸ್ಟ್ 15 ರಂದು) ಗಾಂಧೀಜಿಯ ಆಪ್ತ ಮಹದೇವ ದೇಸಾಯಿ ನಿಧನರಾಗುತ್ತಾರೆ. ಹೊರಗಡೆಯ ಹಿಂಸಾಚಾರದ ಹೊಣೆಯನ್ನು ಗಾಂಧೀಜಿ ಮೇಲೆ ಹೇರಲು ಸರ್ಕಾರ ವಾಮಮಾರ್ಗ ಹಿಡಿದು, ಅಹಿಂಸ ತತ್ವಕ್ಕೆ ಕಳಂಕ ತರಲು ಪ್ರಯತ್ನಿಸುತ್ತದೆ. ಇದು ಗಾಂಧೀಜಿಯನ್ನು ಖಿನ್ನಗೊಳಿಸಿ 21 ದಿನಗಳ ಉಪವಾಸ ಸತ್ಯಾಗ್ರಹಕ್ಕೆ ನಾಂದಿಯಾಗುತ್ತದೆ. ಉಪವಾಸದಲ್ಲಿ ಎರಡು ಬಾರಿ ಗಾಂಧೀಜಿ ಸಾವಿನ ಬಾಗಿಲನ್ನು ತಟ್ಟಿದ್ದರೂ, ಕಸ್ತೂರ ಬಾ ಹಾಗೂ ಮೀರಾಬೆನ್ ಅವರ ಆರೈಕೆಯಿಂದ ಪಾರಾಗುತ್ತಾರೆ.



ಸೆರೆಯ ಏಕತಾನತೆ ಹಾಗೂ ವಯೋಸಹಜ ಅನಾರೋಗ್ಯ ಹೋರಾಟಗಾರರನ್ನು ತುಂಬಾ ಕಾಡುತ್ತವೆ. ಈ ಕಾರಣಗಳಿಂದ ಬಂಧನಕ್ಕೊಳಗಾದ ಏಳನೇ ತಿಂಗಳಿನಲ್ಲಿ ಸರೋಜಿನಿ ನಾಯ್ಡು ಅವರನ್ನು ಬಿಡುಗಡೆ ಮಾಡಲಾಗುತ್ತದೆ. ಮೀರಾಬೆನ್ ಹಾಗೂ ಕಸ್ತೂರ ಬಾ ಅವರ ಆರೋಗ್ಯವೂ ಕ್ಷೀಣಗೊಳ್ಳುತ್ತದೆ. ಆದರೆ, ಪ್ರಧಾನಿ ಚರ್ಚಿಲ್ ಅವರ ಹಠಮಾರಿತನದಿಂದಾಗಿ ನೆರವು ನೀಡಲಾಗದೆ ವೈಸರಾಯ್ ವೇವೆಲ್ ಅಸಹಾಯಕರಾಗುತ್ತಾರೆ. ಮುಂದೆ ಕಸ್ತೂರ ಬಾ ಅವರ ಆರೋಗ್ಯ ಸಂಪೂರ್ಣ ಹದಗೆಟ್ಟು ಗಾಂಧೀಜಿಯ ತೊಡೆ ಮೇಲೆ ವಿರಮಿಸುತ್ತಿರುವಾಗಲೇ ಕೊನೆಯುಸಿರೆಳೆಯುತ್ತಾರೆ. ಒಂದರ ಹಿಂದೆ ಬಂದೆರಗುವ ಆತ್ಮೀಯರ ಸಾವು ಅವರನ್ನು ಖಿನ್ನತೆಗೆ ದೂಡುತ್ತದೆ. ಆರೋಗ್ಯವೂ ಕ್ಷೀಣಿಸುತ್ತದೆ. ವೈದ್ಯರ ಸಲಹೆಯಿಂದಾಗಿ ಮೇ 6, 1944 ರಂದು ಚರ್ಚಿಲ್ ವಿರೋಧವನ್ನು ಲೆಕ್ಕಿಸದೆ ವೈಸರಾಯ್ ವೇವೆಲ್ ಗಾಂಧಿಯನ್ನು ಬಿಡುಗಡೆಗೊಳಿಸುತ್ತಾನೆ.

ಅರಮನೆ ನಿರ್ಮಾಣಗೊಂಡಿದ್ದು ಏಕೆ?

ಭಾರತೀಯ ಪುರಾತತ್ವ ಇಲಾಖೆ ಸುಪರ್ದಿಯಲ್ಲಿರುವ ಅರಮನೆಯನ್ನು ಆಗಾ ಖಾನ್ 1892 ರಲ್ಲಿ ಕಟ್ಟಿಸಿದರು. ಖಾನ್ ಕುಟುಂಬವು ಜನಾನುರಾಗಿಯೂ, ಸಮಾಜಮುಖಿಯೂ ಆಗಿತ್ತು. ಆಗ ಪುಣೆಯ ಸುತ್ತಮುತ್ತ ಭೀಕರ ಬರಗಾಲವಿತ್ತು. ಜನ ಹಸಿವೆಯಿಂದ ತತ್ತರಿಸುತ್ತಿರುತ್ತಾರೆ. ನೊಂದವರಿಗೆ ಕೆಲಸ ಕೊಡುವ ಸಲುವಾಗಿ ಅರಮನೆಯನ್ನು ಕಟ್ಟಿಸಲು ಖಾನ್ ಮುಂದಾಗುತ್ತಾರೆ. ಇದನ್ನು ಕಟ್ಟಲು ಐದು ವರ್ಷಗಳಲ್ಲಿ ₹ 12 ಲಕ್ಷಗಳನ್ನು ವ್ಯಯಿಸಲಾಗುತ್ತದೆ.

ಈಗ ಅರಮನೆಯನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಭಾರತ ಸರ್ಕಾರ ಘೋಷಿಸಿದೆ. ಈ ಘೋಷಣೆಯ ಹಿಂದೆಯೂ ಜನರ ಹೋರಾಟದ ದೊಡ್ಡ ಕಥೆಯೇ ಇದೆ. ನಿರ್ವಹಣೆ ಇಲ್ಲದೆ ಶಿಥಿಲಗೊಂಡಿರುವ ಅರಮನೆಯನ್ನು ಸರ್ಕಾರ ನಿರ್ವಹಣೆ ಮಾಡಬೇಕು ಎಂದು 1999 ರಲ್ಲಿ ಪುಣೆಯ ನಾಗರಿಕರು ಆಮರಣ ಉಪವಾಸವನ್ನು ಕೈಗೊಳ್ಳಬೇಕಾಗುತ್ತದೆ. ಈ ಹೋರಾಟದ ನಂತರ ಕಟ್ಟಡ ತಕ್ಕ ಮಟ್ಟಿಗೆ ಸುಸ್ಥಿತಿಗೆ ಬಂದಿದೆ. ನಯನ ಮನೋಹರವಾಗಿರುವ ಅರಮನೆಯೊಳಗಡೆ ವಿವಿಧ ಹಾಲ್‌ಗಳಲ್ಲಿ ಗಾಂಧೀಜಿ ದಂಪತಿ ನಿತ್ಯವೂ ಬಳಸುತ್ತಿದ್ದ ವಸ್ತುಗಳನ್ನು ಪೇರಿಸಿಡಲಾಗಿದೆ. ತೀವ್ರ ಉಬ್ಬಸವನ್ನು ಕಡಿಮೆಗೊಳಿಸಲು ಕಸ್ತೂರ ಬಾ ತಮ್ಮ ಎದೆಗೊತ್ತಿಕೊಂಡು ಮಲಗುತ್ತಿದ್ದ ಮೇಜೂ ಇದೆ. ಚರಿತ್ರೆ ಗೊತ್ತಿರುವ ಯಾರಿಗಾದರೂ ಅದನ್ನು ನೋಡಿದಾಗ ನೋವಾಗದೆ ಇರದು. ಕಲಬುರಗಿಯವರಾದ ಹೆಸರಾಂತ ಕಲಾವಿದ ದಿವಂಗತ ಎಸ್.ಎಂ. ಪಂಡಿತರು, ಗಾಂಧಿಯ ತೊಡೆ ಮೇಲೆ ತಲೆಯಿಟ್ಟು ಮಲಗಿರುವಾಗ ಕಸ್ತೂರ ಬಾ ಅವರ ಪ್ರಾಣಪಕ್ಷಿ ಹಾರಿಹೋದಾಗಿನ ಕ್ಷಣದ ತೈಲಚಿತ್ರವು ಕಣ್ಣುಗಳನ್ನು ತೇವ ಮಾಡದಿರದು. ಅರಮನೆಯ ವಿಶಾಲ ಪ್ರದೇಶದಲ್ಲಿ ಉದ್ಯಾನವನ, ಗ್ರಂಥಾಲಯ, ಖಾದಿ ಮಳಿಗೆ ಹಾಗೂ ಗುಡಿ ಕೈಗಾರಿಕೆಗಳ ತರಬೇತಿ ಕೇಂದ್ರವಿದೆ. ಹಸಿರಿನ ಪ್ರಶಾಂತತೆಯಲ್ಲಿ ಗಾಂಧೀಜಿ, ಕಸ್ತೂರ ಬಾ ಹಾಗೂ ಮಹದೇವ ದೇಸಾಯಿ ಅವರು ಚಿತಾಭಸ್ಮದ ಸ್ಮಾರಕಗಳಿವೆ.

ಮುನ್ನೋಟ 29-09-2024 ರಿಂದ 05-10-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಇರುತ್ತದೆ. ಬಂಧುಗಳಿಂದ ಸಹಾಯ ಪಡೆಯಲು ಎಲ್ಲ ಮಾರ್ಗಗಳನ್ನು ಬಳಸುವಿರಿ. ಆಸ್ತಿ ವ್ಯವಹಾರ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಸ್ವಲ್ಪ ಹಿನ್ನಡೆ ಕಾಣಬಹುದು. ಸರ್ಕಾರಿ ವ್ಯವಹಾರಗಳಲ್ಲಿ ನಿರೀಕ್ಷಿತ ಅಭಿವೃದ್ಧಿ ಇರುವುದಿಲ್ಲ. ನಿಮ್ಮ ಸಂಗಾತಿಯಿಂದ ಆರ್ಥಿಕ ಸಹಕಾರವನ್ನು ನಿರೀಕ್ಷೆ ಮಾಡಬಹುದು. ಕಬ್ಬಿಣದ ಮಾರಾಟಗಾರರಿಗೆ ಲಾಭವಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಭಾಷಣಕಾರರಿಗೆ ಉತ್ತಮ ವೇದಿಕೆ ದೊರೆಯುತ್ತದೆ. ಸಮಾಜದಿಂದ ನಿಮಗೆ ಗೌರವ ಸಿಗುವ ಸಾಧ್ಯತೆಗಳಿವೆ. ಕೃಷಿಯಿಂದ ಆದಾಯವಿರುತ್ತದೆ. ಕುಟುಂಬದ ಹಿರಿಯರಿಂದ ಸಹಕಾರ ದೊರೆಯುತ್ತದೆ. ಹೈನುಗಾರಿಕೆ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಸಿಗುವ ಸಾಧ್ಯತೆ ಇದೆ. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಶಕ್ತಿ ಸಾಮರ್ಥ್ಯಗಳ ಬಗ್ಗೆ ಹೆಚ್ಚು ಗಮನ ಹರಿಸುವಿರಿ. ನಿಮ್ಮ ಮಾತುಕತೆ ಮತ್ತು ನಡವಳಿಕೆಯಿಂದ ಹಣ ಸಂಪಾದನೆ ಮಾಡಲು ಅವಕಾಶ ಮಾಡಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಅನುಕೂಲವಿರುತ್ತದೆ. ಹೆಣ್ಣು ಮಕ್ಕಳ ಅಭಿವೃದ್ಧಿ ಬಹಳ ಉತ್ತಮವಾಗಿರುತ್ತದೆ. ಬೆಂಕಿಯೊಡನೆ ಕೆಲಸ ಮಾಡುವವರು ಹೆಚ್ಚು ಎಚ್ಚರದಿಂದಿರಿ. ಬಂಧುಗಳ ನಡುವೆ ಹಣಕಾಸಿನ ವ್ಯವಹಾರ ಖಂಡಿತಬೇಡ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಾರದ ಆರಂಭ ಬಹಳ ಸಂತೋಷದಾಯಕವಾಗಿರುತ್ತದೆ. ಆದಾಯ ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಸಂಗೀತಗಾರರಿಗೆ ಉತ್ತಮ ಅವಕಾಶಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ನಿಮ್ಮ ಒಳ್ಳೆಯ ಕೆಲಸಗಳಿಗೆ ಬಂಧುಗಳು ಮತ್ತು ಸಮಾಜದವರು ಸಹಕಾರ ನೀಡುವರು. ಸ್ಥಿರಾಸ್ತಿಯನ್ನು ಮಾಡಿಕೊಳ್ಳಲು ಈಗ ಉತ್ತಮ ಕಾಲ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಕೆಲವು ಮನೋಕಾಮನೆಗಳು ಈಡೇರಿ ಸಂತೋಷವಾಗುತ್ತದೆ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಸಹೋದರಿಯ ಸಹಕಾರ ಸಿಗುತ್ತದೆ. ಕೃಷಿಭೂಮಿಯ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಕೃಷಿಯಿಂದ ಈಗ ಹೆಚ್ಚು ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಇರುತ್ತದೆ. ಸಂಗಾತಿ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆತ್ಮವಿಶ್ವಾಸ ಈಗ ಸ್ವಲ್ಪ ಹೆಚ್ಚಾಗುತ್ತದೆ. ಆದಾಯದಲ್ಲೂ ಸ್ವಲ್ಪ ಏರಿಕೆಯಾಗುತ್ತದೆ. ಕಠಿಣ ಪರಿಶ್ರಮದಿಂದ ವೃತ್ತಿಯಲ್ಲಿ ಹೆಸರು ಗಳಿಸಬಹುದು. ನಿಮ್ಮ ಕಾರ್ಯಗಳಿಗೆ ಬಂಧುಗಳ ಸಹಕಾರ ದೊರೆಯುತ್ತದೆ. ಸಂಗಾತಿಗೆ ಹಿರಿಯರ ಆಸ್ತಿ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಉದ್ಯೋಗದಲ್ಲಿ ನಿರೀಕ್ಷಿತ ಪ್ರಗತಿಯನ್ನು ಕಾಣಲಾಗುವುದಿಲ್ಲ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಬಹಳ ಬುದ್ಧಿವಂತರಂತೆ ವರ್ತಿಸಲು ಆರಂಭಿಸುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಕೆಲವು ಹಿರಿಯರು ಹಾಗೂ ನಿಮ್ಮ ಸಮಾಜದ ಮುಖಂಡರುಗಳು ನೀವು ಮಾಡಿದ ಕೆಲಸ ಕಾರ್ಯಗಳಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುವರು. ಸಂಸಾರದಲ್ಲಿ ಸಂತೋಷದಷ್ಟೇ ಕೋಪವು ಇರುತ್ತದೆ. ವಿದ್ಯಾರ್ಥಿಗಳಿಗೆ ಫಲಿತಾಂಶದಲ್ಲಿ ಸ್ವಲ್ಪ ಹಿನ್ನಡೆ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮಶಕ್ತಿಸಾಮರ್ಥ್ಯಗಳು ಕಡಿಮೆಯಾದಂತೆ ಕಂಡರೂ ಬುದ್ಧಿ ಬಹಳ ಚುರುಕಾಗಿ ಕೆಲಸ ಮಾಡುತ್ತದೆ. ಆದಾಯವು ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲದಿದ್ದರೂ ತೊಂದರೆ ಇರುವುದಿಲ್ಲ. ಕೃಷಿ ಮಾಡಲು ಹೆಚ್ಚು ಉತ್ಸುಕತೆ ತೋರುವಿರಿ. ವಿದೇಶದಲ್ಲಿ ಓದುವವರಿಗೆ ಹೆಚ್ಚು ಅವಕಾಶ ದೊರೆಯುತ್ತದೆ. ಶಸ್ತ್ರಚಿಕಿತ್ಸೆಯಾಗಬೇಕೆಂದಿದ್ದವರು ಔಷಧೋಪಚಾರದಲ್ಲಿ ಗುಣಮುಖರಾಗಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಕೆಲವೊಂದು ದೃಢ ನಿರ್ಧಾರಗಳನ್ನು ಕೈಗೊಳ್ಳುವುದು ಅಗತ್ಯವಾಗಿರುತ್ತದೆ. ಆದಾಯ ಕಡಿಮೆ ಇರುತ್ತದೆ. ಶತ್ರುಗಳು ನಿಮ್ಮ ತಂಟೆಗೆ ಬರಲು ಭಯಪಡುವರು. ಮಕ್ಕಳ ಅಭಿವೃದ್ಧಿ ಉತ್ತಮವಾಗಿರುತ್ತದೆ. ಹೊಟ್ಟೆಯಲ್ಲಿ ತೊಂದರೆಗಳು ಕಂಡರೂ ಸಮಸ್ಯೆಯಾಗುವುದಿಲ್ಲ. ಸಂಬಂಧಿಕರ ಸಹಾಯ ದೊರೆಯುತ್ತದೆ. ಸಂಗಾತಿಯಿಂದ ನಿಮಗೆ ಸೂಕ್ತ ಸಹಕಾರ ಸಿಗುತ್ತದೆ. ಗಣಿಗಾರಿಕೆ ಮಾರುವವರಿಗೆ ಅಭಿವೃದ್ಧಿ ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಶ್ರಮ ಪಟ್ಟು ಕೆಲಸ ಮಾಡಿ ಆದಾಯ ಪಡೆಯುವಿರಿ. ಆದಾಯ ಕಡಿಮೆ ಇದ್ದರೂ ಸರಿಯಾಗಿ ನಿಭಾಯಿಸುವಿರಿ. ಬಂಧುಗಳು ನಿಮ್ಮ ವಿರುದ್ಧ ಇದ್ದರೂ, ಅವರನ್ನು ಮೀರಿ ನಿಮ್ಮ ಕೆಲಸಗಳನ್ನು ಸಾಧಿಸುವಿರಿ. ಕೃಷಿಯಿಂದ ಉತ್ತಮ ಆದಾಯ ಪಡೆಯುವಿರಿ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುತ್ತದೆ. ಕ್ರೀಡಾಪಟುಗಳಿಗೆ ಉತ್ತಮ ಅಭಿವೃದ್ಧಿ ಇರುತ್ತದೆ. ಸಾಹಸ ಕಲಾವಿದರುಗಳಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿರಿಯರು ಈ ಹಿಂದೆ ಮಾಡಿದ ಒಳ್ಳೆಯ ಕೆಲಸಗಳಿಗೆ ಉತ್ತಮ ಫಲಿತಾಂಶ ಪಡೆಯುವರು. ಯುವಕರು ಮಾತನಾಡುವಾಗ ಬಹಳ ಎಚ್ಚರಿಕೆಯಿಂದ ಇರುವುದು ಒಳ್ಳೆಯದು. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಭೂಮಿಯ ವ್ಯವಹಾರ ಮಾಡುವವರಿಗೆ ಲಾಭ ಇರುತ್ತದೆ. ಕ್ರೀಡಾಪಟುಗಳಿಗೆ ಅಪೇಕ್ಷಿತ ಸೌಲಭ್ಯಗಳು ದೊರೆಯುತ್ತವೆ. ಸಂಗಾತಿ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ನಿರ್ಧಾರಗಳಲ್ಲಿ ಸಾಕಷ್ಟು ದ್ವಂದ್ವಗಳಿರುತ್ತವೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಕೃಷಿಯಿಂದ ಆದಾಯ ಹೆಚ್ಚಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ. ವೃತ್ತಿಯಲ್ಲಿ ಹಿರಿಯರ ಸಹಕಾರ ದೊರೆಯುತ್ತದೆ. ಅಲಂಕಾರಿಕ ವಸ್ತುಗಳನ್ನು ತಯಾರು ಮಾಡುವವರಿಗೆ ಹಿನ್ನಡೆಯಾಗುತ್ತದೆ. ಸಂಗಾತಿಯು ನಿಮ್ಮೆಲ್ಲಾ ಕೆಲಸಗಳಿಗೆ ಸಹಕಾರ ನೀಡುವುದಿಲ್ಲ, ಆದರೆ ಕಾಳಜಿ ಇರುತ್ತದೆ.

ಪದಬಂಧ 2860



ಮೇಲಿನಿಂದ ಕೆಳಕ್ಕೆ

1. ಶಬ್ದಮಣಿದರ್ಪಣದ ಅರಸ ಕನ್ನಡ ವ್ಯಾಕರಣ ಪಿತಾಮಹ 4
2. ಆಪತ್ಕಾಲದಲ್ಲಿ ನೆತ್ತರನ್ನು ಕೊಡುಗೆಯಾಗಿ ನೀಡುವವ 4
3. ಬಂಗಾರವೇ ಮಳೆಯಾಗಿ ಸುರಿದಿದೆ 5
4. ಕೋಣರೂಪಿ ರಕ್ಕಸನನ್ನು ಸಂಹರಿಸಿದ ಶಕ್ತಿ ದೇವತೆ 6
6. ಬಯಕೆಯನ್ನು ಬಿಟ್ಟು ಮಾಡುವ ಕೆಲಸ 5
10. ಪತಿಗೆ ಹತ್ತಿರವಾದ ಹೆಂಡತಿ ಶಿವಪ್ರಿಯೆ 2
11. ಹಗರಣ, ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸುವ ತಂಡ 5
12. ಲಕ್ಷ್ಯ ಕೊಡು ಎಂಬ ಬುದ್ದಿವಾದದ ಮಾತು 6
13. ತಿಳಿ ಹೇಳಿದರೆ ವೈರಿಯಾಗಬಹುದು 2
14. ಇದೇ ಅಕ್ಟೋಬರ್ ಎರಡು ರಾಷ್ಟ್ರಪಿತನ ಜನ್ಮದಿನಾಚರಣೆ 5
16. ಶ್ಯಾಮವರ್ಣದ ಆಗಸ 4
17. ಅಮೃತದಂತಹ ಪೂಸು 4

ಎಡದಿಂದ ಬಲಕ್ಕೆ

1. ನೂಲು ಕಟ್ಟಿರುವ ಹಿಮಾಲಯದ ಶಿವ ಕ್ಷೇತ್ರ 3
3. ನಮ್ಮ ಯುಗದ ಬಲಶಾಲಿ ವಾಯುಪುತ್ರ 4
5. ಶಿವಾನಿಯನ್ನು ಹೋಲುವ ಹಿಮಾಲಯದ ಹುಡುಗಿ 3
7. ರಸ್ತೆಯಲ್ಲಿ ಹಾದು ಹೋಗುವ ಅಪರಿಚಿತ ವ್ಯಕ್ತಿ 4
8. ಸ್ವರ್ಗಕ್ಕೆ ಸಮನಾದ ಜನ್ಮದಾತೆ 3
9. ಉಳಿದ ಜೀವನವನ್ನು ಕಳೆಯಲು ಹಿರಿಯರಿಗೆ ವ್ಯವಸ್ಥಿತ ಆಶ್ರಯ ತಾಣ 4
10. ಎಲ್ಲವೂ ಕೂಡಿ ತರುವ ಸಮತೆ 3
11. ಕಲಿಕೆಗೆ ಶಾಲೆಯಲ್ಲಿ ಕಲ್ಪಿಸಿರುವ ಮಜಲುಗಳು 4
13. ಅನ್ಯ ಮಾರ್ಗವಿಲ್ಲದ ಸ್ಥಿತಿ 4
14. ಅಂಧತ್ವವನ್ನು ಆಯ್ಕೆ ಮಾಡಿಕೊಂಡ ಕೌರವ ಮಾತೆ 3
15. ಒಂಭತ್ತು ರೀತಿಯ ಸಂಪತ್ತು 4
16. ಹಸಿವಾಗಲೀ, ಬಾಯಾರಿಕೆಯಾಗಲೀ, ತೊಂದರೆಯಾಗಲೀ ಅವನ್ನು ದೂರಗೊಳಿಸು 3
18. ಗೆಲುವು ಪಡೆದವ ಚಾರಿತ್ರ್ಯವಂತನೂ ಹೌದು 4
19. ರಾಜಕೀಯ ವಲಯದಲ್ಲಿ ತರಲೆ ಮಾಡುವವ 3
20. ಸೋಗಲಾಡಿ ಬೆಡುಗುಗಾತಿ 4
21. ಬಟ್ಟಲು ತುಂಬುವ ನಕ್ಷತ್ರ 3

ಪದಬಂಧ ಉತ್ತರ -2859

ಮೇಲಿಂದ ಕೆಳಕ್ಕೆ

1.ಇರುವಂತಿಗೆ 2.ನಿಜ 3.ಕರಿ 5.ಸಾಮ 6.ಸಲಾಮು 8.ತಪತಿ 10.ಸಮಾಚಾರ 12.ನಟವರ 14.ಪದಕಿ 15.ಚತುರಾನನ 16. ಸಹನೆ 19.ಬಕ 20.ಸಾಲು 22.ಸುಮ

ಎಡದಿಂದ ಬಲಕ್ಕೆ

1. ಇಬ್ಬನಿ 3.ಕಲರು 4. ಜಪಿಸು 6.ಸವಾರಿ 7.ಮಹಾಂತ 9.ತಿಳಿಹಾಸ 11.ಮುಗುಳುನಗೆ 13.ಮಾನವತಿ 14.ಪರಾಭವ 15.ಚರಣದಾಸ 17. ರಸಖುತು 18.ಕಿರುಬ 20.ಸಾಧನೆ 21.ಕಲಿಸು 23.ನವಿಲು 24.ಮದನ

ವಜ್ರದ ನೆಪ ಕಲಾಕೃತಿಗಳ ಜಪ



ರಂಗಸ್ವಾಮಿ ಡಿ. ಅವರ ಕೈಚಳಕದಲ್ಲಿ ಮೂಡಿದ 'ಚೈಲ್ಡ್‌ವುಡ್' ಕಲಾಕೃತಿ

ಸುಮಾ ಬಿ

ಅಲ್ಲಿ ವಯಸ್ಸು–ಅನುಭಾವದ ಅಂತರ ಅರಿವಿಗೆ ಬಾರದೆ ಆ ಮೊಗಸಾಲೆಯಲ್ಲಿದ್ದ ಅಷ್ಟೂ ಕಲಾಕೃತಿಗಳು ಚಿಂತನೆಗೆ ಹಚ್ಚುತ್ತಿದ್ದವು. ಭಾವವನ್ನು ಉದ್ದೀಪಿಸುತ್ತಿದ್ದವು. ಒಂದೊಂದು ಕಲಾಕೃತಿಯೂ ಭಿನ್ನ, ವಿಭಿನ್ನ ಅನುಭಾವ ನೀಡುತ್ತ ಕಲಾಸಕ್ತರನ್ನು ಬೇರೆಯೇ ಲೋಕಕ್ಕೆ ಕರೆದ್ಯೊಯುತ್ತಿದ್ದವು. ಬ್ರಶ್ ಹಿಡಿದು ಕ್ಯಾನ್ವಾಸ್ ಮೇಲೆ ಚಿತ್ರ ಮೂಡಿಸುವುದು ಹೇಳಿಕೊಟ್ಟ ಪಾಠಶಾಲೆಯಲ್ಲಿ ಇಂತಹ ಕಲಾಕೃತಿಗಳು ಪ್ರದರ್ಶನಗೊಂಡಾಗ ಆಗುವ ಸಾರ್ಥಕತೆಯೇ ಬೇರೆ. ಅಲ್ಲಿ ಪ್ರದರ್ಶನಗೊಂಡ ಕಲಾಕೃತಿಗಳ ರೂವಾರಿಗಳು ಆ ಸಾರ್ಥಕತೆಗೆ ಪಾತ್ರರಾದರು.

ಇದಕ್ಕೆ ವೇದಿಕೆ ಒದಗಿಸಿದ್ದು ದಾವಣಗೆರೆಯ ದೃಶ್ಯಕಲಾ ಕಾಲೇಜು. 'ವಜ್ರ ಮಹೋತ್ಸವ'ದ ಸಂಭ್ರಮದಲ್ಲಿರುವ ಈ ಕಾಲೇಜು, ತನ್ನದೇ ವಿದ್ಯಾರ್ಥಿಗಳು ರಚಿಸಿದ ಕಲಾಕೃತಿಗಳನ್ನು ಅಲಂಕರಿಸಿಕೊಂಡು, ಆಲಂಗಿಸಿಕೊಂಡು ಖುಷಿಪಟ್ಟಿತು. ಹಿರಿ–ಕಿರಿಯ ವಿದ್ಯಾರ್ಥಿಗಳ ಸಮಾಗಮ, ಅವರು ರಚಿಸಿದ ಕಲಾಕೃತಿಗಳು ಮಹೋತ್ಸವದ ಸಂಭ್ರಮವನ್ನು ಹೆಚ್ಚಿಸಿದವು.

ದಾವಣಗೆರೆ ಕಲಾಶಾಲೆ ಹಳೆ ವಿದ್ಯಾರ್ಥಿಗಳ ಸಂಘವು (ದಾಕಹವಿಸ) ಕಾಲೇಜಿನ ವಜ್ರ ಮಹೋತ್ಸವವನ್ನು ಸ್ಮರಣೀಯಗೊಳಿಸಲು ಆಯೋಜಿಸಿದ್ದ ಎರಡು ದಿನಗಳ ಕಾರ್ಯಕ್ರಮ ಕಲಾಸಕ್ತರ, ಕಲಾವಿದರ ಹೃನ್ಮನ ತಣಿಸಿತು. ಕಾರ್ಯಕ್ರಮದಲ್ಲಿ ಪ್ರದರ್ಶನಗೊಂಡ ಕಲಾಕೃತಿಗಳು ಕಲಾಸಿಕರ ಮನಗೆದ್ದವು.

ರಾಜಕೀಯ ಒಳಸುಳಿಗಳನ್ನು ವಿಡಂಬಿಸುವ, ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಹೆಣ್ಣು ಭ್ರೂಣಹತ್ಯೆ, ಆರೋಗ್ಯದ ಅರಿವು ಇರದ ಜನ... ಹೀಗೆ ಪ್ರಸಕ್ತ ವಿದ್ಯಮಾನಗಳು ಕ್ಯಾನ್ವಾಸ್ ಮೇಲೆ ಜೀವತಳೆದಿದ್ದವು. ನೋಡಿದಾಕ್ಷಣ ಗ್ರಹಿಕೆಗೆ ನಿಲುಕದ, ಮನಸ್ಸನ್ನು ತರ್ಕಕ್ಕೆ ಹಚ್ಚಿ ಭಾವಾರ್ಥ ಶೋಧಿಸುವಂತೆ ಮಾಡುವ ಕಲಾಕೃತಿಗಳೂ ಬೆರಗು ಮೂಡಿಸುತ್ತಿದ್ದವು.

ಬಹುಮಾಧ್ಯಮದಲ್ಲಿ ರಚನೆಗೊಂಡ ಕಲಾಕೃತಿಗಳು ಅಲ್ಲಿ ಪ್ರದರ್ಶನಕ್ಕಿವೆ. ಕ್ಯಾನ್ವಾಸ್ ಮೇಲೆ ಮೂಡಿದ ಚಿತ್ರಗಳಲ್ಲದೇ, ಶಿಲ್ಪಕಲೆ, ಕಂಚು, ಕಬ್ಬಿಣ, ತಾಮ್ರ, ಲೋಹ, ಫೈಬರ್‌ನಿಂದ ರಚನೆಗೊಂಡ ಕಲಾಕೃತಿಗಳು ಬರಸೆಳೆಯುತ್ತವೆ. 1964–65ನೇ ಸಾಲಿನ ವಿದ್ಯಾರ್ಥಿಗಳಿಂದ ಹಿಡಿದು 2022–23ನೇ ಸಾಲಿನ ವಿದ್ಯಾರ್ಥಿಗಳ ಆಯ್ದ 40 ಕಲಾಕೃತಿಗಳು ಪ್ರದರ್ಶನಗೊಂಡಿದ್ದು ವಿಶೇಷ.

ರಾಜಕೀಯದಲ್ಲಿ ಒಬ್ಬರನ್ನೊಬ್ಬರು ತುಳಿಯುತ್ತ ಅದೇ ಸುಳಿಯಲ್ಲಿ ಸಿಲುಕಿಕೊಳ್ಳುವ ಪರಿಯನ್ನು ವಿನೋದ್ ಕುಮಾರ್ 'ಡೆಮಾಕ್ರಟ್ಸ್ ಇನ್ ಪಾಲಿಟಿಕ್ಸ್' ಕೃತಿಯಲ್ಲಿ ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. ಅದಕ್ಕೆ ಅವರು ಬಳಸಿರುವ ಮಾಧ್ಯಮ 'ಬರ್ನಿಂಗ್ ಆನ್ ವುಡ್', ಅಕ್ರೆಲಿಕ್ ಮಾಧ್ಯಮದಲ್ಲಿ ರಚನೆಗೊಂಡಿರುವ ನಾಗಪತಿ ಭಟ್ ಅವರ 'ಒನ್ ಇಂಚ್ ಗ್ಯಾಪ್' ಕೃತಿ ತರ್ಕಕ್ಕೆ ಹಚ್ಚುತ್ತದೆ. ಆಧುನಿಕ ಜೀವನ ಶೈಲಿಗೆ ಮಾರುಹೋಗಿರುವ ಜನ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದಿಲ್ಲ. ಎಷ್ಟೇ ವರ್ಕ್‌ಔಟ್ ಮಾಡಿದರೂ ಕೈಯಿಂದ ಪಾದದ ಬೆರಳುಗಳನ್ನು ಮುಟ್ಟಲು ಒಂದು ಇಂಚು ಗ್ಯಾಪ್ ಉಳಿಯುತ್ತದೆ ಎಂದು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. ಸುಲೋಚನಾ ವೇಣುಗೋಪಾಲ್ ಅವರು ಪೇಪರ್ ಕೊಲಾಜ್‌ನಲ್ಲಿ ಚಿತ್ರಿಸಿರುವ 'ಧ್ಯಾನಸ್ಥ ಬುದ್ಧ' ಕಲಾಪ್ರೇಮಿಗಳನ್ನು ಹಿಡಿದಿಡುತ್ತದೆ. ಬಿಡಿಬಿಡಿ ಕಾಗದಗಳನ್ನು ಕಲೆಹಾಕಿ ಬುದ್ಧನ ಧ್ಯಾನದ ಭಂಗಿಯನ್ನು ಕಟ್ಟಿಕೊಟ್ಟ ಪರಿ ಸಮ್ಮೋಹನಗೊಳಿಸುತ್ತದೆ.

ಸಂಗೀತದ ಸಾರ ತಿಳಿಸುವ ಚಿ.ಸು.ಕೃಷ್ಣಸೆಟ್ಟಿ ಅವರ ಅಬ್‌ಸ್ಟ್ರಾಕ್ಟ್ ಕಲಾಕೃತಿ, ಫೈಬರ್ ಮಾಧ್ಯಮದಲ್ಲಿ ಪ್ರವೀಣಾಚಾರ್ ರಚಿಸಿದ ಸೀಡ್ಸ್ ಕೃತಿ, ರಂಗಸ್ವಾಮಿ ಡಿ. ಅವರ ಕೈಯಲ್ಲಿ ಅರಳಿದ 'ಚೈಲ್ಡ್ ವುಡ್' ಕೃತಿ, ಲಕ್ಷ್ಮಿ ಮೈಸೂರು ಅವರ ಕುಂಚದಲ್ಲಿ ಅರಳಿರುವ 'ಕನಸು ಕಾಣುವ ಹುಡುಗಿ', ಗಣಪತಿ ಎಸ್. ಹೆಗಡೆ ಅವರ 'ಫ್ಲೋ ಆಫ್ ಎನರ್ಜಿ', ಓಂಕಾರ್ ಮೂರ್ತಿ ಅವರು ಕಲ್ಲು ಹಾಗೂ ಕಂಚಿನಲ್ಲಿ ರಚಿಸಿದ 'ಫ್ಯೂಚರ್ ಲೈಫ್'... ಹೀಗೆ ಅಲ್ಲಿರುವ ಎಲ್ಲ ಕೃತಿಗಳೂ ಕಲೆಯನ್ನು ಆಸ್ವಾದಿಸುವವರ ಸುಪ್ತ ಭಾವಕೋಶವನ್ನು ಬಡಿದೆಬ್ಬಿಸಿ ಮಂತ್ರಮುಗ್ಧಗೊಳಿಸುವಂತಿವೆ.

ಎರಡು ದಿನ ನಡೆದ 'ವಜ್ರ ಮಹೋತ್ಸವ'ದಲ್ಲಿ ಕಾಲೇಜು ಆವರಣ ಅಕ್ಷರಶಃ ಕಲಾಶಾಲೆಯಾಗಿ ರೂಪುಗೊಂಡಿತ್ತು. ಆವರಣದಲ್ಲಿರುವ ಮರಗಳ ಕೆಳಗೆ ಕುಂಚ ಹಿಡಿದು ಕುಳಿತ ಕಲಾವಿದ ತನ್ನ ಭಾವಕ್ಕೆ ತಕ್ಕಂತೆ ಕ್ಯಾನ್ವಾಸ್ ಮೇಲೆ ಅರಳಿಸುವ ಚಿತ್ರಪಟ ಕಲಾಸಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದವು.


ಕಾಲೇಜಿನಲ್ಲಿ ಓದಿ ದೇಶ, ವಿದೇಶಗಳಲ್ಲಿ ನೆಲೆಕಂಡುಕೊಂಡ ಕಲಾವಿದರು ತಮ್ಮ ಕಾಲೇಜು ದಿನಗಳನ್ನು ನೆನೆಯುತ್ತ, ಬಹುವರ್ಷಗಳ ಬಳಿಕ ಸಹಪಾಠಿಗಳನ್ನು ಕಂಡ ಖುಷಿಯಲ್ಲಿ ತೇಲುತ್ತ, ಆ ಸಂಭ್ರಮ ನೋಡಲು ಬಂದವರ ಚಿತ್ರ ರಚಿಸುತ್ತ, ಬಣ್ಣಗಳೊಂದಿಗೆ ಸಮ್ಮಿಳಿತಗೊಂಡರು. ಸ್ಥಳದಲ್ಲೇ ರಚಿಸಿದ ಕಲಾಕೃತಿಗಳನ್ನು ಕಲಿತ ಕಾಲೇಜಿಗೆ ಕೊಡುಗೆಯಾಗಿ ನೀಡಿದರು. ಯುವ ತಲೆಮಾರಿಗೆ ಕಲಾಲೋಕದ ಒಳಹೊರಗಿನ ಅರಿವು ಮೂಡಿಸಿದರು. ಕಾಲೇಜಿನ ತಮ್ಮ ನೆನಪುಗಳನ್ನು ಹಸಿರಾಗಿಸಲು 60 ಬ್ಯಾಚ್‌ನ ವಿದ್ಯಾರ್ಥಿಗಳೂ 60 ಸಸಿಗಳನ್ನು ಆವರಣದಲ್ಲಿ ನೆಟ್ಟರು. ಈ ಮೂಲಕ ಕಾಲೇಜಿನೊಂದಿಗಿನ ನಂಟು ಗಟ್ಟಿಗೊಳಿಸಿಕೊಳ್ಳುವ ಇರಾದೆ ಅವರದ್ದು. ❖

ವಿಸ್ಮಯಕಾರಿ ಅನುಭವ


'44 ವರ್ಷಗಳ ಬಳಿಕ ಸಹಪಾಠಿಗಳನ್ನು ಭೇಟಿಯಾಗುವ ಅವಕಾಶ ಸಿಕ್ಕಿದ್ದು ವಿಸ್ಮಯ ಎಂದೆನಿಸಿತ್ತು. ಹೆಣ್ಣುಮಕ್ಕಳು ಶಿಕ್ಷಣ ಕಲಿಯುವುದೇ ಕಷ್ಟ ಎನ್ನುವ ಕಾಲದಲ್ಲಿ ಕಲಾ ಶಿಕ್ಷಣ ನೀಡಿದ ಕಾಲೇಜು ಎಂದಿಗೂ ತವರುಮನೆ ಇದ್ದಂತೆ. ಇಲ್ಲಿ ನನ್ನ ಕಲಾಕೃತಿ ಪ್ರದರ್ಶನಗೊಂಡಿದ್ದು ನನ್ನ ಖುಷಿಯನ್ನು ಇಮ್ಮಡಿಗೊಳಿಸಿತ್ತು' ಎನ್ನುತ್ತಾರೆ ದಾವಣಗೆರೆ ದೃಶ್ಯಕಲಾ ಕಾಲೇಜಿನ (ಲಲಿತಕಲಾ ವಿಭಾಗ) ಮೊದಲ ವಿದ್ಯಾರ್ಥಿನಿ ಸುಲೋಚನಾ ವೇಣುಗೋಪಾಲ್.



ಸುಲೋಚನಾ



ಫೈಬರ್ ಮಾಧ್ಯಮದಲ್ಲಿ ಪ್ರವೀಣಾಚಾರ್ ರಚಿಸಿದ 'ಸೀಡ್ಸ್' ಕಲಾಕೃತಿ



> ವಜ್ರ ಮಹೋತ್ಸವದ ಅಂಗವಾಗಿ 'ದಾಕಹವಿಸ' ವತಿಯಿಂದ ವರ್ಷಪೂರ್ತಿ ಕಾರ್ಯಕ್ರಮಗಳನ್ನು ಆಯೋಜಿಸುವ ಯೋಜನೆ ರೂಪಿಸಲಾಗಿದೆ. ಈಗ ಮಿಶ್ರ ಮಾಧ್ಯಮದ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ಆಧುನಿಕ, ಸಾಂಪ್ರದಾಯಿಕ, ಸಮಕಾಲೀನ–ಹೀಗೆ ಪ್ರತ್ಯೇಕ ವಿಭಾಗಗಳಲ್ಲಿ ಚಿತ್ರಕಲಾ ಪ್ರದರ್ಶನ ಆಯೋಜಿಸಲಾಗುವುದು.
>
> **ಚಿ.ಸು.ಕೃಷ್ಣ ಸೆಟ್ಟಿ**, ದಾಕಹವಿಸ ಅಧ್ಯಕ್ಷ



ಶೀಲವಂತ ಯಾದಗಿರಿ ಅವರು ರಚಿಸಿದ ಕಲಾಕೃತಿ ಚಿತ್ರಗಳು: ಸತೀಶ್ ಬಡಿಗೇರ್

ಮೊದಲ ಓದು

ಕವಿತೆಯ ರಸಾಸ್ವಾದ ಉಣಬಡಿಸುವ ಕೃತಿ


ನವ್ಯ ಕಾವ್ಯ, ಬೇಂದ್ರೆ ಕಾವ್ಯ ಹಾಗೂ ಪಾಶ್ಚಿಮಾತ್ಯ ಸಾಹಿತ್ಯವನ್ನು ತಮ್ಮ ಓದಿನ ನಿಷ್ಕಕ್ಕೆ ಒಡ್ಡಿದ್ದಾರೆ ಲೇಖಕರು. ಬೇಂದ್ರೆ ಕಾವ್ಯದ ಒಳನೋಟವನ್ನು ನೀಡುತ್ತಲೇ, ಇಂಗ್ಲಿಷ್ ಕಾವ್ಯದೊಂದಿಗೆ ಅನುಸಂಧಾನವಾಗುವ ಬಗೆಯನ್ನು ಬಿಚ್ಚಿಟ್ಟಿದ್ದಾರೆ. ಸಾಹಿತ್ಯದ ಮಜಲುಗಳನ್ನು ಲಹರಿಯಲ್ಲಿ ವಿಂಗಡಿಸುತ್ತಲೇ ಕೆಲವೆಡೆ ಹೃದ್ಯವಾಗಿಯೂ, ಕೆಲವೆಡೆ ವಾಚ್ಯವಾಗಿಯೂ ವಿಸ್ತರಿಸುತ್ತ ಹೋಗಿದ್ದಾರೆ.

ಕಾವ್ಯ ಮೀಮಾಂಸೆ, ತತ್ವಜ್ಞಾನ, ಬದುಕಿನ ಹದ, ಭಾಷೆಯ ಪದಗಳಲ್ಲಿ ಬಣ್ಣಿಸುತ್ತಲೇ ಕಳೆದೆರಡು ಶತಮಾನಗಳ ಸಾಹಿತ್ಯದಲ್ಲಿಯ ಬದಲಾವಣೆಗಳನ್ನು ಗುರುತಿಸುತ್ತ ಹೋಗುತ್ತಾರೆ. ಬೇಂದ್ರೆಯವರ ಅಷ್ಟಪದಿಗಳನ್ನು ಉಲ್ಲೇಖಿಸುತ್ತಲೇ ಪಾಶ್ಚಾತ್ಯ ಸಾಹಿತ್ಯದ ಜಿಜ್ಞಾಸೆಯನ್ನೂ ತರುತ್ತಾರೆ. ಲೋಕಜ್ಞಾನ ಮತ್ತು ಅಲೌಕಿಕ ಪ್ರಜ್ಞೆ ಎರಡನ್ನೂ ತರುತ್ತ ತಮ್ಮ ಅನುಭವದ ಜೀವನಾಮೃತ ಮತ್ತು ಸಾಹಿತ್ಯದ ಅರಿವು ಎರಡನ್ನೂ ತೂಕ ಹಾಕುತ್ತಲೇ ಓದುಗರಿಗೆ ಉಣಬಡಿಸುತ್ತಾರೆ. ಅಲ್ಲಮಪ್ರಭು ಆಪ್ತವಾದಷ್ಟೇ, ಇಂಗ್ಲಿಷ್ ಮೆಟಫಿಜಿಕಲ್ ವಾದವೂ ಆಪ್ತವಾಗುತ್ತದೆ. ಇನ್ನಷ್ಟು ಓದಿಗೆ ಪ್ರೇರೇಪಿಸುತ್ತದೆ.

ಕವಿತೆಯ ರಸಾಸ್ವಾದವನ್ನು ಅನುಭವಿಸುವವರಿಗೆ, ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಈ ಪುಸ್ತಕ ಆಕರಗ್ರಂಥವಾಗಲಿದೆ.

ಕೃತಿಯ ಮೊದಲ ಭಾಗ ಲಹರಿ ಒಂದು ಎಂದು ಕರೆಯಿಸಿಕೊಳ್ಳುವುದರಲ್ಲಿ ನಾಟುನುಡಿ, ತಿರುಳ್ನುಡಿ, ರೂಪಕ, ಬ್ರಹ್ಮಕಲ್ಪ, ವಾಗ್ಗೇಯ, ಚಿದಂಬರ ಕವಿತೆಗಳು ಓದುಗರನ್ನು ಸೆಳೆದಿಡುತ್ತವೆ. ಮಧ್ಯಂತರದ ಓದು ಅರ್ಥೈಸಿಕೊಳ್ಳಲು ಸಮಯ ಬೇಡುತ್ತದೆ. ಲಹರಿ ಎರಡು ಎಂದು ಕರೆಯಿಸಿಕೊಳ್ಳುವ ಎರಡನೆಯ ಭಾಗದಲ್ಲಿ ಅನುಭಾವ, ಅನುಭೂತಿ ಅಧ್ಯಾತ್ಮಗಳೆಲ್ಲವೂ ಅಡಕವಾಗಿವೆ. ಸುದೀರ್ಘ ಓದಿನ ನಡುನಡುವೆ ಅಲ್ಪವಿರಾಮ ಬೇಡುವಂಥ ಬರಹಗಳಿವು. ಮನದೊಳಗೆ ಇಳಿಯಲು, ತರ್ಕ ಮಾಡಿ, ಜಿಜ್ಞಾಸೆಗಿಳಿದು, ನಿಮ್ಮೊಳಗೆ ಹಿಡಿದಿಟ್ಟುಕೊಳ್ಳುವಂತೆ ಮಾಡುತ್ತವೆ.

ಆದರೆ, ಲೇಖಕರು ಒಂದೊಳ್ಳೆಯ ಬರವಣಿಗೆಯಲ್ಲಿ, ನಡುನಡುವೆ ನನ್ನ ಅನಿಸಿಕೆಯ ಪ್ರಕಾರ, ನಾನು ಅಂದುಕೊಂಡಂತೆ, ನನ್ನ ಗ್ರಹಿಕೆಯಂತೆ ಎಂದು ಮಧ್ಯಪ್ರವೇಶಿಸುವುದರಿಂದ ಓದಿನ ಓಘಕ್ಕೆ ತಡೆ ಬೀಳುತ್ತದೆ. ಕೆಲವು ಅಂಶಗಳನ್ನು ಮೇಲಿಂದ ಮೇಲೆ ಪ್ರಸ್ತಾಪಿಸುತ್ತ, ಆ ಅಂಶವನ್ನು ಹಿಂದೆ ಹೇಳಿದ್ದೇಕೆ, ಈಗ ಹೇಳುತ್ತಿರುವುದೇಕೆ ಎಂದೂ ಬಣ್ಣಿಸುವಲ್ಲಿ ಚೂರು ಓದುಗರ ಸಂಯಮವನ್ನು ಬೇಡುತ್ತದೆ.



ಪು: 264 ₹300

ತುಯ್ತವೆಲ್ಲ ನವ್ಯದತ್ತ ಅಂದತ್ತರ ಉಯ್ಯಾಲೆ ಮತ್ತು ಅದರ ಸುತ್ತ

ಲೇ: ರಘುನಂದನ

ಪ್ರ: ಥಿಯೇಟರ್ ತತ್ಕಾಲ್ ಬುಕ್ಸ್

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಹೃತ್ಪಕ್ಷಿ

ಕುವೆಂಪು ಅವರು ಮಲೆನಾಡಿನಲ್ಲಿ ಹುಟ್ಟಿ ಶಿಶುವಾಗಿ ಕಣ್ಣರಳಿಸಿ ಕುತೂಹಲದಿಂದ ನೋಡಿ ನಲಿದು ಆಡಿದ್ದು ಪಕ್ಷಿಗಳೊಡನೆ. ಅವುಗಳ ಕಲರವ ಕಣ್ಣು ಬಣ್ಣ ಬೆಡಗು, ಶಾಂತ ಸುಂದರ ಲಕ್ಷಣ ಎಲ್ಲರನ್ನೂ ಸೆಳೆದಾಡಿಸುತ್ತದೆ. ಅವುಗಳಂತೆ ಹಾರಿ ಆಕಾಶದಲ್ಲಿ ತೇಲಾಡಬೇಕು ಎನಿಸುತ್ತದೆ. ಕವಿಯ ಅಂತಹ ಸುಮಧುರ ಭಾವ ಕಲ್ಪನಾ ಲಹರಿ ಹೀಗೆ ಭಾವಗೀತೆಯಲ್ಲಿ ಗರಿಗೆದರಿದೆ.

'ಹಕ್ಕಿಗಳ ಸಂಗದಲಿ
ರೆಕ್ಕೆ ಮೂಡುವುದೆನಗೆ;
ಹಾರುವುದು ಹೃತ್ಪಕ್ಷಿ
ಲೋಕಗಳ ಕೊನೆಗೆ!'
(ಹಕ್ಕಿಗಳ ಸಂಗದಲ್ಲಿ : ಅನಿಕೇತನ)

ಕರ್ಣಚೈತ್ರ


ಕುವೆಂಪು ಕವಿ ಪ್ರತಿಭೆ ವಸಂತ ಋತುವನ್ನು ಕರ್ಣಚೈತ್ರವಾಗಿ ಆಲಿಸಿದೆ. ವಸಂತ ಋತುವಿನ ಗತಿಶೀಲತೆಗೆ ಹಕ್ಕಿಗಳು ಪ್ರತೀಕವಾಗಿವೆ. ವಸಂತ ಋತುವನ್ನು ಇದುವರೆಗೆ ಅನುಭವಿಸಿ ವರ್ಣಿಸಿದ ಕವಿಗಳಿಗಿಂತ ಭಿನ್ನವಾಗಿ- ಪಕ್ಷಿಗಳ ನಾದಾನುಭವದಲ್ಲಿ ಲೀನವಾಗಿ ಆ ಋತುವನ್ನು 'ಕರ್ಣಚೈತ್ರ' ಎಂದು ಕರೆದಿದ್ದಾರೆ. ಅದು ವಸಂತ ಋತುವಿನ ಕರ್ಣಾನಂದ ರಸತತ್ವವನ್ನು ಆಸ್ವಾದಿಸಿ ಕಾವ್ಯದಲ್ಲಿ ಪ್ರಕಟಿಸಿದ ಆಹ್ಲಾದ. ಪಕ್ಷಿಗಳು ಆ ಋತುವಿನ ಧ್ವನಿಯಾಗಿ, ಪ್ರಕೃತಿಯ ಸಂವಹನ ಧಾತುವಾಗಿರುವ ಕಲ್ಪನಾ ಸೌಂದರ್ಯ ಕಾವ್ಯದಲ್ಲಿ ಹೊಸತು.

'ಕರ್ಣಚೈತ್ರನಾ ಪರ್ಣಶಾಲೆ' ವಸಂತ ಋತುವಿನ ಬಗ್ಗೆ ಧ್ಯಾನಿಸಿದ ಮಹಾಕವಿಯ ನವನವೀನ ಬೌದ್ಧಿಕ ಲಹರಿಯ ಹೊಸ ಪದ. ಅದನ್ನು ಆಶ್ರಮದ ಚಿತ್ರಣದಲ್ಲಿ ಹೀಗೆ ಬಣ್ಣಿಸಿದ್ದಾರೆ.

'ಹಸುರು ಹೂ
ಹಣ್ಣುಕಾಯ್‌ವೊತ್ತ ತರುಗಳಲಿ ಶತಶತ ವಿವಿಧ
ಪಕ್ಷಿ ಚಿತ್ರಸ್ವನಂ ವರ್ಣವರ್ಣ ಸ್ವರ್ಣಮಯ
ರಂಗವಲ್ಲಿಯನಿಕ್ಕುತಿದೆ ಕರ್ಣಚೈತ್ರನಾ
ಪರ್ಣಶಾಲೆಯಲಿ'


ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ವಾಷೌಟ್!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಆಟವಾಡಿ ಮನೆಗೆ ಬಂದ ಗುಂಡ ವಾಷಿಂಗ್ ಮಷಿನ್ ನೋಡಿದ. ಕೊಳೆಯಾಗಿರುವ ತನ್ನ ಬಟ್ಟೆಯನ್ನು ಉಂಡೆ ಮಾಡಿ ಅದರೊಳಗೆ ಹಾಕಿ ಸ್ವಿಚ್ ಆನ್ ಮಾಡಿದ. ವಾಷಿಂಗ್ ಮಷಿನ್‌ನಿಂದ ಬುರ್ ಬುರ್ ಎಂಬ ಸದ್ದು ಬರಲು ಪ್ರಾರಂಭವಾಯಿತು. ಇನ್ನೇನು ಬಟ್ಟೆ ಸ್ವಚ್ಛವಾಗಿ ಬರಬಹುದೆಂದು ಕಾಯುತ್ತ ಕುಳಿತಿದ್ದ ಗುಂಡನಿಗೆ ಆತಂಕ ಕಾದಿತ್ತು. ಬಟ್ಟೆಯ ಜೊತೆಗೆ ವಾಷಿಂಗ್ ಮಷಿನ್ ಕೂಡ ತಿರುಗಲು ಪ್ರಾರಂಭಿಸಿತು. ಭಯಗೊಂಡ ಗುಂಡ ಅಲ್ಲಿಂದ ಕಾಲುಕಿತ್ತ!

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಪ್ರತೀಕ್ಷಾ ಜೋಯ್ಸ್, ಸಾಗರ



ಅದ್ವಿಕಾ, ಧಾರವಾಡ



ಗೌಸ್, ಗಬ್ಬೂರು



ಬಿಂದು ಸುತಗುಂದಿ, ವಿಜಯಪುರ



ಸಂಸ್ಕೃತಿ ಎಂ.ಎಸ್, ಮೈಸೂರು



ರುತ್ವಿಕ್ ಉಡುಪಿ

ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ

ಕಂ	ಮ	ಹೊ	ಬೆ	ಬೆ	ಗು
ಜ	ಕೊ	ಮೋ	ಕ	ಕಿ	ಕೊ

1

	ನ	ನ
	ನ	ನ

2

	ತ್ತ	ಲೆ
	ತ್ತ	ಲೆ

3

	ರಾ	ಣಿ
	ರಾ	ಣಿ

4

	ಡ	ಗು
	ಡ	ಗು

5

	ದ	ಕ
	ದ	ಕ

6

	ರ	ಡು
	ರ	ಡು

ಗಣಿತದಲ್ಲಿ ಗರ್ದಿ ಗಮ್ಮತ್ತು

ಈ ಲೆಕ್ಕ ಹೀಗೂ ಮಾಡಬಹುದು

ಯಾವುದೇ ಒಂದು ಸಂಖ್ಯೆಗೆ 9, 99, 999...ಹೀಗೆ 9ರಿಂದ ಆದ ಸಂಖ್ಯೆಗಳಿಂದ ಗುಣಿಸಬೇಕಾದರೆ, ಆ ಸಂಖ್ಯೆಯನ್ನೇ ಕಳೆದು ಮಾಡಬಹುದು.

ಉದಾ1 : 658 X 9

ಇಲ್ಲಿ 658ಕ್ಕೆ ಒಂದು 0 ಸೇರಿಸಿ, ಮೂಲಸಂಖ್ಯೆ 658ನ್ನು ಅದರಲ್ಲಿ ಕಳೆದರೂ ಉತ್ತರ ರೂಢಿಗತ ಪದ್ಧತಿಯಂತೆ ಬರುತ್ತದೆ.

$$\begin{array}{r} 6580 \\ -658 \\ \hline 5922 \end{array}$$

ತಾಳೆ 1:

$$\begin{array}{r} 658 \\ \times \quad 9 \\ \hline 5922 \end{array}$$

ಉದಾ 2: 785 X 99

(ಇಲ್ಲಿ ಎರಡು ಸೊನ್ನೆ ಸೇರಿಸಬೇಕು. ಮೂರು 9 ಇದ್ದರೆ ಮೂರು ಸೊನ್ನೆ ಸೇರಿಸಬೇಕು. ಹೀಗೆ..)

$$\begin{array}{r} 78500 \\ -785 \\ \hline 77715 \end{array}$$

ತಾಳೆ 2:

$$\begin{array}{r} 785 \\ \times \quad 99 \\ \hline 7065 \\ 7065 \\ \hline 77715 \end{array}$$

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಅನುಕರಣಾ ಶಬ್ದಗಳಿಗೆ ಹೊಂದುವಂತೆ ಪದಪಟ್ಟಿಯಿಂದ ಆಯ್ದು ಹೊಂದಿಸಿರಿ.

ತಿರುಗು	ಮಿಂಚು	ಕೆಂಡ	ಸದ್ದು	ಮಧ್ಯಾಹ್ನ
ಮಳೆ	ಬೆಳಗು	ಮಳೆ	ಬಟ್ಟೆ	ನಗು

1	ನಿಗಿನಿಗಿ	
2	ಗರಿ ಗರಿ	
3	ಚುಮು ಚುಮು	
4	ಜಿಟಿಜಿಟಿ	
5	ಮಿರಿಮಿರಿ	
6	ರಪರಪ	
7	ಗುಡುಗುಡು	
8	ಮಟಾಮಟಾ	
9	ಕುಲುಕುಲು	
10	ಪಿರಿಪಿರಿ	

ಕೊಂಚತಂತ್ರ

ತಾಜಮಹಲ್ ನಿರ್ಮಾಣಗೊಂಡ ವರ್ಷ 1632.

ಈ ಇಸ್ವಿಯನ್ನು ಸುಲಭವಾಗಿ ನೆನಪಿಡಲು 16ರ ಮಗ್ಗಿ ನೆನಪಿಸಿಕೊಳ್ಳಬೇಕು. 16 ಮತ್ತು 32 ಇವು 16ರ ಮಗ್ಗಿಯಲ್ಲಿ ಬರುವ ಎರಡು ಸಂಖ್ಯೆಗಳು. 16 ಎರಡಲೆ 32. ಇದನ್ನು ನೆನಪಿಟ್ಟುಕೊಂಡರೆ ಆ ಇಸವಿ ನೆನಪಿಗೆ ಬರುತ್ತದೆ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದ ಬಂಧ: 1.ಆಲಯ-ಮಲಯ 2.ಪುಸ್ತಕ-ಮಸ್ತಕ 3.ತಳಕು-ಬೆಳಕು 4.ಮುಗುಳು-ಹೊಗಳು 5.ಹುರುಪು-ಎರುಪು 6.ಸಕಲ-ವಿಕಲ

ಜಾಣಪದ ಆಟ:

1 ಕುವರಿ, ಕುಮಾರಿ, ಕುಸುರಿ
2 ಗಮನ, ಗಗನ, ಗಹನ
3 ಹವನ, ಹಯನ, ಹಸನ
4 ಕಮರಿ, ಕತ್ತರಿ, ಕಸ್ತೂರಿ
5 ಕಣಕ, ಕನಕ, ಕಟಕ
6 ನವೀನ, ನಯನ, ನಮನ
7 ಜನನ, ಜತನ, ಜವಾನ
8 ಹನಿಸು, ಹರಿಸು, ಹಳಸು



ಲಂಡನ್ ನಗರದ ಹೊರನೋಟ

ಲಂಡನ್ ಚುಂಬಕ ಶಕ್ತಿಯ ಅದ್ಭುತ ನಗರ

ಎಂ.ಎಸ್.ರಘುನಾಥ್

ನಾವು ಲಂಡನ್ ನಗರಕ್ಕೆ ಭೇಟಿ ನೀಡಿದಾಗ ಇಡೀ ನಗರ ಪ್ರವಾಸಿಗರಿಂದ ತುಂಬಿ ತುಳುಕುತ್ತಿತ್ತು. ಪ್ರವಾಸಿಗರು ಮೊದಲು ವೀಕ್ಷಿಸಲು ಬಯಸುವುದು ಲಂಡನ್ ಐ, ವೀಕ್ಷಣಾ ಚಕ್ರ. ನವ ಸಹಸ್ರಮಾನಕ್ಕೆ ಸರಿಯಾಗಿ 2000 ರಲ್ಲಿ ಸ್ಥಾಪಿಸಲಾದ 135 ಮೀಟರ್ ಎತ್ತರದ ಅದ್ಭುತ ತಿರುಗುವ ಯಂತ್ರ. ಇದರಲ್ಲಿ ಕುಳಿತುಕೊಂಡು ನೋಡಿದರೆ, ಲಂಡನ್ ನಗರದ ಆಚೆಗೂ ಕಂಡುಬರುವ ವಿಹಂಗಮ ನೋಟ ನೀಡುವ ಅನುಭವ ಆಹ್ಲಾದಕರವಾದುದು. ವೆಸ್ಟ್ ಮಿನಿಸ್ಟರ್ ಎಂಬ ನಿಲ್ದಾಣದಲ್ಲಿ ಇಳಿದು ಹೊರಗೆ ಬಂದರೆ, ಎದುರಿಗೆ ಭವ್ಯವಾದ ಪಾರ್ಲಿಮೆಂಟ್ ಭವನ. ಈ ಸ್ಥಳ ತಲುಪಲು ಎಷ್ಟು ಅನುಕೂಲ ಎಂದು ಆಶ್ಚರ್ಯವಾಗುತ್ತದೆ. ನಮ್ಮ ದೇಶವೂ ಸೇರಿ ಜಗತ್ತಿನ ಮೂರನೆ ಎರಡು ಭಾಗವನ್ನು ತಮ್ಮ ಮುಷ್ಟಿಯಲ್ಲಿ ಇಟ್ಟುಕೊಂಡು ಮೆರೆದ ಸಾಮ್ರಾಜ್ಯದ ಅಧಿಕಾರ ಕೇಂದ್ರವನ್ನು ನೋಡಲು ಅಚ್ಚರಿಯಾಗುತ್ತದೆ. ಅದಕ್ಕೆ ಮುಂಚಿನ ಬೃಹತ್ ಗಡಿಯಾರ ಸ್ತಂಭ, ಎಡಕ್ಕೆ ಕಾಣುವ ಹರಿಯುವ ಥೇಮ್ಸ್ ನದಿ. ಅದರ ಪಕ್ಕದಲ್ಲೇ ಕಾಣುವ ಲಂಡನ್ ಐ, ಎಲ್ಲರ ಕಣ್ಣು ಕುಕ್ಕುತ್ತದೆ. ಪಾರ್ಲಿಮೆಂಟ್ ಭವನಕ್ಕೆ ತಾಗಿಕೊಂಡೇ ಇರುವ ಬಿಗ್‌ಬೆನ್ ಗಡಿಯಾರ, ಹೈಡ್ ಪಾರ್ಕ್ ಎಲ್ಲವೂ ಒಂದೇ ಕಡೆ ಇದ್ದು, ಪ್ರವಾಸಿಗರ ಕಣ್ಮನ ಸೆಳೆಯುತ್ತದೆ. ಅದರ ಎದುರು ವೆಸ್ಟ್ ಮಿನಿಸ್ಟರ್ ಅಬೇ, ರಾಜಮನೆತನದವರಿಗಾಗಿ ಇರುವ ಅಂತ್ಯಸಂಸ್ಕಾರದ ಭವನ. ಅದರ ಎದುರಿಗೆ ಇರುವ ಚೌಕದಲ್ಲಿ, ಹಿಂದಿನ ಬ್ರಿಟನ್ನಿನ ಕ್ರಾಮ್‌ವೆಲ್ ಮುಂತಾದ ಕೆಲವು ಪ್ರಮುಖ ಮುಖಂಡರ ಆಳೆತ್ತರದ ಪ್ರತಿಮೆಗಳಿವೆ. ಮೊದಲಿಗೆ ಎದ್ದು ಕಾಣುವುದು ಸಿಡುಕು ಮೋರೆಯ ವಿನ್‌ಸ್ಟನ್ ಚರ್ಚಿಲ್‌ರ ಆಕ್ರಮಣಕಾರಿ ಮಾತಿನಂತೆ ಕಾಣುವ ಪುತ್ಥಳಿ. ಮತ್ತೊಂದು ತುದಿಯಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧವೇ ಹೋರಾಟ ಮಾಡಿದ ಮಹಾತ್ಮಗಾಂಧಿ, ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ಅವರ ಪ್ರತಿಮೆಗಳನ್ನು ಕಂಡು ಖುಷಿ ಆಯಿತು.

> ಲಂಡನ್ ಅದ್ಭುತ ನಗರ. ಅಲ್ಲಿನ ಐತಿಹಾಸಿಕ ಕಟ್ಟಡಗಳು, ಅರಮನೆಗಳು, ವಾಸ್ತುಶಿಲ್ಪ, ಬ್ರಿಟಿಷ್ ಮ್ಯೂಸಿಯಂ, ಬಹು ಆಕರ್ಷಕ ಲಂಡನ್ ಬ್ರಿಡ್ಜ್, ಕ್ವೀನ್ಸ್ ಕಲಾಗ್ಯಾಲರಿಗಳನ್ನು ನೋಡುವುದೇ ಸೊಗಸು. ಲೇಖಕರು ಕುತೂಹಲ ಮತ್ತು ಆಸಕ್ತಿಯಿಂದ ಅಲ್ಲೆಲ್ಲ ಸುತ್ತಾಡಿ, ಅನುಭವಿಸಿ ಬರೆದಿದ್ದಾರೆ.

ಲಂಡನ್ ನಗರದಲ್ಲಿ ಮೊದಲ ಆಕರ್ಷಣೆ ಅಲ್ಲಿಯ ಕಟ್ಟಡಗಳ ಭವ್ಯತೆ. ಬ್ರಿಟಿಷ್ ಮ್ಯೂಸಿಯಂ ಆಗಲಿ ಅಥವಾ ಬೇರಾವುದೇ ಕಟ್ಟಡವಾಗಲಿ, ಅವುಗಳ ವಾಸ್ತುಶಿಲ್ಪ ವೈಖರಿ ಎಂತಹವರನ್ನೂ ಆಕರ್ಷಿಸುತ್ತದೆ. ಈ ಕಟ್ಟಡವೇ ಹೀಗಿದ್ದರೆ, ಒಳಗಿನ ಸಂಗ್ರಹಗಳ ಸೌಂದರ್ಯ ಹೇಗಿರಬಹುದು ಎಂಬ ಬೆರಗು ನೋಡುಗರಿಗೆ ಉಂಟಾಗುವುದು ಸಹಜ. ಆ ಕಟ್ಟಡಗಳು ಪ್ರಾಚೀನತೆಗೂ ಸೈ, ಆಧುನಿಕತೆಗೂ ಸೈ ಎಂಬಂತೆ ಒಂದಕ್ಕಿಂತ ಮತ್ತೊಂದು ಸೌಂದರ್ಯವನ್ನು ಇಮ್ಮಡಿಸುವಂತಹುದು. ಈ ದೃಷ್ಟಿಯಿಂದ ನೋಡಿದರೆ, ಲಂಡನ್ ನಗರ ಪುರಾತನ ಹಾಗೂ ಆಧುನಿಕತೆ ಎರಡರ ನಂಬಲಾರದ ಮಿಳಿತ ಎಂದು ಕರೆಯಬಹುದು.

ವರ್ಷಪೂರ್ತಿ ಇರುವ ಅತೀ ತಂಪಾದ ಹವೆಯಿಂದಲೋ, ಆಗಾಗ್ಗೆ ಸುರಿಯುತ್ತಲೇ ಇರುವ ತುಂತುರು ಅಥವಾ ಮಳೆಯಿಂದಲೋ, ನಗರ ಹಾಗೂ ಸುತ್ತಮುತ್ತಲಿನ ಪ್ರದೇಶವೆಲ್ಲ ಹಸುರಿನಿಂದ ಕಂಗೊಳಿಸುತ್ತಿರುತ್ತವೆ. ಅದಕ್ಕಿಂತ ಮುಖ್ಯವಾದುದು ಅತ್ಯುತ್ತಮ ನಿರ್ವಹಣೆ. ಅದಕ್ಕೆ ತಕ್ಕಂತೆ ಜನಗಳಿಗಿರುವ ಹಸಿರು ಉಳಿಸಬೇಕೆನ್ನುವ ಬದ್ಧತೆ. ಹೆಚ್ಚು ಕಡಿಮೆಯಾದರೇ ಶಿಕ್ಷಾರ್ಹ ಅಪರಾಧವಾಗುವುದು ಎಂಬ ಎಚ್ಚರಿಕೆ.

ನಗರದ ಹೃದಯ ಭಾಗದಲ್ಲಿರುವ ಬಕ್ಕಿಂಗ್‌ಹ್ಯಾಮ್ ಪ್ಯಾಲೇಸ್, ಅಲ್ಲಿನ ರಾಜ ಮನೆತನದವರ ಅಧಿಕೃತ ನಿವಾಸಕ್ಕೆ ಭೇಟಿ ಕೊಡಬೇಕೆನ್ನಿಸುತ್ತದೆ. ಅದನ್ನು ಪ್ರವೇಶಿಸಲು ಆಗಾಗ ಅನುಮತಿ ದೊರೆಯುವುದಾದರೂ, ಅದರ ಬಾಹ್ಯ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರೆಲ್ಲಾ ಅಪೇಕ್ಷಪಡುತ್ತಾರೆ. ಅದರ ಸುತ್ತಾ ನಿಂತು ಸೆಲ್ಫಿ ತೆಗೆದುಕೊಳ್ಳುವುದು, ಅದರೊಳಗೆ ಪ್ರತಿಮೆಯಂತೆ ಸದಾ ನಿಂತಿರುವ ಸೇವಕರು. ಅದನ್ನೆಲ್ಲ ನೋಡುವುದು ಕುತೂಹಲದ ವಿಚಾರವೇ ಸರಿ.

ಲಂಡನ್ ನಗರದಲ್ಲಿ ಇನ್ನೂ ಮುಂದಕ್ಕೆ ಹೋದರೆ, ಮೊದಲ ಆಕರ್ಷಣೆ ಲಂಡನ್ ಬ್ರಿಡ್ಜ್, ಮಕ್ಕಳ ಪದ್ಯದಲ್ಲಿ ಹಾಡುವಂತೆ, ಅದು ಬೀಳುತ್ತಿದೆಯೋ ಎಂದು ತಮಾಷೆಗೆ ಪರೀಕ್ಷೆ ಮಾಡುವ ತವಕ. ಅಲ್ಲದೇ ಟಿ.ಎಸ್.ಎಲಿಯಟ್ ಕೂಡ ತನ್ನ ವೇಸ್ಟ್ಲ್ಯಾಂಡ್ ಮಧ್ಯೆದಲ್ಲಿ ವ್ಯಂಗ್ಯವಾಗಿ ಹೇಳಿರುವ ಮಾತೂ ಸಹ ನೆನಪಿಗೆ ಬಂತು. ಅದರ ಭವ್ಯತೆ ಸೌಂದರ್ಯವನ್ನು ನೋಡಿಯೇ ಸವಿಯಬೇಕು. ಅದರಲ್ಲೂ ಟಿಕೆಟ್ ತೆಗೆದುಕೊಂಡು ಮೇಲೆ ಹೋಗಿ ನೋಡುವ ಅವಕಾಶವೂ ಇದೆ. ನಗರದಲ್ಲಿರುವ ಆರು ರಾಜಮನೆತನದ ಅರಮನೆಗಳ ಪೈಕಿ, ಬಕ್ಕಿಂಗ್ ಹ್ಯಾಮ್, ಕೆನ್ಸಿಂಗ್‌ಟನ್ ಹಾಗೂ ಸೇಂಟ್ ಜೇಮ್ಸ್ ಅರಮನೆಗಳು ಅಲ್ಲಿನ ರಾಜಮನೆತನದವರಿಂದ ಮಾತ್ರ ಬಳಕೆಯಾಗುತ್ತದೆ. ಬಕಿಂಗ್‌ಹ್ಯಾಮ್ ಅರಮನೆಯ ಒಳಗೆ ಕ್ವೀನ್ಸ್ ಗ್ಯಾಲರಿಯಲ್ಲಿ ರಾಜಮನೆತನದ ಕಲಾಕೃತಿಗಳ ಸಂಗ್ರಹವಿದೆ. ಅದಕ್ಕಿಂತ ಮುಖ್ಯವಾಗಿ ವಿಶ್ವ ವಿಖ್ಯಾತ ಕಲಾವಿದ ಲಿಯೊನಾರ್ಡೊ ದ ವಿಂಚಿಯ ಸುಂದರ ಕಲಾಕೃತಿಗಳಿವೆ. ಅರಮನೆಯ ಹೊರಗೆ, ಕಾವಲು ಭಟರು ದಿನಬಿಟ್ಟು ದಿನ ಬದಲಾಗುವ ಸನ್ನಿವೇಶವೂ ಸಾರ್ವಜನಿಕರಿಗೆ ನೋಡಲು ದೊರೆಯುತ್ತದೆ. ಅದನ್ನು ನೋಡಲು ಅರಮನೆಯ ಹೊರಗೆ ಸಾಕಷ್ಟು ಜನ ನಿರ್ದಿಷ್ಟ ವೇಳೆಯಲ್ಲಿ ಕಾದು ನಿಂತಿರುತ್ತಾರೆ.



ಥೇಮ್ಸ್ ನದಿ ಬಳಿಯ ಲಂಡನ್ ಟವರ್

ಲಂಡನ್ನಿನ ಟವರ್ ಮತ್ತೊಂದು ಪ್ರೇಕ್ಷಣೀಯ ಸ್ಥಳ. ಯುನೆಸ್ಕೊ ವಿಶ್ವ ಸಾಂಪ್ರದಾಯಿಕ ಸ್ಥಳ. ಇದು ಲಂಡನ್ನಿನ ಒಂದು ಸರ್ವೋತ್ಕೃಷ್ಟ ಹೆಗ್ಗುರುತು. ಟಿಕೆಟ್ ತೆಗೆದುಕೊಂಡು ಒಳಗೆ ಹೋಗಿ ಭದ್ರತಾ ಸುರಕ್ಷತೆಯಲ್ಲಿ ಪ್ರದರ್ಶನಕ್ಕಿಟ್ಟಿರುವ ಕೊಹಿನೂರು ಕಿರೀಟ, ರಾಜಮನೆತನಕ್ಕೆ ಸಂಬಂಧಿಸಿದ ಚಿನ್ನ ಹಾಗೂ ವಜ್ರಾಭರಣಗಳು ಮನಸೂರೆಗೊಳ್ಳುತ್ತವೆ. ಈ ಚಿನ್ನದ ಆಭರಣಗಳೆಲ್ಲ ಕೊಳ್ಳೆ ಹೊಡೆದು ಬೇರೆ ದೇಶಗಳಿಂದ ತಂದಿರುವುದಲ್ಲವೇ ಎಂಬ ತಾತ್ಸಾರದ ನುಡಿಯೂ ಹೊರ ಹೊಮ್ಮುತ್ತದೆ. ಒಂದು ಕಾಲಕ್ಕೆ ಇದು ಶಸ್ತ್ರಾಗಾರ, ರಾಜಮನೆತನದ ವಾಸಸ್ಥಾನ ಹಾಗೂ ಬಂದೀಖಾನೆಯೂ ಆಗಿತ್ತು. ಈಗ ಅದೆಲ್ಲ ಇತಿಹಾಸ. ಐತಿಹಾಸಿಕ ಘಟನೆಗಳನ್ನು ರಾಜಮನೆತನದವರ ಐತಿಹ್ಯಗಳನ್ನು, ಆಕರ್ಷಣೀಯವಾದ ಹಿಂದಿನ ಇತಿಹಾಸವನ್ನು ಅಲ್ಲಿ ಬೆರಗುಗಣ್ಣಿನಿಂದ ನೋಡಬಹುದು. ಆಶ್ಚರ್ಯಚಕಿತವಾಗಿ ಅಲ್ಲಿನ ಪುರಾತನ ಕಟ್ಟಡದ ವಾಸ್ತುಶಿಲ್ಪವನ್ನು ಕಂಡು ಆಸ್ವಾದಿಸಬಹುದು. ಇದೂ ಸಹ ನಗರದ ಹೃದಯ ಭಾಗದಲ್ಲೇ ಇದ್ದು, ಹೆಚ್ಚು ದೂರ ಓಡಾಡ ಬೇಕಾದ ಪ್ರಮೇಯವಿಲ್ಲ. ಇದನ್ನೆಲ್ಲಾ ವೀಕ್ಷಿಸುವುದು ಒಂದು ಅಪೂರ್ವ ಅನುಭವವೇ ಸರಿ.

ಸೇಂಟ್ ಪಾಲ್ ಕೆಥಿಡ್ರಲ್ ಎನ್ನುವುದು ವಾಸ್ತು ವಿನ್ಯಾಸದ ಬೆರಗೇ ಸರಿ. ಶ್ರೀಮಂತ ಐತಿಹಾಸಿಕ ಪರಂಪರೆಯನ್ನು ಒಳಗೊಂಡ ಈ ಕಟ್ಟಡ, ಇತಿಹಾಸ ಹಾಗೂ ಸರ್ವೋತ್ಕೃಷ್ಟ ಕಲೆ ಮತ್ತು ಸಂಸ್ಕೃತಿಯನ್ನು ಸಾರುವ ಪ್ರೌಢಿಮೆಯ ಜಗತ್ತಿಗೆ ಕರೆದೊಯ್ಯುತ್ತದೆ.

ಈ ನಗರದಲ್ಲಿ ಎಲ್ಲಾ ಮ್ಯೂಸಿಯಂಗಳು ಒಂದೆಡೆ ಹತ್ತಿರದಲ್ಲೇ ಇದ್ದು ಅವುಗಳ ಪ್ರವೇಶ ಉಚಿತ. ಸಾಂಸ್ಕೃತಿಕ ಜಗತ್ತಿನ ಪರಿಚಯ ಮಾಡಿಸುವ ಉದ್ದೇಶದಿಂದ ಹೀಗೆ ಮಾಡಿರುವುದು ಪ್ರಮುಖವಾದ ಹೆಜ್ಜೆಯಾಗಿದೆ.

ಆಧುನೀಕರಣಗೊಂಡಿರುವ ಗ್ಲೋಬ್ ಥಿಯೇಟರ್ ಸಹ ರಂಗಭೂಮಿಯಲ್ಲಿ ಜೀವಂತವಾಗಿದ್ದು, ಎಲ್ಲಾ ದೇಶಗಳ ರಂಗಭೂಮಿ ಪ್ರಿಯರನ್ನು ಆಕರ್ಷಿಸುತ್ತದೆ.

ಸಾಹಿತ್ಯ ಪ್ರಿಯರಿಗಂತೂ, ಲಂಡನ್ ನಗರ ಸಾಕಷ್ಟು ಸಾಮಗ್ರಿಗಳನ್ನು ಉಣಬಡಿಸುತ್ತದೆ. ವೆಸ್ಟ್ ಮಿನಿಸ್ಟರ್ ಅಬೇ ಕವಿತೆಯಲ್ಲಿ, ಅಂತ್ಯಸಂಸ್ಕಾರಗೊಂಡ ಎಷ್ಟೊಂದು ಗಣ್ಯರ ನೆನಪುಗಳು ಆರ್ದ್ರವಾಗಿ ಬರೆದ ಸಾಲುಗಳು ಮನವನ್ನು ತಾಕುತ್ತವೆ.

ಎಲ್ಲಕ್ಕಿಂತ ಪ್ರಧಾನವಾಗಿ ಮನಸೆಳೆಯುವುದು ಸುಮಾರು 100 ಮೈಲಿ ದೂರದಲ್ಲಿರುವ ಸ್ಟ್ರಾಟ್‌ಫರ್ಡ್ ಅಪಾನ್ ಏವನ್. ಅದೇ ಪ್ರಖ್ಯಾತ ನಾಟಕಕಾರ, ಕವಿ ವಿಲಿಯಂ ಷೇಕ್ಸ್‌ಪಿಯರ್‌ಗಾಗಿ ಅವನ ಹುಟ್ಟೂರಿನಲ್ಲಿ ಸ್ಥಾಪಿಸಲಾಗಿರುವ ಪುಟ್ಟ ನಗರದಂತೆ ಕಾಣುವ ಗಮನಾರ್ಹ ಸ್ಮಾರಕ. ಅವನು ಹುಟ್ಟಿದ ಮನೆಯನ್ನು ಯಥಾವತ್ತಾಗಿ ಸಂರಕ್ಷಿಸಲಾಗಿದೆ. ಮನೆಯ ಅಂಗಳ, ಕೈತೋಟ, ಅವನು ಬಳಸುತ್ತಿದ್ದ ವಸ್ತುಗಳ ಸಂಗ್ರಹಾಲಯ ಸುರಕ್ಷಿತವಾಗಿದೆ. ಅಷ್ಟೇ ಗಮನಾರ್ಹವಾದುದು ಷೇಕ್ಸ್‌ಪಿಯರ್‌ನ ಅದ್ಭುತವಾದ ದೊಡ್ಡ ಪ್ರತಿಮೆ. ಅನತಿ ದೂರದಲ್ಲಿಯೇ ಏವನ್ ನದಿಯು ಹರಿಯುತ್ತದೆ. ಆಗಾಗ ಅವನ ನಾಟಕಗಳ ಪ್ರದರ್ಶನವೂ ಉಂಟು. ಪೂರ್ವ ಸಿದ್ದತೆಯೊಡನೆ ಹೋದರೆ ಮಾತ್ರ ಅವೆಲ್ಲವನ್ನು ಆಸ್ವಾದಿಸಬಹುದು.

ಇಲ್ಲಿ ಪ್ರಚಲಿತವಿರುವ ಪೌಂಡ್ ನೋಟುಗಳನ್ನು ಕುತೂಹಲದಿಂದ ಪರೀಕ್ಷಿಸಿ ನೋಡಿದಾಗ ನನಗೆ ಒಂದು ಸಂಗತಿ ಗಮನಾರ್ಹವಾಗಿ ಕಂಡಿತು- "ಏನೇ ಆದರೂ-ಓದುವುದಕ್ಕಿಂತ ಮತ್ತೊಂದು ಸಂತೋಷಕರವಾದುದು ಬೇರೇನೂ ಇಲ್ಲ ಎಂದು ನಾನು ಘೋಷಿಸುತ್ತೇನೆ" ಎಂಬ ಇಂಗ್ಲಿಷ್ ಪ್ರಮುಖ ಲೇಖಕಿಯರಲ್ಲೊಬ್ಬರಾದ ಜೇನ್ ಆಸ್ಟನ್‌ಳ ಚಿರಸ್ಮರಣೀಯವಾದ ಮಾತು.

ಹೌದು, ಓದು ಮತ್ತು ಸುತ್ತಾಟ ಹೊಸ ಹೊಸ ಲೋಕವನ್ನು ಪರಿಚಯಿಸುತ್ತವೆ. ❖



ಲಂಡನ್‌ನ ಬಕಿಂಗ್‌ಹ್ಯಾಮ್ ಅರಮನೆ

ಬೆಂಗಳೂರಿಗೆ 'ಹ್ಯಾಟ್ರಿಕ್' ಜಯ

ಐಎಸ್‌ಎಲ್: ಮೋಹನ್ ಬಾಗನ್ ತಂಡಕ್ಕೆ ನಿರಾಶೆ • ಆತಿಥೇಯರ ಆರ್ಭಟ

ಪ್ರಜಾವಾಣಿ ವಾರ್ತೆ



ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ಎಡ್ಗರ್ ಮೆನ್ಡೇಜ್ (ಎಡಗಡೆ) ಮತ್ತು ಸುರೇಶ್ ಸಿಂಗ್ ವಾಂಗೇಮ್ (ಬಲ) ಗೋಲು ಗಳಿಸಿ ಸಂಭ್ರಮಿಸಿದರು
ಪ್ರಜಾವಾಣಿ ಚಿತ್ರ:ಎಸ್‌.ಕೆ. ದಿನೇಶ್

ಬೆಂಗಳೂರು: ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ 'ಹ್ಯಾಟ್ರಿಕ್' ಜಯಸಾಧಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ ತಂಡವು 3–0ಯಿಂದ ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ ವಿರುದ್ಧ ಅಧಿಕಾರಯುತ ಜಯ ಸಾಧಿಸಿತು.

ಕ್ರೀಡಾಂಗಣದಲ್ಲಿ ಸೇರಿದ್ದ ಅಭಿಮಾನಿಗಳ ಎದುರು ಅಮೋಘ ಆಟವಾಡಿದ ಆತಿಥೇಯ ತಂಡದ ಆಟಗಾರರು ಮಿಂಚಿದರು. ಪಂದ್ಯದ 9ನೇ ನಿಮಿಷದಲ್ಲಿ ಎಡ್ಗರ್ ಮೆಂಡೆಜ್, 20ನೇ ನಿಮಿಷದಲ್ಲಿ ಸುರೇಶ್ ಸಿಂಗ್ ವಾಂಗ್ಲೆಮ್ ಮತ್ತು 51ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿಯಲ್ಲಿ ಸುನಿಲ್ ಚೆಟ್ರಿ ಗೋಲು ಹೊಡೆದರು.

ಮೋಹನ್ ಬಾಗನ್ ತಂಡಕ್ಕೆ ಒಂದೂ ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಇದರ ಶ್ರೇಯ ಬಿಎಫ್‌ಸಿಯ ರಕ್ಷಣಾ ಆಟಗಾರರು ಮತ್ತು ಗೋಲ್‌ಕೀಪರ್ ಗುರುಭಕ್ಷ್ ಸಿಂಗ್ ಅವರಿಗೆ ಸಲ್ಲಬೇಕು.

ಒತ್ತಡದಲ್ಲಿ ಆಡಿದ ಬಾಗನ್ ತಂಡದ ಗ್ರೇಗ್ ಸ್ಟೀವರ್ಟ್ ಮತ್ತು ಲಲೆಂಗ್‌ಮಾವಿಯಾ ರಾಲ್ಟೆ ಅವರು ಹಳದಿ ಕಾರ್ಡ್ ದರ್ಶನ ಮಾಡಿದರು. ಬಿಎಫ್‌ಸಿಯ ರೋಹಿತ್ ಧಾನು ಹಾಗೂ ನಿಖಿಲ್ ಪೂಜಾರಿ ಅವರಿಗೂ ರೆಫರಿ ಹಳದಿ ಕಾರ್ಡ್ ತೋರಿಸಿದರು.

ಟೂರ್ನಿಯಲ್ಲಿ ಬಿಎಫ್‌ಸಿ ತಂಡಕ್ಕೆ ಇದು ಸತತ ಮೂರನೇ ಜಯವಾಗಿದೆ. ಈ ಪಂದ್ಯದಲ್ಲಿ ಬಲಿಷ್ಠ ಬಾಗನ್ ತಂಡವನ್ನು ಸೋಲಿಸಿರುವುದರಿಂದ ಚೆಟ್ರಿ ಬಳಗದಲ್ಲಿ ಆತ್ಮವಿಶ್ವಾಸ ಹೆಚ್ಚಿದೆ. ಅಂಕಪಟ್ಟಿಯಲ್ಲಿ ಒಟ್ಟು 9 ಅಂಕಗಳೊಂದಿಗೆ ಬಿಎಫ್‌ಸಿ ಅಗ್ರಸ್ಥಾನದಲ್ಲಿದ್ದಾರೆ.

ಪಂಜಾಬ್ ಎಫ್‌ಸಿ ತಂಡವೂ ಆಡಿರುವ ಎಲ್ಲ ಮೂರು ಪಂದ್ಯಗಳನ್ನು ಗೆದ್ದಿದೆ. ಆದರೆ ಗೋಲು ಗಳಿಕೆಯಲ್ಲಿ ಬಿಎಫ್‌ಸಿ ಮುಂಚೂಣಿಯಲ್ಲಿದ್ದು, ಮೊದಲ ಸ್ಥಾನದಲ್ಲಿದೆ.

ಟಾಪ್ ಸ್ಕೋರರ್ ಸುನಿಲ್ ಚೆಟ್ರಿ

ಸುನಿಲ್ ಚೆಟ್ರಿ ಅವರು ಐಎಸ್‌ಎಲ್ ಟೂರ್ನಿಯಲ್ಲಿ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರನಾದರು. ಮೋಹನ್ ಬಾಗನ್ ಎದುರಿನ ಪಂದ್ಯದಲ್ಲಿ ದೊರೆತ ಪೆನಾಲ್ಟಿಯಲ್ಲಿ ಗೋಲು ಗಳಿಸಿದ ಅವರು ಈ ದಾಖಲೆ ಬರೆದರು. ಅವರು ಒಟ್ಟು 64 ಗೋಲು ಗಳಿಸಿದ್ದಾರೆ. ಇದರೊಂದಿಗೆ ಬಾರ್ತಲೊಮೆಯೆ ಒಜಿಬೆಕ್ (63) ಅವರ ದಾಖಲೆಯನ್ನು ಮೀರಿ ನಿಂತರು.

ಟೆನಿಸ್ ಸಂಸ್ಥೆಗೆ ಚುನಾವಣೆ: ಅವಿರೋಧ ಆಯ್ಕೆ

ನವದೆಹಲಿ (ಪಿಟಿಐ): ಅಖಿಲ ಭಾರತ ಟೆನಿಸ್ ಸಂಸ್ಥೆಯು (ಎಐಟಿಎ), ಶನಿವಾರ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಿದೆ. ಆದರೆ ದೆಹಲಿ ಹೈಕೋರ್ಟ್ ನಿರ್ದೇಶನದಂತೆ ಫಲಿತಾಂಶ ಪ್ರಕಟಿಸಿಲ್ಲ. ಅದನ್ನು ಮುಚ್ಚಿದ ಲಕೋಟೆಯಲ್ಲಿ ಕೋರ್ಟ್‌ಗೆ ನೀಡಲಾಗಿದೆ.

ಸಂಸ್ಥೆಯಲ್ಲಿ ಕ್ರೀಡಾ ಸಂಹಿತೆ ಉಲ್ಲಂಘನೆಯಾಗಿದೆ ಎಂಬ ಅರ್ಜಿಯ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ನಡೆಸುತ್ತಿದೆ. ಎಐಟಿಎ ತನ್ನ ಸರ್ವಸದಸ್ಯರ ಸಭೆಯಲ್ಲಿ ಚುನಾವಣೆ ನಡೆಸಿತು. ಆದರೆ ಚುನಾವಣಾಧಿಕಾರಿ ಪ್ರತಿ ಹುದ್ದೆಗೆ ತಲಾ ಒಂದು ನಾಮಪತ್ರ ಮಾತ್ರ ಸಲ್ಲಿಸಿದ ಕಾರಣ ಚುನಾವಣೆಯ ಅಗತ್ಯ ಬೀಳಲಿಲ್ಲ.

ಹೊಸ ಅಧ್ಯಕ್ಷ, ಮಹಾಪ್ರಧಾನ ಕಾರ್ಯದರ್ಶಿ, ಖಜಾಂಚಿ ಜೊತೆಗೆ ರಾಷ್ಟ್ರೀಯ ಟೆನಿಸ್ ಸಂಸ್ಥೆಯು ಎಂಟು ಮಂದಿ ಉಪಾಧ್ಯಕ್ಷರು, ನಾಲ್ಕು ಮಂದಿ ಜಂಟಿ ಕಾರ್ಯದರ್ಶಿ 10 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಿದೆ.

ರೋಹಿತ್ ರಾಜಪಾಲ್ ಮತ್ತು ಇನ್ನೊಬ್ಬ ಅಭ್ಯರ್ಥಿ ಕೂಡ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಆದರೆ ಭಾರತ ಡೇವಿಸ್ ಕಪ್ ತಂಡದ ಆಟವಾಡದ ನಾಯಕ ರೋಹಿತ್ ನಾಮಪತ್ರ ಹಿಂಪಡೆದರು ಎನ್ನಲಾಗಿದೆ.



ಹೊಸಪೇಟೆ ಸಮೀಪದ ರಾಜಾಪುರ ಬೆಟ್ಟದಲ್ಲಿ ಶನಿವಾರ ಕಡಿದಾದ ಬೆಟ್ಟವನ್ನು ಹಿಮ್ಮುಖ ಚಲನೆಯಲ್ಲಿ ಇಳಿದ ಪ್ರೊ ಮಾಡಿಫೈಡ್ ವಾಹನ
ಪ್ರಜಾವಾಣಿ ಚಿತ್ರ:ಲವ ಕೆ.

ಮನೋಜ್, ಮೀನಾ ಮುನ್ನಡೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ವಿಜಯನಗರ ಮೋಟಾರ್ ಸ್ಪೋರ್ಟ್ಸ್ ಅಕಾಡೆಮಿ 'ಉತ್ಸವ್ ದಿ ಹಂಪಿ' ಅಂಗವಾಗಿ ಆಯೋಜಿಸಿರುವ ಐದನೇ ಆವೃತ್ತಿಯ ಆಫ್ ರೋಡ್ ಚಾಲೆಂಜ್ ರಾಷ್ಟ್ರೀಯ ಮೋಟರ್ ಸ್ಪೋರ್ಟ್ಸ್ ಶನಿವಾರ ಇಲ್ಲಿ ಆರಂಭವಾಗಿದ್ದು, ಮಾಡಿಫೈಡ್ ಡೀಸೆಲ್ ವಿಭಾಗದಲ್ಲಿ ಮನೋಜ್ ಬಿರಾದಾರ ಮತ್ತು ಸಹಚಾಲಕ ಮುಜ್ಜು ಜೋಡಿಯು 295 ಪಾಯಿಂಟ್ ಗಳಿಸಿ, ಮುಂಚೂಣಿಯಲ್ಲಿದ್ದಾರೆ.

ಸ್ಟಾಕ್ ಪೆಟ್ರೋಲ್ ವಿಭಾಗದಲ್ಲಿ ಎಲ್ಲಾ 3 ಹಂತಗಳಲ್ಲಿ ಪ್ರತಾಪ್ ರಾಜೇಂದ್ರ ಕರಾಡಕರ್ ಮತ್ತು ಕಾಳಿದಾಸ ಡೋಂಗ್ರೆ (300) ಅಗ್ರಸ್ಥಾನದಲ್ಲಿದ್ದರೆ, ಸ್ಟಾಕ್ ಡೀಸೆಲ್ ವಿಭಾಗದಲ್ಲಿ ಆದಿನಾರಾಯಣ ಗೌಡ ಮತ್ತು ಶಿಖಿನ್ ದುಂಗವತ್ (274) ಮುನ್ನಡೆಯಲ್ಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಮೀನಾ ಶ್ರೀಕಾಂತ್ ಮತ್ತು ಅಭಿನಂದಾ ಅವರು ಮೂರೂ ಹಂತಗಳಲ್ಲಿ (300) ಅಗ್ರಸ್ಥಾನದಲ್ಲಿ ಇದ್ದಾರೆ.

ಇತರ ಫಲಿತಾಂಶ: ಥಾರ್ 2020– ಆದರ್ಶ್ ಮತ್ತು ಚಂದ್ರಮೌಳಿ (295), ಮಾಡಿಫೈಡ್ ಪೆಟ್ರೋಲ್– ಡಾ. ಗಿರೀಶ ಪಾಟೀಲ ಮತ್ತು ಮಾದೇವ್ ಕಾವಟೇಕರ್ (200), ಜಿಮ್ಮಿ– ಸಾಬು ಮತ್ತು ರಾಜೀವ್ ಲಾಲ್ (290).

ಹೊಸಪೇಟೆ ಸಮೀಪದ ಕಾರಿಗನೂರು ಪ್ರದೇಶದಲ್ಲಿ ತಗ್ಗು ದಿಣ್ಣೆಗಳು ಇರುವ ಜಾಗದಲ್ಲಿ ನಿರ್ಮಿಸಿದ್ದ ಮೂರು ಟ್ರ್ಯಾಕ್ ಹಾಗೂ ರಾಜಪುರದ ಬೆಟ್ಟ ಪ್ರದೇಶಗಳಲ್ಲಿ ಸ್ಪರ್ಧೆ ನಡೆದವು. ಪ್ರೊ ಮಾಡಿಫೈಡ್, ಮಾಡಿಫೈಡ್ ಹಾಗೂ ಸ್ಟಾಕ್ ವಿಭಾಗಗಳಲ್ಲಿ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ಸ್ಪರ್ಧೆಗಳನ್ನು ಆಯೋಜಿಸಲಾಯಿತು.

ಅಪಘಾತ: ಕ್ರಿಕೆಟಿಗ ಮುಶೀರ್‌ಗೆ ಗಾಯ

ಲಖನೌ (ಪಿಟಿಐ): ಭಾರತದ ಬ್ಯಾಟರ್ ಸರ್ಫರಾಜ್ ಖಾನ್ ಅವರ ಸೋದರನಾಗಿರುವ ಮುಂಬೈ ತಂಡದ ಆಲ್‌ರೌಂಡರ್ ಮುಶೀರ್ ಖಾನ್ ಅವರು ನಗರದ ಹೊರವಲಯದಲ್ಲಿ ಗುರುವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದಾರೆ. ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಆದರೆ 19 ವರ್ಷದ ಬ್ಯಾಟರ್, ಕಡೇಪಕ್ಷ ಮೂರು ತಿಂಗಳು ಕ್ರಿಕೆಟ್‌ನಿಂದ ಹೊರಗಿರಬೇಕಾಗಬಹುದು. ಅವರ ಕುತ್ತಿಗೆಗೆ ಗಾಯಗಳಾಗಿವೆ. ಇರಾನಿ ಕಪ್, ಮುಂಬೈ ತಂಡದ ಕೆಲವು ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯಗಳನ್ನೂ ಅವರು ಕಳೆದುಕೊಳ್ಳಲಿದ್ದಾರೆ. ಇರಾನಿ ಟ್ರೋಫಿ ಅ.1ರಿಂದ 5ರವರೆಗೆ ಲಖನೌದಲ್ಲಿ ನಿಗದಿಯಾಗಿತ್ತು.

ಪೂರ್ವಾಂಚಲ ಎಕ್ಸ್‌ಪ್ರೆಸ್‌ವೇ ಮೂಲಕ ಲಖನೌದಿಂದ ಅಜಂಗಢಕ್ಕೆ ಕಾರಿನಲ್ಲಿ ಹೋಗುತ್ತಿದ್ದ ವೇಳೆ ಕಾರು ರಸ್ತೆ ವಿಭಜಕಕ್ಕೆ ಹೊಡೆದು, ಉರುಳಿಬಿದ್ದಿದೆ. ಅವರ ತಂದೆ ನೌಶಾದ್ ಖಾನ್ ಅವರಿಗೆ ತರಚಿದ ಗಾಯಗಳಾಗಿವೆ.

ಅಂಧರ ವಿಶ್ವ ಚೆಸ್: ಶ್ರೇಯಾಂಕಿತರ ಮುನ್ನಡೆ

ಬೆಂಗಳೂರು: ಶ್ರೇಯಾಂಕ ಆಟಗಾರರು, ಶನಿವಾರ ಇಲ್ಲಿ ಆರಂಭವಾದ 12ನೇ ಐಬಿಸಿಎ ವಿಶ್ವ ಜೂನಿಯರ್ ಮತ್ತು ಮಹಿಳಾ ಚಾಪಿಯನ್ ಷಿಪ್‌ನಲ್ಲಿ ನಿರೀಕ್ಷೆಯಂತೆ ಮುನ್ನಡೆ ಸಾಧಿಸಿದರು.



ಮಿಶಾಲ್ ರೇಸಿಸ್

ಜೂನಿಯರ್ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ರೇಸಿಸ್ ಮೈಕೆಲ್ (ಪೋಲೆಂಡ್), ಭಾರತ ಅಶ್ವಿನ್ ರಾಜೇಶ್ ಅವರನ್ನು ಮಣಿಸಿದರು. ಎರಡನೇ ಬೋರ್ಡ್‌ನಲ್ಲಿ ಸಾಲೊಮನ್ ಜೂಲಿಯಾ (ಪೋಲೆಂಡ್), ಭಾರತದ ಸ್ಯಾಮ್ ಪೆನಿಯಲ್ ಮೇಲೆ ಜಯಗಳಿಸಿದರು. ಈ ವಿಭಾಗದಲ್ಲಿ ಕಣದಲ್ಲಿರುವ ಏಕೈಕ ಮಹಿಳಾ ಸ್ಪರ್ಧಿ ಜೂಲಿಯಾ ಆರಂಭ ದಲ್ಲೇ ಮೇಲುಗೈ ಸಾಧಿಸಿ 17ನೇ ನಡೆಯಲ್ಲಿ ಗೆಲುವು ಖಚಿತಪಡಿಸಿಕೊಂಡರು.

ಮಹಿಳೆಯರ ವಿಭಾಗದಲ್ಲೂ ಹಾಲಿ ಚಾಂಪಿಯನ್ ಮತ್ತು ಅಗ್ರ ಶ್ರೇಯಾಂಕದ ಆಟಗಾರ್ತಿ ಸಿಲ್ವ್‌ಝೋವಾ ಲುಬೊವ್ ಮೊದಲ ಪಂದ್ಯ ಗೆದ್ದರು.

ಕಾನ್ಪುರ ಟೆಸ್ಟ್: ಎರಡನೇ ದಿನದಾಟ ರದ್ದು

ಮುಂದುವರಿದ ಮಳೆ; ನಡೆಯದ ಆಟ

ಪ್ರಜಾವಾಣಿ ವಾರ್ತೆ



ಕಾನ್ಪುರದ ಗ್ರೀನ್‌ಪಾರ್ಕ್ ಕ್ರೀಡಾಂಗಣದಲ್ಲಿ ಮಳೆಯಿಂದ ಪಿಚ್ ರಕ್ಷಿಸಲು ಸಿಬ್ಬಂದಿ ಹೊದಿಕೆ ಹಾಕಿದರು

ಕಾನ್ಪುರ: ಶನಿವಾರವೂ ಮಳೆಯ ಆಟ ಮುಂದುವರಿಯಿತು. ಇದರಿಂದ ಭಾರತ ಮತ್ತು ಬಾಂಗ್ಲಾದೇಶ ನಡುವಣ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯದ ಎರಡನೇ ದಿನದಾಟವು ಮುಳುಗಿಹೋಯಿತು.

ಮೊದಲ ದಿನವಾದ ಶುಕ್ರವಾರ ಕೇವಲ 35 ಓವರ್‌ಗಳ ಆಟ ನಡೆದಿತ್ತು. ಕಳೆದ ರಾತ್ರಿ ಪಿಚ್ ಮತ್ತು ಹೊರಾಂಗಣಕ್ಕೆ ಹಾಕಿದ್ದ ಹೊದಿಕೆಗಳನ್ನು ತೆಗೆಯಲಿಲ್ಲ. ದಿನದಾಟದ ಆರಂಭದ ಸಮಯಕ್ಕಿಂತ ಸುಮಾರು ಒಂದು ತಾಸು ಮುನ್ನವೇ ಭಾರತ ಮತ್ತು ಬಾಂಗ್ಲಾ ಆಟಗಾರರು ಮೈದಾನಕ್ಕೆ ಬಂದರು.

ಆದರೆ ಬೆಳಿಗ್ಗೆ 9.30ರ ಸುಮಾರಿಗೆ ಜೋರಾಗಿ ಮಳೆ ಸುರಿಯಿತು. ಈ ಸಂದರ್ಭದಲ್ಲಿ ಉಭಯ ತಂಡಗಳ ಆಟಗಾರರಿಗೆ ಹೋಟೆಲ್‌ಗೆ ಮರಳಿ ವಿಶ್ರಾಂತಿ ಪಡೆಯುವ ಅವಕಾಶವನ್ನು ನೀಡಲಾಯಿತು. ಮಳೆ ಮತ್ತು ಮೈದಾನದಲ್ಲಿ ಮೂಲಸೌಲಭ್ಯಗಳ ಕೊರತೆಯಿಂದಾಗಿ ಆಟಗಾರರೂ ಹೋಟೆಲ್‌ಗೆ ಮರಳುವ ಆಯ್ಕೆಯನ್ನೇ ಆರಿಸಿಕೊಂಡರು. ಒಂದೊಮ್ಮೆ ಪರಿಸ್ಥಿತಿ ಸುಧಾರಿಸಿದರೆ ಪಂದ್ಯ ಆಡಲು ಅವರು ಕ್ರೀಡಾಂಗಣಕ್ಕೆ ಬರುವ ನಿರೀಕ್ಷೆ ಇತ್ತು. ಆದರೆ ಅದು ಈಡೇರಲೇ ಇಲ್ಲ. ಏಕೆಂದರೆ ಇಲ್ಲಿಯ ಸ್ಥಿತಿ ಸುಧಾರಣೆಯಾಗಲಿಲ್ಲ. ಮಧ್ಯಾಹ್ನ 2 ಗಂಟೆಗೆ ದಿನದಾಟ ರದ್ದು ಮಾಡಿರುವುದಾಗಿ ಘೋಷಿಸಲಾಯಿತು.

ಭಾರತೀಯ ಹವಾಮಾನ ಇಲಾಖೆಯ ಮಾಹಿತಿಯ ಪ್ರಕಾರ; ಭಾನುವಾರವೂ ಹವಾಮಾನ ಇದೇ ರೀತಿ ಮುಂದುವರಿಯುವ ಸಾಧ್ಯತೆ ಇದೆ. ಮಳೆ ಮೋಡಗಳು ದಟ್ಟವಾಗಿ ಆವರಿಸಲಿದ್ದು, ಒಂದೆರಡು ಸಲ ಮಳೆಯಾಗಬಹುದು. ಶನಿವಾರ ರಾತ್ರಿಯೂ ಮಳೆ ಜೋರಾಗಿ ಸುರಿಯಲಿದೆ ಎಂದೂ ಇಲಾಖೆ ತಿಳಿಸಿದೆ.

ಇದರಿಂದಾಗಿ ಬಹಳ ದಿನಗಳ ನಂತರ ಗ್ರೀನ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯ ವೀಕ್ಷಿಸಲು ಬಂದ ಪ್ರೇಕ್ಷಕರಿಗೆ ನಿರಾಶೆಯಾಗಿದೆ.

ಇಂಪ್ಯಾಕ್ಟ್ ಪ್ಲೇಯರ್ ಮುಂದುವರಿಕೆ

ಬೆಂಗಳೂರು(ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಬಹಳಷ್ಟು ಚರ್ಚೆಗೆ ಗ್ರಾಸವಾಗಿದ್ದ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಮುಂದಿನ ವರ್ಷದ ಟೂರ್ನಿಯಲ್ಲಿಯೂ ಮುಂದುವರಿಸಲು ನಿರ್ಧರಿಸಲಾಗಿದೆ.

ಶನಿವಾರ ಇಲ್ಲಿ ನಡೆದ ಐಪಿಎಲ್ ಆಡಳಿತ ಮಂಡಳಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. 2023ರ ಐಪಿಎಲ್ ಟೂರ್ನಿಯಲ್ಲಿ ಈ ನಿಯಮವನ್ನು ಜಾರಿ ಮಾಡಲಾಗಿತ್ತು.

ಆದರೆ ಹೋದ ವರ್ಷದ ಟೂರ್ನಿಯ ಸಂದರ್ಭದಲ್ಲಿ ಈ ಟೂರ್ನಿಗೆ ಕೆಲವು ಆಟಗಾರರು ಆಕ್ಷೇಪ ವ್ಯಕ್ತಪಡಿಸಿದ್ದರು. ಇನ್ನೂ ಕೆಲವರು ನಿಯಮದ ಪರವಾಗಿ ಮಾತನಾಡಿದ್ದರು. ಕಳೆದ ಜುಲೈನಲ್ಲಿ ನಡೆದಿದ್ದ ಫ್ರ್ಯಾಂಚೈಸಿ ಮಾಲೀಕರ ಸಭೆಯಲ್ಲಿಯೂ ಪರ–ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿದ್ದವು.

'ಇಂಪ್ಯಾಕ್ಟ್ ಪ್ಲೇಯರ್ ನಿಯಮದಿಂದಾಗಿ ಆಲ್‌ರೌಂಡರ್‌ಗಳ ಮಹತ್ವ ಕಡಿಮೆಯಾಗಿದೆ' ಎಂದು ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರು.

'ಈ ನಿಯಮವನ್ನು ರದ್ದು ಮಾಡಲು ಸಮಂಜಸವಾದ ಕಾರಣ ಕಾಣುತ್ತಿಲ್ಲ. ಐಪಿಎಲ್ ಪಂದ್ಯಗಳಲ್ಲಿ ಹೊಸ ಆಯಾಮ ನೀಡುವಲ್ಲಿ ಇದು ಸಹಕಾರಿಯಾಗಿದೆ. ಪ್ರೇಕ್ಷಕರಿಗೂ ಇದು ಮನರಂಜನೆ ನೀಡುತ್ತಿದೆ' ಎಂದು ಸಭೆಯ ನಂತರ ಸದಸ್ಯರೊಬ್ಬರು ಮಾಹಿತಿ ನೀಡಿದರು.

ಬಿಸಿಸಿಐ ವಾರ್ಷಿಕ ಸಭೆ ಇಂದು

ಬೆಂಗಳೂರು(ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ 93ನೇ ವಾರ್ಷಿಕ ಸರ್ವಸದಸ್ಯರ ಸಭೆ ಭಾನುವಾರ ಇಲ್ಲಿ ನಡೆಯಲಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸಭೆಗೆ ಭಾರತದ ಇಬ್ಬರು ಪ್ರತಿನಿಧಿಗಳ ಆಯ್ಕೆ ಮಾಡಲಾಗುವುದು.

ಜಕ್ಕೂರು ಸಮೀಪ ನಿರ್ಮಾಣವಾಗಿರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ನೂತನ ಕಟ್ಟಡ ಹಾಗೂ ಸೌಲಭ್ಯಗಳ ಉದ್ಘಾಟನೆ ಭಾನುವಾರ ನಡೆಯಲಿದೆ. ಈ ಸಂದರ್ಭದಲ್ಲಿ ದೇಶದ ಪ್ರಮುಖ ಕ್ರಿಕೆಟಿಗರು ಆಗಮಿಸಲಿದ್ದಾರೆ. ಈ ಸಂದರ್ಭದಲ್ಲಿ ವಾರ್ಷಿಕ ಸಭೆಯನ್ನೂ ಆಯೋಜಿಸಲಾಗಿದೆ. ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ಐಸಿಸಿ ಮುಖ್ಯಸ್ಥರಾಗಿ ಅಯ್ಕೆಯಾಗಿದ್ದು ಡಿಸೆಂಬರ್ 1ರಂದು ತೆರಳಲಿದ್ದಾರೆ. ಆದ್ದರಿಂದ ಬಿಸಿಸಿಐ ಕಾರ್ಯದರ್ಶಿ ಹುದ್ದೆಯು ತೆರವಾಗಲಿದೆ. ಹೊಸ ಕಾರ್ಯದರ್ಶಿ ನೇಮಕದ ಕುರಿತು ಬೆಂಗಳೂರು ಸಭೆಯ ವಿಷಯಸೂಚಿಯಲ್ಲಿ ಉಲ್ಲೇಖವಾಗಿಲ್ಲ.

ಮುಂದಿನ ತಿಂಗಳು ದುಬೈನಲ್ಲಿ ನಡೆಯಲಿರುವ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿ ವೇಳೆ ಐಸಿಸಿ ವಾರ್ಷಿಕ ಸರ್ವ ಸದಸ್ಯರ ಸಭೆ (ಎಜಿಎಂ) ನಡೆಯುವುದರಿಂದ ಬೆಂಗಳೂರಿನ ಬಿಸಿಸಿಐ ಸಭೆಗೆ ಮಹತ್ವ ಬಂದಿದೆ. ಸೌರವ್ ಗಂಗೂಲಿ ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಐಸಿಸಿಯಲ್ಲಿ ಬಿಸಿಸಿಐಯನ್ನು ಪ್ರತಿನಿಧಿಸುತ್ತಿದ್ದರು. ಅವರು ಅಧ್ಯಕ್ಷ ಹುದ್ದೆಯಿಂದ ಕೆಳಗಿಳಿದ ನಂತರ ಜಯ್ ಶಾ ಅವರು ಐಸಿಸಿ ಸಭೆಯಲ್ಲಿ ಪ್ರತಿನಿಧಿಸುತ್ತಿದ್ದರು. ಹೋದ ಜುಲೈನಲ್ಲಿ ಕೊಲಂಬೊದಲ್ಲಿ ನಡೆದ ಸಭೆಯಲ್ಲಿ ಜಯ್ ಶಾ ಭಾಗವಹಿಸಿದ್ದರು.

ಬ್ಯಾಸ್ಕೆಟ್‌ಬಾಲ್: ಮೈಸೂರು, ಬೀಗಲ್ಸ್‌ಗೆ ಜಯ

ಬೆಂಗಳೂರು: ಮೈಸೂರು ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಕ್ಲಬ್ ಮತ್ತು ಬೀಗಲ್ಸ್ ಕ್ಲಬ್ ತಂಡಗಳು ಕ್ರಮವಾಗಿ ಇಲ್ಲಿ ನಡೆಯುತ್ತಿರುವ ರಾಜ್ಯ ಯೂತ್ (16 ವರ್ಷದೊಳಗಿನವರು) ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಜಯಿಸಿದವು.

ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಶ್ರಯದಲ್ಲಿ ಕಂಠೀರವ ಕ್ರೀಡಾಂ ಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶನಿವಾರ ನಡೆದ ಬಾಲಕರ ವಿಭಾಗದ ಪಂದ್ಯದಲ್ಲಿ ಮೈಸೂರು ತಂಡವು 53–44 (32–22) ರಿಂದ ಯಲಹಂಕ ನ್ಯೂಟೌನ್ ಕ್ಲಬ್ ವಿರುದ್ಧ ಗೆದ್ದಿತು.

ಫಲಿತಾಂಶಗಳು: ಬಾಲಕರು: ಬಿ.ಸಿ.ಬಿ.ಸಿ 70–18ರಲ್ಲಿ ಬೆಂಗಳೂರು ಸ್ಪೋರ್ಟಿಂಗ್ 18 ವಿರುದ್ಧ; ಯಂಗ್ ಒರಿಯನ್ಸ್‌ಗೆ 65–51 ರಲ್ಲಿ ವಿಮಾನಪುರ ತಂಡದ ವಿರುದ್ಧ; ದಕ್ಷಿಣ ಕನ್ನಡ ಜಿಲ್ಲೆಗೆ 53 –46ರಲ್ಲಿ ರಾಜಕುಮಾರ್ ಬಿ.ಸಿ ವಿರುದ್ಧ; ಹಾಸನ ಜಿಲ್ಲಾ ತಂಡಕ್ಕೆ 45 –21ರಲ್ಲಿ ಹಲಸೂರು ವಿರುದ್ಧ; ದಾವಣಗೆರೆ ಜಿಲ್ಲಾ ತಂಡಕ್ಕೆ 55–39ರಲ್ಲಿ ದೇವಾಂಗ ಯೂನಿಯನ್ ವಿರುದ್ಧ; ಹೆಬ್ಬಾಳ ಬಿ.ಸಿ. ತಂಡಕ್ಕೆ 60–35ರಲ್ಲಿ ಬೀದರ್ ವಿರುದ್ಧ ಜಯ.

ಬಾಲಕಿಯರು: ಮೌಂಟ್ಸ್ ಕ್ಲಬ್‌ಗೆ 74–14ರಲ್ಲಿ ಬೆಂಗಳೂರು ಸ್ಪೋರ್ಟಿಂಗ್ ವಿರುದ್ಧ; ಸಿಜೆಸಿಗೆ 43–17ರಲ್ಲಿ ಕೋರಮಂಗಲ ಕ್ಲಬ್ ವಿರುದ್ಧ; ಮಂಡ್ಯ ಜಿಲ್ಲಾ ತಂಡಕ್ಕೆ 43 –28ರಲ್ಲಿ ವಿಜಯಪುರ ಜಿಲ್ಲಾ ತಂಡದ ವಿರುದ್ಧ; ಒರಿಯನ್ಸ್ ಕ್ಲಬ್‌ಗೆ 2–25ರಲ್ಲಿ ಸದರ್ನ್ ಬ್ಲ್ಯೂಸ್ ವಿರುದ್ಧ; ಡಿವೈಇಎಸ್ ವಿದ್ಯಾನಗರ ತಂಡಕ್ಕೆ 54–43ರಲ್ಲಿ ಎಂ.ಸಿ.ಎಚ್.ಎಸ್ ವಿರುದ್ಧ; ಹಾಸನ ಜಿಲ್ಲಾ ತಂಡಕ್ಕೆ 35–27ರಲ್ಲಿ ಎಂಎನ್‌ಕೆ ರಾವ್ ಪಾರ್ಕ್ ವಿರುದ್ಧ ಜಯ. ಎಚ್‌ಬಿಆರ್ ತಂಡವು 40–9ರಿಂದ ಕೋರಮಂಗಲ ಸ್ಪೋರ್ಟ್ಸ್ ಕ್ಲಬ್ ವಿರುದ್ಧ ಜಯಗಳಿಸಿತು.

ಸಿನ್ನರ್‌ಗೆ ಕ್ಲೀನ್‌ಚಿಟ್ ಪ್ರಶ್ನಿಸಿ ಮೇಲ್ಮನವಿ

ರೋಮ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಟೆನಿಸಿಗ ಯಾನಿಕ್ ಸಿನ್ನರ್ ಅವರ ಉದ್ದೀಪನ ಮದ್ದುಸೇವನೆ ಪ್ರಕರಣ ಮರುಜೀವ ಪಡೆದಿದೆ.



ಯಾನಿಕ್ ಸಿನ್ನರ್

ಇಟಲಿಯ ಆಟಗಾರರನ್ನು ದೋಷ ಮುಕ್ತಗೊಳಿಸಿರುವುದರ ವಿರುದ್ಧ ವಿಶ್ವ ಉದ್ದೀಪನ ಮದ್ದುಸೇವನೆ ತಡೆ ಏಜನ್ಸಿ (ವಾಡಾ) ಗುರುವಾರ ಮೇಲ್ಮನವಿ ಸಲ್ಲಿಸಿದ್ದು, ಒಂದರಿಂದ ಎರಡು ವರ್ಷ ನಿಷೇಧ ಹೇರಬೇಕೆಂದು ಮನವಿಯಲ್ಲಿ ತಿಳಿಸಿದೆ.

ಕಳೆದ ಮಾರ್ಚ್‌ನಲ್ಲಿ ಅವರು ಎರಡು ಬಾರಿ ನಿಷೇಧಿತ ಮದ್ದುಗಳ ಪಟ್ಟಿಯಲ್ಲಿರುವ ಅನಬಾಲಿಕ್ ಸ್ಟಿರಾಯಿಡ್ 'ಕ್ಲೊಸ್ಟೆಬಾಲ್' ಸೇವನೆ ಮಾಡಿರುವುದು ಡೋಪಿಂಗ್ ಪರೀಕ್ಷೆಯಲ್ಲಿ ಪತ್ತೆಯಾಗಿತ್ತು.

ಆದರೆ ಈ ಪ್ರಕರಣದಲ್ಲಿ, 'ಗಾಯಕ್ಕೆ ಆರೈಕೆ ನೀಡುವ ಸಂದರ್ಭದಲ್ಲಿ ಫಿಸಿಯೊಥೆರಪಿಸ್ಟ್ ಅವರಿಂದಾಗಿ ಈ ಮದ್ದು ತಮ್ಮ ದೇಹ ಸೇರಿದೆ' ಎಂಬ ಸಿನ್ನರ್ ಅವರ ಹೇಳಿಕೆಯನ್ನು ಅಂತರ ರಾಷ್ಟ್ರೀಯ ಟೆನಿಸ್ ಇಂಟಗ್ರಿಟಿ ಏಜನ್ಸಿ (ಐಟಿಐಎ) ಒಪ್ಪಿಕೊಂಡಿತ್ತು. 'ಪ್ರಕರಣದಲ್ಲಿ ಸಿನ್ನರ್ ಅವರ ತಪ್ಪಿಲ್ಲ ಅಥವಾ ನಿರ್ಲಕ್ಷ್ಯ ಇಲ್ಲ' ಎಂದು ಹೇಳಿ ಅವರನ್ನು ದೋಷಮುಕ್ತಗೊಳಿಸಿತ್ತು. ಇದರ ವಿರುದ್ಧ ವಾಡಾ ಈಗ ಅಂತರರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿಗೆ (ಸಿಎಎಸ್) ಮೇಲ್ಮನವಿ ಸಲ್ಲಿಸಿದೆ.

23 ವರ್ಷದ ಸಿನ್ನರ್, ಈ ತಿಂಗಳ ಆರಂಭದಲ್ಲಿ ತಮ್ಮ ಎರಡನೇ ಪ್ರಮುಖ ಪ್ರಶಸ್ತಿಯಾಗಿ ಅಮೆರಿಕ ಓಪನ್ ಕೂಡ ಗೆದ್ದುಕೊಂಡಿದ್ದಾರೆ.

ಟಿ20 ಸರಣಿಗೆ ಮಯಂಕ್ ಯಾದವ್

ನವದೆಹಲಿ (ಪಿಟಿಐ): ಹೋದ ಐಪಿಎಲ್‌ನಲ್ಲಿ ಸಂಚಲನ ಸೃಷ್ಟಿಸಿದ್ದ ವೇಗಿ ಮಯಂಕ್ ಯಾದವ್ ಅವರನ್ನು ಬಾಂಗ್ಲಾದೇಶ ಎದುರಿನ ಟಿ20 ಕ್ರಿಕೆಟ್ ಸರಣಿಯಲ್ಲಿ ಆಡುವ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಐಪಿಎಲ್ ಟೂರ್ನಿಯಲ್ಲಿಯೇ ಗಾಯಗೊಂಡಿದ್ದ ಅವರು ಕಳೆದ ಐದು ತಿಂಗಳು ವಿಶ್ರಾಂತಿಯಲ್ಲಿದ್ದರು. ಇದೀಗ ಸಂಪೂರ್ಣ ಫಿಟ್ ಆಗಿ ಮರಳಿದ್ದಾರೆ.



ಮಯಂಕ್ ಯಾದವ್

ಅಕ್ಟೋಬರ್ 6ರಿಂದ ನಡೆಯಲಿರುವ ಮೂರು ಟಿ20 ಪಂದ್ಯಗಳ ಸರಣಿಯಲ್ಲಿ ಆಡಲಿರುವ ಆತಿಥೇಯ ತಂಡವನ್ನು ಸೂರ್ಯಕುಮಾರ್ ಯಾದವ್ ಮುನ್ನಡೆಸಲಿದ್ದಾರೆ. ಸ್ಪಿನ್ನರ್ ವರುಣ್ ಚಕ್ರವರ್ತಿ, ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರು ಅವಕಾಶ ಗಿಟ್ಟಿಸಿದ್ದಾರೆ.

ತಂಡ: ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ರಿಂಕು ಸಿಂಗ್, ಹಾರ್ದಿಕ್ ಪಾಂಡ್ಯ, ರಿಯಾನ್ ಪರಾಗ್, ನಿತೀಶ್ ಕುಮಾರ್ ರೆಡ್ಡಿ, ಶಿವಂ ದುಬೆ,ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ವರುಣ್ ಚಕ್ರವರ್ತಿ, ಜಿತೇಶ್ ಶರ್ಮಾ (ವಿಕೆಟ್‌ಕೀಪರ್), ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ, ಮಯಂಕ್ ಯಾದವ್.

2–0 ಗೆಲುವಿನತ್ತ ಲಂಕಾ ದಾಪುಗಾಲು

ನ್ಯೂಜಿಲೆಂಡ್ ತಂಡಕ್ಕೆ ಫಾಲೋ ಆನ್ • ಮಿಂಚಿದ ಪ್ರಭಾತ್



ಪ್ರಭಾತ್ ಜಯಸೂರ್ಯ
ಚಿತ್ರ: ಎಪಿ/ಪಿಟಿಐ

ಗಾಲೆ (ರಾಯಿಟರ್ಸ್): ಪ್ರಭಾತ್ ಜಯಸೂರ್ಯ ಮತ್ತು ನಿಶಾನ್ ಪೀರಿಸ್ ಅವರ ಸ್ಪಿನ್ ದಾಳಿಗೆ ಕುಸಿದ ನ್ಯೂಜಿಲೆಂಡ್ ಎರಡನೇ ಟೆಸ್ಟ್‌ನಲ್ಲೂ ಸೋಲಿನ ಹಾದಿಯಲ್ಲಿದೆ. ಫಾಲೊಆನ್‌ಗೆ ಒಳಗಾದ ನ್ಯೂಜಿಲೆಂಡ್ ಎರಡನೇ ಇನಿಂಗ್ಸ್‌ನಲ್ಲೂ ಅರ್ಧದಷ್ಟು ವಿಕೆಟ್‌ಗಳನ್ನು ಕಳೆದುಕೊಂಡು 199 ರನ್ ಗಳಿಸಿದೆ. ಇನಿಂಗ್ಸ್ ಸೋಲು ತಪ್ಪಿಸಲು ಇನ್ನೂ 315 ರನ್ ದೂರವಿದೆ.

ಎರಡನೇ ಟೆಸ್ಟ್ ಪಂದ್ಯದ ಮೂರನೇ ದಿನ 13 ವಿಕೆಟ್‌ಗಳು ಬಿದ್ದವು. ಶ್ರೀಲಂಕಾದ 5 ವಿಕೆಟ್‌ಗೆ 602 ರನ್‌ಗಳಿಗೆ (ಡಿಕ್ಲೇರ್ಡ್) ಉತ್ತರವಾಗಿ ಶುಕ್ರವಾರ 2 ವಿಕೆಟ್‌ಗೆ 20 ರನ್ ಗಳಿಸಿದ್ದ ನ್ಯೂಜಿಲೆಂಡ್ ಶನಿವಾರ ಭೋಜನಕ್ಕೆ ಮೊದಲೇ 88 ರನ್‌ಗಳಿಗೆ ಕುಸಿಯಿತು. ಫಾಲೊ ಆನ್‌ಗೆ ಒಳಗಾದ ಟಿಮ್ ಸೌಥಿ ಬಳಗ ಎರಡನೇ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗೆ 199 ರನ್ ಗಳಿಸಿದೆ. ಮಂದ ಬೆಳಕು ಮತ್ತು ಮಳೆಯಿಂದ ಬೇಗನೇ ಕೊನೆಗೊಂಡಿತು. ಶ್ರೀಲಂಕಾ ಈಗ 2–0 ಸರಣಿ ವಿಜಯದ ಹಾದಿಯಲ್ಲಿದೆ.

ಎಡಗೈ ಸ್ಪಿನ್ನರ್ ಪ್ರಭಾತ್ ಜಯಸೂರ್ಯ (42ಕ್ಕೆ6) ಮತ್ತು ಆಫ್ ಸ್ಪಿನ್ನರ್ ನಿಶಾನ್ ಪೀರಿಸ್ (33ಕ್ಕೆ3) ಅವರು ನ್ಯೂಜಿಲೆಂಡ್ ಮೊದಲ ಇನಿಂಗ್ಸ್ ಕುಸಿತಕ್ಕೆ ಕಾರಣರಾದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 5 ವಿಕೆಟ್‌ಗೆ 602 ಡಿಕ್ಲೇರ್; ನ್ಯೂಜಿಲೆಂಡ್: 39.5 ಓವರುಗಳಲ್ಲಿ 88 (ಮಿಚೆಲ್ ಸ್ಯಾಂಟ್ನರ್ 29; ನಿಶಾನ್ ಪೀರಿಸ್ 33ಕ್ಕೆ3, ಪ್ರಭಾತ್ ಜಯಸೂರ್ಯ 42ಕ್ಕೆ6), ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 41 ಓವರುಗಳಲ್ಲಿ 5 ವಿಕೆಟ್‌ಗೆ 199 (ಡೆವಾನ್ ಕಾನ್ವೆ 61, ಕೇನ್ ವಿಲಿಯಮ್ಸನ್ 46, ಟಾಮ್ ಬ್ಲಂಡೆಲ್ ಔಟಾಗದೇ 47, ಗ್ಲೆನ್ ಫಿಲಿಪ್ಸ್ ಔಟಾಗದೇ 32; ನಿಶಾನ್ ಪೀರಿಸ್ 91ಕ್ಕೆ3).

ಬಾಗಲಕೋಟೆ: ಶ್ರವಣದೋಷವುಳ್ಳವರ ರಾಜ್ಯಮಟ್ಟದ 14ನೇ ಕ್ರೀಡಾಕೂಟ

ಶಿವರಾಜ್, ರಕ್ಷಿತಾ ವೇಗದ ಓಟಗಾರರು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ದಾವಣಗೆರೆ ಶಿವರಾಜ್, ಮೈಸೂರಿನ ರಕ್ಷಿತಾ.ಎಂ ಇಲ್ಲಿ ನಡೆಯುತ್ತಿರುವ ಶ್ರವಣದೋಷವುಳ್ಳವರ ರಾಜ್ಯ ಕ್ರೀಡಾಕೂಟದ 100 ಮೀ ಓಟದಲ್ಲಿ ಮೊದಲ ಸ್ಥಾನ ಗಳಿಸಿದರು.

ಕರ್ನಾಟಕ ಶ್ರವಣದೋಷವುಳ್ಳವರ ಕ್ರೀಡಾ ಒಕ್ಕೂಟ, ಬಾಗಲಕೋಟೆ ಜಿಲ್ಲಾ ಶ್ರವಣದೋಷವುಳ್ಳವರ ಸಂಘದ ಸಹಯೋಗದಲ್ಲಿ ಶನಿವಾರ ಬಸವೇಶ್ವರ ಪ್ರೌಢಶಾಲೆ ಮೈದಾನದಲ್ಲಿ ಕ್ರೀಡಾಕೂಟ ಆಯೋಜಿಸಲಾಗಿತ್ತು. ಈ ಕೂಟದ ಪ್ರತಿಯೊಂದು ವಿಭಾಗದಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದವರು:

ಪುರುಷರು: 5 ಸಾವಿರ ಮೀ.ಓಟ: ಅಕ್ಷಯ ಮುಗಳಿ (ಮೈಸೂರು), ಮಹಾಂತೇಶಯ್ಯ ಎಸ್. (ಬಾಗಲಕೋಟೆ), ರಾಹುಲ್ ಹೆರವಾಡೆ (ಬೆಳಗಾವಿ). ಜಾವಲಿನ್ ಥ್ರೋ: ಅನುಷ ನಾಯಕ (ದಕ್ಷಿಣ ಕನ್ನಡ), ಸೈಯದ್ ಝುಬಿಉಲ್ಲಾ (ತುಮಕೂರ), ಶ್ರೇಯಸ್ ಎಂ. (ಮಂಡ್ಯ). 800 ಮೀ.ಓಟ: ಅವಿನಾಶ ಕೆ.ಎಸ್. (ಚಿಕ್ಕಮಗಳೂರು), ಹರ್ಷ (ಮೈಸೂರು), ಸಲ್ಮಾನ್‌ಖಾನ್ ಕಾಕಡ (ಧಾರವಾಡ). ಲಾಂಗ್‌ಜಂಪ್: ನಿಕ್ಷಿತ್ ಡಿ.ಕೆ. (ಮೈಸೂರು), ಲಿಖಿತ್ ಗೌಡ (ತುಮಕೂರು), ವೆಂಕಟೇಶ ಎಂ.ಎಸ್. (ತುಮಕೂರು).

ಮಹಿಳೆಯರು: ಜಾವಲಿನ್ ಥ್ರೋ: ಸ್ನೇಹಾ (ಬೆಂಗಳೂರು), ನಿಧಿ ಸುಲಾಖೆ (ಧಾರವಾಡ), ಶರಣಮ್ಮ ಪಾಲಕಿ (ವಿಜಯಪುರ).400 ಮೀ.ಓಟ: ಅಲಿಯಾ (ಬೆಂಗಳೂರು), ಶಾಂಭವಿ (ಮೈಸೂರು), ಅಂಕಿತಾ ಮನಗೂಳಿ (ಬೆಳಗಾವಿ). 800 ಮೀ.ಓಟ: ತನುಜಾ (ಬೆಂಗಳೂರು), ಕಾವೇರಿ ಪೂಜೇರಿ (ಬೆಳಗಾವಿ), ಫರ್ಜಾನಾ ಬಾನು (ಬೆಂಗಳೂರು). 18 ವರ್ಷದೊಳಗಿನ ಬಾಲಕರು: 800 ಮೀ.ಓಟ: ಬಾಲಾಜಿ ಎಚ್.ಎಸ್. (ಮಂಡ್ಯ), ಸಂದೀಪ ಕುಮಾರ್ (ಮಂಡ್ಯ), ಅನಿಲ್ ಕುಮಾರ್ (ದಾವಣಗೆರೆ). ಹೈಜಂಪ್: ಗೋವಿಂದರಾಜು ಆರ್. (ತುಮಕೂರು, ಹೊಸ ದಾಖಲೆ), ಲಿಖಿತ್ ಗೌಡ (ತುಮಕೂರು), ವೇದಾಂತ ಗೌಡ (ಮಂಡ್ಯ). 18 ವರ್ಷದೊಳಗಿನ ಬಾಲಕಿಯರು: 800 ಮೀ.ಓಟ: ಜೀವಿತಾ ಎಸ್. (ಮಂಡ್ಯ), ವರ್ಷಿಣಿ ಎಂ. (ಬೆಂಗಳೂರು). ಲಾಂಗ್‌ಜಂಪ್: ಯುಕ್ತಾ ಎನ್.ಪಿ. (ಮೈಸೂರು), ವಲ್ಲೇಪು ಹರ್ಷಿತಾ (ಮೈಸೂರು), ನಯನಾ ಜಿ. (ತುಮಕೂರು). 16 ವರ್ಷದೊಳಗಿನ ಬಾಲಕರು: 400 ಮೀ.ಓಟ: ಶಿವರಾಜ (ದಾವಣಗೆರೆ), ವಿನೋದ (ಮೈಸೂರು), ರಂಗನಾಥ (ದಾವಣಗೆರೆ). 800 ಮೀ.ಓಟ: ಸುನೀಲ ಮಾತಂಗಿ (ಹಾವೇರಿ), ಸೈಯದ್ ಫರಹಾನ್ (ಬೆಂಗಳೂರು), ಫಾರೂಕ್ (ಮಂಡ್ಯ). 100 ಮೀ.ಓಟ: ಶಿವರಾಜ (ದಾವಣಗೆರೆ), ರಂಗನಾಥ (ದಾವಣಗೆರೆ), ಸಿದ್ದು (ಮಂಡ್ಯ). 200 ಮೀ.ಓಟ: ದಯಾನಂದ ತಳವಾರ (ಗದಗ), ಸಿದ್ದು (ಮಂಡ್ಯ), ಪ್ರಜ್ವಲ್ (ದಾವಣಗೆರೆ). 16 ವರ್ಷದೊಳಗಿನ ಬಾಲಕಿಯರು: 800 ಮೀ.ಓಟ: ಕುಸುಮಲತಾ (ಮೈಸೂರು), ಸುಷ್ಮಾ (ಮೈಸೂರು), ವರ್ಷಾ (ದಾವಣಗೆರೆ). 100 ಮೀ.ಓಟ:ರಕ್ಷಿತಾ ಎಂ. (ಮೈಸೂರು), ಭಾಗವಿ ಎಂ. (ದಾವಣಗೆರೆ), ಉಷಾ (ಮಂಡ್ಯ). 200 ಮೀ.ಓಟ: ರಿಶ್ಠಾ ಎಂ. (ಮೈಸೂರು), ಭಾರ್ಗವಿ ಎಂ. (ದಾವಣಗೆರೆ), ಅನುಸೂಯಾ ಯು. (ದಾವಣಗೆರೆ). 14 ವರ್ಷದೊಳಗಿನ ಬಾಲಕರು: ಲಾಂಗ್‌ಜಂಪ್: ವಿಜಯ ಜಡಗಪ್ಪಗೋಳ (ಬೆಳಗಾವಿ), ಇಶಾಂತ ಎ. (ಮೈಸೂರು), ಮೈಲಾರಿ ಬಿ.ಆರ್.(ದಾವಣಗೆರೆ). ಶಾಟ್‌ಪಟ್: ಅಂಜನ್ ಅನೀಶ್ (ಬೆಂಗಳೂರು), ಗಗನಗೌಡ ಎಚ್.ಆರ್. (ಮಂಡ್ಯ), ವಿನಾಯಕ ಹಳ್ಳಿಕೇರಿ (ಧಾರವಾಡ). 14 ವರ್ಷದೊಳಗಿನ ಬಾಲಕಿಯರು: ಲಾಂಗ್‌ಜಂಪ್: ಕೀರ್ತಿ ನಾಗನೂರ (ಬೆಳಗಾವಿ), ಭಾಗ್ಯಶ್ರೀ (ಮೈಸೂರು), ಸವಿತಾ ಕುರಿ (ಬೆಂಗಳೂರು). ಶಾಟ್‌ಪಟ್: ಅಂಜಲಿ (ಧಾರವಾಡ), ನಿಹಾರಿಕಾ (ಮೈಸೂರು), ಪ್ರಿಯಾಂಕಾ ಜಿ. (ಬೆಂಗಳೂರು)